ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 17 ಮಂಗಳವಾರ 2023

ಸಂಪುಟ: 43 | ಸಂಚಿಕೆ: 270 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ನಾಳೆಯಿಂದ ಸುತ್ತೂರು ಜಾತ್ರಾ ಮಹೋತ್ಸವ

● ಪ್ರತಿ ದಿನ ಮೂರು ಲಕ್ಷ ಜನರಿಗೆ ಪ್ರಸಾದದ ವ್ಯವಸ್ಥೆ ● 2,900 ಜೋಡಿ ಸಾಮೂಹಿಕ ವಿವಾಹ, ದನಗಳ ಜಾತ್ರೆ ರದ್ದು
● ಕೃಷಿ, ಗ್ರಾಮೀಣ ಜನರ ಬದುಕಿನ ಚಿತ್ರಣಗಳ ಅನಾವರಣ ● ಧಾರ್ಮಿಕ ಉತ್ಸವದೊಂದಿಗೆ ಮೌಲ್ಯಯುತ ಜನಜೀವನಕ್ಕೆ ಒತ್ತಾಸೆ

ಸುತ್ತೂರು,ಜ.16(ಎಂಟಿವೈ)– ಕೋವಿಡ್–19ರಿಂದಾಗಿ ಕಳೆದ ಎರಡು ವರ್ಷಗಳಿಂದ ಸರಳವಾಗಿ ಆಚರಿಸಲಾಗಿದ್ದ ಸುತ್ತೂರು ಜಾತ್ರಾ ಮಹೋತ್ಸವ ಈ ಬಾರಿ ವಿಜೃಂಭಣೆಯಿಂದ ಜ.18ರಿಂದ 23ರವರೆಗೆ ನಡೆಯಲಿದೆ ಎಂದು ಜೆಎಸ್‌ಎಸ್ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ ಸುತ್ತೂರು ಕ್ಷೇತ್ರದಲ್ಲಿರುವ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾದಿಂದಾಗಿ ಕಳೆದ ಎರಡು ವರ್ಷಗಳಿಂದ ಕೇವಲ ಮಠದ ಪೂಜೆಗೆ ಮಾತ್ರ ಸೀಮಿತವಾಗಿದ್ದ ಸುತ್ತೂರು ಜಾತ್ರಾ ಮಾಹೋತ್ಸವ, ಈ ಬಾರಿ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿದೆ. ಜ.18ರಿಂದ ಜ.23ರವರೆಗೆ ಆರು ದಿನಗಳ ಕಾಲ ನಡೆಯುವ ಜಾತ್ರಾ ಮಾಹೋತ್ಸವದಲ್ಲಿ ವಿವಿಧ ಪಕ್ಷಗಳ ರಾಜಕೀಯ ನಾಯಕರು ಹಾಗೂ ವಿವಿಧ ಸಮುದಾಯದ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ. ಜ.18ರಂದು ಹೊಸಮಠದ ಶ್ರೀ ಚಿದಾನಂದ ಸ್ವಾಮಿ ಹಾಗೂ ಶಂಕರಾಚಾರ್ಯ ಸಂಸ್ಥಾನ ಕಾಸರಗೋಡಿನ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಂದ ಜಾತ್ರೆಗೆ ಚಾಲನೆ ದೊರೆಯಲಿದೆ ಎಂದು ಹೇಳಿದರು.

ಜಾತ್ರಾ ಮಾಹೋತ್ಸವದಲ್ಲಿ ಸಾಮೂಹಿಕ ವಿವಾಹ, ಹಾಲ್ಹರವಿ ಉತ್ಸವ, ರಥೋತ್ಸವ, ಮಹದೇಶ್ವರ ಕೊಂಡೋತ್ಸವ, ಲಕ್ಷದೀಪೋತ್ಸವ, ತೆಪ್ಪೋತ್ಸವ, ಭಜನಾ ಮೇಳ, ವೀರಭದ್ರ ಕೊಂಡೋತ್ಸವ, ವಸ್ತುಪ್ರದರ್ಶನ, ಕೃಷಿ ಮೇಳ, ಸಿರಿಧಾನ್ಯ ಮೇಳ, ಸಾಂಸ್ಕೃತಿಕ ಉತ್ಸವ, ಆರೋಗ್ಯ ತಪಾಸಣೆ, ದೇಶಿ ಕ್ರೀಡೆ, ಸಾಂಸ್ಕೃತಿಕ ಉತ್ಸವ, ದೋಣಿ ವಿಹಾರ ಚಿತ್ರಸಂತೆ, ಕಲಾ ತಂಡಗಳ ಪ್ರದರ್ಶನ, ಛಾಯಾಚಿತ್ರ ಪ್ರದರ್ಶನ, ▶ 5ನೇ ಪುಟಕ್ಕೆ

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಮನೆಗೆ ಬರ್ತಾಳೆ... ಗೃಹಲಕ್ಷ್ಮಿ

{ 'ನಾ ನಾಯಕಿ' ಸಮಾವೇಶದಲ್ಲಿ ಕಾಂಗ್ರೆಸ್ ರಾಷ್ಟ್ರೀಯ ನಾಯಕಿ ಪ್ರಿಯಾಂಕಾ ಗಾಂಧಿ ಘೋಷಣೆ

● ಪ್ರತಿ ತಿಂಗಳು ಕುಟುಂಬದ ಓರ್ವ ಮಹಿಳೆಗೆ ಎರಡು ಸಾವಿರ ಆರ್ಥಿಕ ನೆರವು
● ಕಾಂಗ್ರೆಸ್ ಅಧಿಕಾರಕ್ಕೆ ತಂದರೆ ಮಹಿಳೆಯರ ಏಳ್ಗೆಗೆ ಮೊದಲ ಆದ್ಯತೆ



ಬೆಂಗಳೂರು, ಜ.16 (ಕೆಎಂಶಿ)– ಕುಟುಂಬದ ಓರ್ವ ಗೃಹಿಣಿಗೆ ಮಾಸಿಕ ಎರಡು ಸಾವಿರ ರೂ. ಆರ್ಥಿಕ ನೆರವನ್ನು ನೀಡುವುದಾಗಿ ಕಾಂಗ್ರೆಸ್ ಇಂದಿಲ್ಲಿ ಘೋಷಿಸಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದರೆ, ಸಂಕಷ್ಟದಲ್ಲಿರುವ ಮಹಿಳೆಯರ ಸಬಲೀಕರಣಕ್ಕಾಗಿ ಈ ಆರ್ಥಿಕ ನೆರವು ನೀಡುವುದಾಗಿ ಪಕ್ಷದ ರಾಷ್ಟ್ರೀಯ ನಾಯಕಿ ಪ್ರಿಯಾಂಕಾ ಗಾಂಧಿ ಘೋಷಿಸಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಈ ಮೊದಲೇ ▶ 8ನೇ ಪುಟಕ್ಕೆ

1.5 ಲಕ್ಷ ಕೋಟಿ ಲೂಟಿ

ಬೆಂಗಳೂರು: ಬಿಜೆಪಿ ಸರ್ಕಾರವಿರುವ ಕರ್ನಾಟಕದಲ್ಲಿ ಪರಿಸ್ಥಿತಿ ತೀವ್ರ ಹದಗೆಟ್ಟಿರುವುದಾಗಿ ಕೇಳಿದ್ದು, ಭ್ರಷ್ಟಾಚಾರದ ಮೂಲಕ ರೂ. 1.5 ಲಕ್ಷ ಕೋಟಿ ಲೂಟಿ ಮಾಡಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಆರೋಪಿಸಿದ್ದಾರೆ. ಇಂತಹ ಸರ್ಕಾರದಿಂದ ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ಉದ್ಯೋಗ ದೊರಕುವ ಭರವಸೆ ಇದೆಯೇ ಇವರಿಂದ ಭವಿಷ್ಯ ಉತ್ತಮಗೊಳ್ಳುವ ಭರವಸೆ ಇದೆಯೇ. ಬಿಜೆಪಿ ಸರ್ಕಾರ ಪೊಲೀಸ್ ಪಡೆಗಳನ್ನೂ ಮಾರಾಟಕ್ಕೆ ಇಟ್ಟಿರುವುದಕ್ಕೆ ಇದೇ ಸಾಕ್ಷಿ ಎಂದರು.

ಕಾಂಗ್ರೆಸ್ ಭರವಸೆಗಳ ಬಜೆಟ್‌ನಲ್ಲಿ ಸೇರಿಸಲು ಬಿಜೆಪಿ ಹುನ್ನಾರ

● ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪ ● ನಾವೇ ಎಲ್ಲಾ ಕಾರ್ಯಕ್ರಮ ಜಾರಿಗೊಳಿಸಿದ್ದು ಎಂದು ಬಿಂಬಿಸಿಕೊಳ್ಳುವ ಯತ್ನ

ಬೆಂಗಳೂರು, ಜ.16 (ಕೆಎಂಶಿ)–ಜನತೆಗೆ ಕೆಲವು ಚುನಾವಣಾ ಭರವಸೆಗಳನ್ನು ಕಾಂಗ್ರೆಸ್ ನೀಡುತ್ತಿದೆ ಎಂಬ ಮಾಹಿತಿ ಲಭ್ಯವಾಗುತ್ತಿದ್ದಂತೆ ಬಿಜೆಪಿ ಸರ್ಕಾರ ಅವುಗಳನ್ನು ತಮ್ಮ ಬಜೆಟ್‌ನಲ್ಲಿ ಜಾರಿಗೊಳಿಸಿ, ನಾವೇ ತಂದಿದ್ದೇವೆ ಎಂದು ಬಿಂಬಿಸಲು ಹೊರಟಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ದೂರಿದ್ದಾರೆ.

ಅರಮನೆ ಆವರಣದಲ್ಲಿ ನಡೆದ ನಾ ನಾಯಕಿ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಪ್ರಿಯಾಂಕಾ ಗಾಂಧಿ ▶ 8ನೇ ಪುಟಕ್ಕೆ

ಮಹಿಳೆಗೆ ಶಕ್ತಿ ತುಂಬಿದರೆ ದೇಶದ ಬದಲಾವಣೆ ಸಾಧ್ಯ

ಬೆಂಗಳೂರು: ದೇಶದ ಬದಲಾವಣೆ ನಿಟ್ಟಿನಲ್ಲಿ ಮಹಿಳೆಯರು ಹಾಗೂ ಯುವ ಸಮುದಾಯಕ್ಕೆ ಶಕ್ತಿ ತುಂಬಬೇಕಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು. ನಾ ನಾಯಕಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಕುಟುಂಬದ ಕಣ್ಣು, ಹೆಣ್ಣು ದೇಶದ ಶಕ್ತಿ. ▶ 8ನೇ ಪುಟಕ್ಕೆ

ಬೆಂಗಳೂರು–ಮೈಸೂರು ಎಲೆಕ್ಟ್ರಿಕ್ ಬಸ್ ಸೇವೆ ಆರಂಭ

● ಬೆಂಗಳೂರಿನಿಂದ 2 ತಾಸಿನಲ್ಲಿ ಮೈಸೂರು ತಲುಪಿದ ಮೊದಲ ಬಸ್ಸು ● ವಾಯು, ಶಬ್ದಮಾಲಿನ್ಯರಹಿತ ಸುಖಕರ ಪ್ರಯಾಣ ● ಮೆಜೆಸ್ಟಿಕ್‌ನಿಂದ ಮೈಸೂರಿಗೆ 320 ರೂ., ಸ್ಯಾಟಲೈಟ್ ಬಸ್ ನಿಲ್ದಾಣದಿಂದ 300 ರೂ. ಟಿಕೆಟ್ ದರ ನಿಗದಿ ● ಮೊದಲ ಟ್ರಿಪ್‌ನಲ್ಲಿ ಎಲ್ಲಾ 47 ಸೀಟುಗಳೂ ಭರ್ತಿ





ಬೆಂಗಳೂರು– ಮೈಸೂರು ಮೊದಲ ಎಲೆಕ್ಟ್ರಿಕ್ ಬಸ್ ಸೋಮವಾರ ಸುರಕ್ಷಿತವಾಗಿ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ತಲುಪಿತು (ಎಡಚಿತ್ರ). ಮೈಸೂರಿನಿಂದ ಬೆಂಗಳೂರಿಗೆ ಹೊರಟ ಬಸ್ಸಿನಲ್ಲಿ ತೆರಳಿದ ಪ್ರಯಾಣಿಕರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.16(ಆರ್‌ಕೆ)– ಬೆಂಗಳೂರು–ಮೈಸೂರು ನಡುವೆ ಬಹು ನಿರೀಕ್ಷಿತ ಎಲೆಕ್ಟ್ರಿಕ್ ಬಸ್ ಸಂಚಾರ ಸೇವೆಯು ಸೋಮವಾರದಿಂದ ಆರಂಭವಾಯಿತು.

ಬೆಂಗಳೂರಿನ ಮೆಜೆಸ್ಟಿಕ್‌ನಿಂದ ಬೆಳಗ್ಗೆ 7 ಗಂಟೆಗೆ ಹೊರಟ ಮೊದಲ ಎಲೆಕ್ಟ್ರಿಕ್ ಬಸ್ ಬೆಳಗ್ಗೆ 9 ಗಂಟೆಗೆ ಮೈಸೂರು ನಗರದ ಗ್ರಾಮಾಂತರ ಬಸ್ ನಿಲ್ದಾಣ ತಲುಪಿತು. 47 ಆಸನ ಸಾಮರ್ಥ್ಯದ ಈ ಬಸ್ಸಿನಲ್ಲಿ 45 ಮಂದಿ ಆಗಮಿಸಿದರು. ಬೆಂಗಳೂರಿನ ಮೆಜೆಸ್ಟಿಕ್‌ನಿಂದ ಮೈಸೂರು ನಗರಕ್ಕೆ 320 ರೂ. ಹಾಗೂ ಸ್ಯಾಟಲೈಟ್ ಬಸ್ ನಿಲ್ದಾಣದಿಂದ 300ರೂ. ದರ ನಿಗದಿಪಡಿಸಲಾಗಿದೆ.

ಸುಸಜ್ಜಿತ ಆಸನ, ಸಿಸಿ ಟಿವಿ ಕ್ಯಾಮರಾಗಳು, ಹವಾನಿಯಂತ್ರಿತ ಈ ಬಸ್‌ನಲ್ಲಿ ಸುಖಕರವಾಗಿ ಯಾವುದೇ ಶಬ್ದ, ವಾಯು ಮಾಲಿನ್ಯವಿಲ್ಲದೆ ಸಂಚರಿಸುವುದರಿಂದ ಪ್ರಯಾಣಿಕರಿಗೆ ವಿಶೇಷ ಅನುಭವವಾಗಲಿದೆ. ಮೈಸೂರಿನಿಂದ ಮಧ್ಯಾಹ್ನ 12.15ಕ್ಕೆ ಬೆಂಗಳೂರಿಗೆ ಹೊರಟ ಈ ಬಸ್ಸಿನಲ್ಲಿ 47 ಮಂದಿ ಪ್ರಯಾಣ ಬೆಳೆಸಿದರು.

ಅತ್ಯಾಧುನಿಕ ಇನ್‌ಫೋಟೇನ್‌ಮೆಂಟ್ ಸಿಸ್ಟಮ್, ಟಿವಿ, ಎಲ್ಲಾ ಪ್ರಯಾಣಿಕರಿಗೆ ವೈಫೈ ಸೌಲಭ್ಯ, ಇನ್‌ಬಿಲ್ಟ್ ಯುಎಸ್‌ಬಿ ಚಾರ್ಜರ್‌ಗಳನ್ನು ಎಲ್ಲಾ ಸೀಟುಗಳಿಗೂ ಅಳವಡಿಸಲಾಗಿದೆ. ಈ ಬಸ್ಸು ಇವಿ ಪವರ್ ಪ್ಲಸ್ ಸುಪೀರಿಯರ್ ಎಕ್ಸ್‌ಪೀರಿಯನ್ಸ್ ಸ್ಮೆಂಟ್ ಅನ್ನು ಹೊಂದಿದೆ. ಸಾಗರ್ ಚಾಲನೆ ಮಾಡಿಕೊಂಡು ಬಂದ ಈ ಬಸ್ಸಿಗೆ ಕೆ.ಎನ್. ಶ್ರೀನಾಥ್ ಕಂಡಕ್ಟರ್. ಬೆಳಗ್ಗೆ 9 ಗಂಟೆಗೆ ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದ ವಿದ್ಯುತ್ ಚಾಲಿತ ಈ ಬಸ್ಸು ಪ್ರಯಾಣಿಕರನ್ನು ಇಳಿಸಿದ ನಂತರ ಅಲ್ಲಿ ಸ್ಥಾಪಿಸಿರುವ ಚಾರ್ಜಿಂಗ್ ಸೆಂಟರ್ ಕಾರ್ಯಾರಂಭವಾಗದ ಕಾರಣ, ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ▶ 8ನೇ ಪುಟಕ್ಕೆ

ಪ್ರಿಯಾಂಕಾ ಗಾಂಧಿ 'ನಾ ನಾಯಕಿ' ಎಂದು ಹೇಳಿಕೊಳ್ಳುವ ಪರಿಸ್ಥಿತಿ!

ಬೆಂಗಳೂರು: ಪ್ರಿಯಾಂಕಾ ಗಾಂಧಿಗೆ ನಾನು ನಾಯಕಿ ಎಂದು ಸ್ವಯಂ ಹೇಳಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಮುಖ್ಯಮಂತ್ರಿ ಬಸವರಾಜ



ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಕ್ಕೆ ಅವರು ಬರುವ ಬಗ್ಗೆ ನಮ್ಮ ತಕರಾರಿಲ್ಲ. ಆದರೆ ಅವರ ಜಾಹೀರಾತಿನಲ್ಲಿ 'ನಾ ನಾಯಕಿ' ಎಂದು ಹೇಳಿಕೊಂಡಿದ್ದಾರೆ. ಅವರನ್ನು ನಾಯಕಿ ಮಾಡಲು ಕರ್ನಾಟಕದ ಮಹಿಳೆಯರು ತಯಾರಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಹೀಗಾಗಿ ಅವರೇ ತಾವೇ ನಾ ನಾಯಕಿ ಎಂದು ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ. ಮಹಿಳೆಯರಿಗಾಗಿ ಕಾಂಗ್ರೆಸ್ ಪ್ರತ್ಯೇಕ ಬಜೆಟ್ ಮಾಡುವ ಬಗ್ಗೆ ಪ್ರತಿಕ್ರಿಯೆ ನೀಡಿ ಅಧಿಕಾರಕ್ಕೆ ಬರುವುದಿಲ್ಲ ಎಂದು ಅವರಿಗೆ ಗೊತ್ತಿದೆ. ಅದಕ್ಕೆ ಏನು ಬೇಕಾದರೂ ಆಶ್ವಾಸನೆ ನೀಡುತ್ತಾರೆ ಎಂದರು.

ಸ್ಯಾಂಟ್ರೋ ರವಿ ಪ್ರಕರಣ ಸಿಐಡಿ ತನಿಖೆ



ಮೈಸೂರು, ಜ.16(ಆರ್‌ಕೆ)– ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಎಸ್ಸಿ ಎಸ್ಟಿ ದೌರ್ಜನ್ಯ ಕಾಯ್ದೆಯಡಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವರ್ಗಾಯಿಸಿದೆ.

ಸಂತ್ರಸ್ತೆ ನೀಡಿದ ದೂರಿನನ್ವಯ ಮೈಸೂರಿನ ವಿಜಯನಗರ ಠಾಣೆಯಲ್ಲಿ ದಾಖಲಾಗಿದರುವ ಪ್ರಕರಣದ ಜೊತೆಗೆ ವೇಶ್ಯಾವಾಟಿಕೆ ದಂಧೆ, ಪೊಲೀಸ್ ಹಾಗೂ ಇತರ ಇಲಾಖೆಗಳ ಅಧಿಕಾರಿಗಳ ವರ್ಗಾವಣೆ ದಂಧೆಯಲ್ಲಿ ಹಣ ವಸೂಲಿಯಂತಹ ಗುರುತರ ಆರೋಪಗಳು ಕೇಳಿಬರುತ್ತಿರುವುದರಿಂದ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸುವಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಸೂಚನೆ ನೀಡಿದರು.

ಅದರನ್ವಯ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು, ಸ್ಯಾಂಟ್ರೋ ರವಿ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಆದೇಶ ಹೊರಡಿಸಿದ್ದಾರೆ. ಈ ಕುರಿತು ▶ 5ನೇ ಪುಟಕ್ಕೆ

ಜನವರಿ 25ರವರೆಗೆ ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಮೈಸೂರು, ಜ.16(ಆರ್‌ಕೆ)– ಲೈಂಗಿಕ ದೌರ್ಜನ್ಯ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ ಸ್ಯಾಂಟ್ರೋ ರವಿ ಹಾಗೂ ಮತ್ತಿಬ್ಬರು ಆರೋಪಿಗಳನ್ನು ಜ. 25ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗುಜರಾತ್‌ನಲ್ಲಿ ಶುಕ್ರವಾರ ಸೆರೆ ಸಿಕ್ಕಿದ ಆರೋಪಿಗಳನ್ನು ಶನಿವಾರ ಮುಂಜಾನೆ ಮೈಸೂರಿಗೆ ಕರೆತಂದು ಪ್ರಾಥಮಿಕ ವಿಚಾರಣೆ ನಡೆಸಿದ ಬಳಿಕ ಸಂಜೆ ವಾಲ್ಮೀಕಿ ರಸ್ತೆಯಲ್ಲಿರುವ ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಒಪ್ಪಿಸುವಂತೆ ಕೋರಿಕೊಂಡಿದ್ದರಾದರೂ, ಸೋಮವಾರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸಿ ಆರೋಪಿಗಳನ್ನು 14 ದಿನಗಳವರೆಗೆ ನ್ಯಾಯಾಂಗ ▶ 5ನೇ ಪುಟಕ್ಕೆ

ಮುಡಾ ಅಧ್ಯಕ್ಷರ ಸಭೆ: ವಸತಿ ಬಡಾವಣೆ ಅಭಿವೃದ್ಧಿಗೆ 50:50 ಅನುಪಾತದಲ್ಲಿ ಭೂಮಿ ನೀಡಲು ಬೊಮ್ಮೇನಹಳ್ಳಿ ರೈತರ ಸಮ್ಮತಿ



ವಸತಿ ಬಡಾವಣೆ ನಿರ್ಮಿಸುವ ಸಂಬಂಧ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಇಲವಾಲ ಹೋಬಳಿಯ ಸೀಗಳ್ಳಿ ಗ್ರಾಮದ ಮಾರಮ್ಮ ದೇವಸ್ಥಾನದ ಆವರಣದಲ್ಲಿ ಬೊಮ್ಮೇನಹಳ್ಳಿ ರೈತರೊಂದಿಗೆ ನಡೆಸಿದ ಸಭೆ ವೇಳೆ ರೈತರು ಭೂಮಿ ನೀಡುವ ಸಂಬಂಧ ಮುಡಾ ಅಧ್ಯಕ್ಷರಿಗೆ ಅರ್ಜಿ ನೀಡಿದರು. ಚಿತ್ರದಲ್ಲಿ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಸಿಐಟಿಬಿ ಮಾಜಿ ಅಧ್ಯಕ್ಷರೂ ಆದ ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಕಾರ್ಯದರ್ಶಿ ವೆಂಕಟರಾಜು ಇನ್ನಿತರರನ್ನು ಕಾಣಬಹುದು.

ಮೈಸೂರು, ಜ.16 (ಆರ್‌ಕೆಬಿ)– ಮೈಸೂರಿನ ಹೊರವಲಯದ ಬೊಮ್ಮೇನಹಳ್ಳಿಯಲ್ಲಿ 50:50 ಅನುಪಾತದಡಿ ವಸತಿ ಬಡಾವಣೆ ಅಭಿವೃದ್ಧಿಗೆ ಉದ್ದೇಶಿಸಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಈ ಸಂಬಂಧ ಬೊಮ್ಮೇನಹಳ್ಳಿ ರೈತರೊಂದಿಗೆ ಸಭೆ ನಡೆಸುವ ಮೂಲಕ ಔಪಚಾರಿಕವಾಗಿ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಸೀಗಳ್ಳಿ ಗ್ರಾಮದ ಮಾರಮ್ಮನ ದೇವಸ್ಥಾನದ ಆವರಣದಲ್ಲಿ ಸೋಮವಾರ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ರೈತರೊಂದಿಗೆ ಸಭೆ ನಡೆಯಿತು. ಸಭೆಯಲ್ಲಿ 60ಕ್ಕೂ ಹೆಚ್ಚು ರೈತರು ಭಾಗವಹಿಸಿ, ಹಲವು ರೈತರು ತಮ್ಮ ಭೂಮಿ ನೀಡುವ ಸಂಬಂಧ ಅರ್ಜಿ ಸಲ್ಲಿಸಿದರು. ಸಭೆ ಆರಂಭವಾಗುತ್ತಿದ್ದಂತೆ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ರೈತರನ್ನುದ್ದೇಶಿಸಿ ಮಾತನಾಡಿ, ಬೊಮ್ಮೇನಹಳ್ಳಿಯಲ್ಲಿ ವಸತಿ ಬಡಾವಣೆ ನಿರ್ಮಿಸಲು 50:50 ಅನುಪಾತದ ಯೋಜನೆಯಡಿ 750 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಡಾ ಪ್ರಸ್ತಾವನೆಯಿದೆ. ರೈತರು ತಮ್ಮ ಭೂಮಿ ನೀಡಿದರೆ ಅವರಿಗೆ 50:50 ಅನುಪಾತದಡಿ ಶೇ.50ರಷ್ಟು ಅಭಿವೃದ್ಧಿಪಡಿಸಿದ ನಿವೇಶನ ನೀಡಲಾಗುವುದು ಎಂದರು. ಇದಕ್ಕೆ ಮನ್ನಣೆ ನೀಡಿದ ರೈತರು ಒಟ್ಟು 250 ಎಕರೆ ಭೂಮಿಯನ್ನು ನೀಡಲು ಸುಮಾರು 25ಕ್ಕೂ ಹೆಚ್ಚು ಭೂ ಮಾಲೀಕರು ತಕ್ಷಣ ಮುಂದೆ ಬಂದು, ಅರ್ಜಿ ನೀಡಿದರು.

ಆಸಕ್ತ ರೈತರು ದಶಕಗಳಿಂದ ಮಾವು ಮತ್ತು ತೆಂಗು ಬೆಳೆಗಳನ್ನು ಬೆಳೆಸಿದ್ದು, ಸರ್ಕಾರದಿಂದ ಸೂಕ್ತ ಪರಿಹಾರಕ್ಕೆ ಬೇಡಿಕೆ ಮುಂದಿಟ್ಟರು. ಕೆಲವರು ಅಭಿವೃದ್ಧಿಪಡಿಸಲಿರುವ ಲೇಔಟ್‌ನಲ್ಲಿ ಮೂಲೆ ನಿವೇಶನ ನೀಡುವಂತೆ ಒತ್ತಾಯಿಸಿದರು.

ಭೂಮಿ ಕಳೆದುಕೊಳ್ಳುವ ರೈತರಿಗೆ ಸೂಕ್ತ ಪರಿಹಾರ ನೀಡಲು ಸರಕಾರ ಸಿದ್ಧವಿದ್ದರೂ, ನಿಯಮಾವಳಿಗಳು ಅನುಮತಿ ನೀಡದ ಕಾರಣ ಮೂಲೆ ನಿವೇಶನಗಳನ್ನು ನೀಡುವಂತಿಲ್ಲ ಎಂದು ಆಯುಕ್ತರು ತಿಳಿಸಿದರು. ಯಾರ ಹೆಸರಲ್ಲಿ ಜಮೀನು ಇರುತ್ತದೆಯೋ ಅಂತಹ ರೈತರಿಗೆ ಮಾತ್ರ ಪರಿಹಾರ ನೀಡಲಾಗುವುದು ಇತರೆ ಸಾಗುವಳಿದಾರರು, ಬಳಕೆದಾರರು ಅಥವಾ ಗುತ್ತಿಗೆದಾರರಿಗೆ ಪರಿಹಾರವನ್ನು ನೀಡಲಾಗುವುದಿಲ್ಲ. ಕೃಷಿ ದರ್ಖಾಸ್ತ್ ಭೂಮಿ ಮತ್ತು ಸಾಗುವಳಿ (ಖಾಯಂ ಸಾಗುವಳಿ) ಸಮಸ್ಯೆಗಳನ್ನು ಕಂದಾಯ ಇಲಾಖೆಯ ಸಹಯೋಗದಲ್ಲಿ ಪರಿಹರಿಸಲಾಗುವುದು ಎಂದು ರೈತರಿಗೆ ಭರವಸೆ ನೀಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ವಸತಿ ಬಡಾವಣೆಯ ವಿನ್ಯಾಸ ರೂಪಿಸಿ ಅಭಿವೃದ್ಧಿಪಡಿಸುವ ತಮ್ಮ ಯೋಜನೆಯೊಂದಿಗೆ ಮುಂದುವರಿಯಲು ಮುಡಾ ಸಮಯ ವ್ಯರ್ಥ ಮಾಡದೇ ಕಾರ್ಯರೂಪಕ್ಕಿಳಿಯಲಿದೆ ▶ 5ನೇ ಪುಟಕ್ಕೆ

ರೈತರ ಸಭೆ ಯಶಸ್ವಿ; ಶೀಘ್ರದಲ್ಲೇ ಸರ್ಕಾರದ ಅನುಮತಿ ಸಿಗುತ್ತಿದ್ದಂತೆ ಲೇಔಟ್ ಅಭಿವೃದ್ಧಿ

ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್

ಮೈಸೂರು, ಜ.16(ಆರ್‌ಕೆಬಿ)– 50:50 ಅನುಪಾತದ ಸೂತ್ರವು ಭೂ ಮಾಲೀಕರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. 250 ಎಕರೆ ಭೂಮಿಯನ್ನು ಮುಡಾಗೆ ನೀಡಲು ರೈತರು ಸಾಮೂಹಿಕವಾಗಿ ಸಮ್ಮತಿಸಿದ್ದಾರೆ. ಉಳಿದ 250 ಎಕರೆ ಭೂಮಿಯನ್ನು ಸಹ ಮುಡಾ ರೈತರ ಮನವೊಲಿಸಿ ಪಡೆಯಲಿದ್ದು, ಒಟ್ಟಾರೆ 500 ಎಕರೆ ಸ್ವಾಧೀನ ಪಡಿಸಿಕೊಳ್ಳಲು ಮುಡಾ ಯೋಜನೆ ರೂಪಿಸಿರುವುದಾಗಿ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ತಿಳಿಸಿದರು.

ಬೊಮ್ಮೇನಹಳ್ಳಿ ವಸತಿ ಬಡಾವಣೆ ರೂಪಿಸುವ ಸಂಬಂಧ ಆ ಭಾಗದ ರೈತರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೊಮ್ಮೇನಹಳ್ಳಿಯಲ್ಲಿ ಮುಡಾ 500 ಎಕರೆ ಭೂಮಿ ದೊರೆಯುತ್ತಿದ್ದಂತೆ ಲೇಔಟ್ ರಚನೆಯ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಿದೆ. ಸರ್ಕಾರದ ಅನುಮೋದನೆ ಸಿಗುತ್ತಿದ್ದಂತೆಯೇ ಉತ್ತಮ ಹಾಗೂ ಅಭಿವೃದ್ಧಿ ಹೊಂದಿದ ವಸತಿ ವಿನ್ಯಾಸವನ್ನು ರೂಪಿಸುವ ಯೋಜನೆ ಕಾರ್ಯಗತಗೊಳಿಸಲು ಮುಡಾ ಸಮಯ ವ್ಯರ್ಥ ಮಾಡದೇ ಮುಂದುವರಿಯಲಿದೆ ಎಂದು ಹೇಳಿದರು.

ಮೈಸೂರು ಮಿತ್ರ

ಮಂಗಳವಾರ 17 ಜನವರಿ 2023

ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ಅಂಗವಾಗಿ

ಮೈಸೂರಲ್ಲಿ ನಾಳೆ ಜಿಲ್ಲಾ ಮಟ್ಟದ ಸಿರಿಧಾನ್ಯಗಳ ನಡಿಗೆ

ಮೈಸೂರು,ಜ.16(ಆರ್‌ಕೆಬಿ)–ವಿಶ್ವ ಸಂಸ್ಥೆಯು 2023ನೇ ವರ್ಷವನ್ನು ಅಂತರ ರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಜ.18ರಂದು ಬೆಳಗ್ಗೆ ಮೈಸೂರಿನಲ್ಲಿ ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ' ಕಾರ್ಯಕ್ರಮ ಆಯೋಜಿಸಲಾಗಿದೆ.



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವತಿಯಿಂದ ಸಿರಿಧಾನ್ಯಗಳ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ರೂಪಿಸಲಾಗಿರುವ 'ಸಿರಿಧಾನ್ಯಗಳ ನಡಿಗೆ' ಕಾರ್ಯಕ್ರಮ ಜ.18 ರಂದು ಬೆಳಗ್ಗೆ 7.30 ಗಂಟೆಗೆ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಹಮ್ಮಿಕೊಳ್ಳಲಾಗಿದೆ. ನಡಿಗೆಯು ಡಿ.ದೇವರಾಜ ಅರಸು ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ. ನಡಿಗೆ ಸಂದರ್ಭದಲ್ಲಿ ಸಿರಿಧಾನ್ಯಗಳ ಮಹತ್ವ ಸಾರುವ ಫಲಕಗಳನ್ನು ಪ್ರದರ್ಶಿಸಿ, ಘೋಷಣೆಗಳನ್ನು ಕೂಗಲಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಈ ಜಾಥಾಗೆ ಜಿಲ್ಲಾಧಿಕಾರಿಗಳು ಚಾಲನೆ ನೀಡಲಿದ್ದಾರೆ. ಮೈಸೂರು ಜಿಪಂ ಸಿಇಓ, ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೃಷಿ ಸಂಬಂಧಿತ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಕೃಷಿ ತಂತ್ರಜ್ಞರ ಸಂಸ್ಥೆಯ ಹಾಗೂ ಕೃಷಿ ಪರಿಕರ ಮಾರಾಟ ಸಂಘದ ಪದಾಧಿಕಾರಿಗಳು, ಮತ್ತು ಎನ್‌ಸಿಸಿ ವಿದ್ಯಾರ್ಥಿಗಳು ನಡಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 1 ಗಂಟೆಗೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಸಿರಿಧಾನ್ಯಗಳ ಬೇಸಾಯ, ಮೌಲ್ಯವರ್ಧನೆ ಮತ್ತು ಬಳಕೆ ಬಗ್ಗೆ ಜಿಲ್ಲಾ ಮಟ್ಟದ ಸಿರಿಧಾನ್ಯಗಳ ಹಬ್ಬ ಹಾಗೂ ಸಿರಿಧಾನ್ಯಗಳ ಉತ್ಪಾದಕರು ಹಾಗೂ ಮಾರಾಟಗಾರರ ಕಾರ್ಯಾಗಾರವನ್ನು ಸಹ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ಮೈಸೂರಿನ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಬಿಡುಗಡೆ ಮಾಡಿದರು. ಬಳಗದ ಅಧ್ಯಕ್ಷ ಎಚ್.ಕೆ.ಪ್ರದೀಪ್, ಗೌರವಾಧ್ಯಕ್ಷ ಹೆಚ್.ಶ್ರೀನಿವಾಸ್, ಕಾರ್ಯದರ್ಶಿ ಧರ್ಮಪಾಲ್‌ಗೌಡ, ಖಜಾಂಚಿ ಡಾ.ನಾಗರಾಜಮೂರ್ತಿ, ನಿರ್ದೇಶಕರಾದ ಡಾ.ಸಂದೀಪ್ ಕೃಷ್ಣ ಪಡುವಾರಹಳ್ಳಿ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ವೀರನಗೆರೆ ಸಂಜೀವಯ್ಯರ ಸಂಸ್ಮರಣೆ



ಮೈಸೂರು,ಜ.16–ಸ್ವಾತಂತ್ರ್ಯ ಹೋರಾಟಗಾರರು, ಮೈಸೂರು ಪುರಸಭೆ ಅಧ್ಯಕ್ಷರಾಗಿದ್ದ ದಿವಂಗತ ವೀರನಗೆರೆ ಸಂಜೀವಯ್ಯ ಅವರ 27ನೇ ವರ್ಷದ ಪುಣ್ಯಸ್ಮರಣೆಯನ್ನು ವೀರನಗೆರೆಯ ಅಶೋಕ ರಸ್ತೆಯ ಗಣಪತಿ ದೇವಸ್ಥಾನದ ಬಳಿ ಹಮ್ಮಿಕೊಳ್ಳಲಾಗಿತ್ತು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ವೀರನಗೆರೆಯ ನರೇಂದ್ರ, ಶ್ರೀನಿವಾಸ್, ವಕೀಲ ಸಂತೋಷ್ ಸಂಜೀವಯ್ಯ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಸ್ವಾಮಿ, ಸಂಘದ ಅಧ್ಯಕ್ಷ ಮಂಜುನಾಥಪುರಂ ಮಂಜುನಾಥ್, ಸದಾಶಿವ, ಭಾಸ್ಕರ್, ಶಿವಲಿಂಗು, ಕ್ಯಾತಮಾರನಹಳ್ಳಿಯ ಯೋಗೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ವಿಜಯಪುರದ ಸಿದ್ದೇಶ್ವರ ಸ್ವಾಮೀಜಿ ಪುಣ್ಯಸ್ಮರಣೆ ನೆನಪಿಗಾಗಿ ಸನ್ಮಿತ್ರ ಅಸೋಸಿಯೇಟ್ಸ್ ವತಿಯಿಂದ ಮೈಸೂರು ತಾಲೂಕಿನ ಹಿನಕಲ್ ಸರ್ಕಾರಿ ಪ್ರೌಢಶಾಲೆಗೆ ಬ್ಯಾಂಡ್ ಸೆಟ್ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಉಪಸ್ಥಿತರಿದ್ದರು.


ಚೀಟಿ ವ್ಯವಹಾರ: 10 ಮಂದಿಗೆ ಲಕ್ಷಾಂತರ ರೂ. ವಂಚನೆ

ಕುಶಾಲನಗರ, ಜ.16– ಚೀಟಿ ಹಾಕಿಸಿಕೊಂಡು 10 ಮಂದಿಗೆ ಲಕ್ಷಾಂತರ ರೂ. ಹಣ ನೀಡದೇ ವಂಚನೆ ಎಸಗಿರುವ ಬಗ್ಗೆ ಮಡಿಕೇರಿ ಜಿಲ್ಲೆಯ ಕುಶಾಲನಗರ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರುಗಳು ದಾಖಲಾಗಿವೆ.

ಮುಳ್ಳುಸೋಗೆ ಗ್ರಾಮದ ಲಕ್ಷ್ಮೀ, ಆಕೆಯ ಪತಿ ಚಂದ್ರ, ಮಕ್ಕಳಾದ ರವಿ, ಅಶೋಕ, ಅಶ್ವಿನಿ ಮತ್ತು ಅದೇ ಗ್ರಾಮದ ಸರಸ್ವತಿ ಆರೋಪಕ್ಕೆ ಒಳಗಾದವರಾಗಿದ್ದು, ಇವರು ಮುಳ್ಳುಸೋಗೆ ಗ್ರಾಮದ ಫೈರೋಜ್ ಅಹಮದ್, ಲೀಲಾವತಿ, ನಾಗಮ್ಮ, ಅನಿಲ್ ಕುಮಾರ್, ಗೌರಮ್ಮ, ಶ್ರೀಮತಿ ಚಂದ್ರಿಕಾ, ಶ್ರೀಮತಿ ಬೇಬಿ, ಅಬ್ದುಲ್ ಶರೀಫ್, ಶ್ರೀಮತಿ ಸರೋಜಾ ಮತ್ತು ಕುಶಾಲನಗರದ ಎಂ.ಸಿ.ರವಿಕುಮಾರ್ ಸೇರಿದಂತೆ 10 ಮಂದಿಗೆ ಲಕ್ಷಾಂತರ ರೂ. ವಂಚಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಎಲ್ಲಾ ಆರು ಆರೋಪಿಗಳು 2020ರಿಂದ ಚೀಟಿ ವ್ಯವಹಾರ ನಡೆಸುತ್ತಿದ್ದರು. ಇವರ ಬಳಿ ದೂರುದಾರರು ಚೀಟಿ ಕಟ್ಟಿದ್ದರು. ಚೀಟಿ ಅವಧಿ ಮುಗಿದು ಒಂದು ವರ್ಷವಾದರೂ ಕೂಡ ದೂರುದಾರರಿಗೆ ನೀಡಬೇಕಾದ ಲಕ್ಷಾಂತರ ರೂ.ಗಳನ್ನು ನೀಡದೇ ತಮ್ಮ ನಿವೇಶನವನ್ನು ಮಾರಾಟ ಮಾಡಿದ ನಂತರ ಹಣ ಕೊಡುವುದಾಗಿ ಲಕ್ಷ್ಮೀ ಕುಟುಂಬದವರು ಹೇಳುತ್ತಾ ಬಂದಿದ್ದರಂತೆ. ಆದರೆ, ಕಳೆದ 2 ತಿಂಗಳ ಹಿಂದೆ ನಿವೇಶನವನ್ನು ಮಾರಾಟ ಮಾಡಿರುವುದಾಗಿ ತಿಳಿದು ಬಂದಿದ್ದು, ಚೀಟಿ ಕಟ್ಟಿದ್ದವರು ಹಣ ಕೇಳಲು ಹೋದರೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುಶಾಲನಗರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕಲ್ಕುಂದ ಮರಿಸ್ವಾಮಪ್ಪ ನಿಧನ



ಮೈಸೂರು, ಜ.16– ಮೈಸೂರು ಯರಗನಹಳ್ಳಿಯ ಪಾಪಣ್ಣ ಲೇಔಟ್ ನಿವಾಸಿ ಕಲ್ಕುಂದ ಮರಿಸ್ವಾಮಪ್ಪ(82) ಸೋಮವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಲಲಿತಾದ್ರಿಪುರ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತ ದೇಶ ಬಯಲು ಶೌಚಮುಕ್ತವಾಗಬೇಕು

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ ಕಿವಿಮಾತು



ಮೈಸೂರು ಜಯದೇವ ಆಸ್ಪತ್ರೆ ಆವರಣದಲ್ಲಿ ಕಾಯಕಲ್ಪ ಯೋಜನೆ ಅಡಿ ನಡೆದ ಸ್ವಚ್ಛತಾ ಕಾರ್ಯಕ್ರಮಕ್ಕೆ ಮೈಸೂರು ವಿವಿ ಕುಲಸಚಿವೆ ವಿ.ಆರ್. ಶೈಲಜಾ ಚಾಲನೆ ನೀಡಿದರು.

ಮೈಸೂರು, ಜ. 16– ಸಾರ್ವಜನಿಕರು ಬಯಲಲ್ಲಿ ಮಲ ಮೂತ್ರ ವಿಸರ್ಜನೆ ಮಾಡುವುದನ್ನು ನಿಲ್ಲಿಸುವುದರ ಜೊತೆಗೆ ಭಾರತವನ್ನು ಬಯಲು ಶೌಚಮುಕ್ತವಾಗಿಸಲು ಸಹಕರಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ವಿ.ಆರ್.ಶೈಲಜಾ ಮನವಿ ಮಾಡಿದರು.

ಮೈಸೂರು ಜಯದೇವ ಆಸ್ಪತ್ರೆ ಆವರಣದಲ್ಲಿ ಕಾಯಕಲ್ಪ ಯೋಜನೆ ಅಡಿಯಲ್ಲಿ ಸ್ವಚ್ಛಭಾರತ ಅಭಿಯಾನ, ಆರೋಗ್ಯ–ಅರಿವು ಕಾರ್ಯಕ್ರಮದ ಅಂಗವಾಗಿ ಜಯದೇವ ಹೃದ್ರೋಗ ಸಂಸ್ಥೆ, ಮಹಾರಾಜ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಘಟಕ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ವತಿಯಿಂದ ನಡೆದ ಸ್ವಚ್ಛತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸ್ವಚ್ಛಭಾರತ ಅಭಿಯಾನವನ್ನು ಪ್ರಧಾನಮಂತ್ರಿಗಳು 2014 ಅ. 2ರಂದು ಪ್ರಾರಂಭ ಮಾಡಿದರು. ಅಂದಿನಿಂದ ಇಂದಿನವರೆಗೆ ಗ್ರಾಮೀಣಭಾಗದಲ್ಲಿ ಪ್ರತಿ ಮನೆಗೆ ಶೌಚಾಲಯ ಸಮುದಾಯ ಶೌಚಾಲಯಗಳನ್ನು ಸರ್ಕಾರ ನಿರ್ಮಿಸಿದೆ. ನಾನು ಸಹ ಗ್ರಾಮೀಣ ಭಾಗದಿಂದ ಬಂದಂತಹ ಮಹಿಳೆಯಾಗಿದ್ದೇನೆ. 140 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಶೌಚಾಲಯ ಪ್ರತಿ ಮನೆಯ ಅಂಗವಾಗಬೇಕು. ಸರ್ಕಾರದ ಮಹತ್ವಾಕಾಂಕ್ಷೆಯ ಈ ಯೋಜನೆ ಬಗ್ಗೆ ಜನರು ಜಾಗೃತರಾಗಬೇಕು. ಜಯದೇವ ಹೃದ್ರೋಗ ಸಂಸ್ಥೆ ಬಹಳ ದೊಡ್ಡಸಂಸ್ಥೆಯಾಗಿದ್ದು, ನಿರ್ದೇಶಕರಾದ ಡಾ. ಸಿ.ಎನ್.ಮಂಜುನಾಥ್ ಹಾಗೂ ಡಾ.ಸದಾನಂದ್ ನೇತೃತ್ವದಲ್ಲಿ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುತ್ತಿದೆ ಎಂದರು.

ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ|| ಕೆ.ಎಸ್. ಸದಾನಂದ್ ಮಾತನಾಡಿ, ವೈದ್ಯರಾದ ನಾವು ಆಸ್ಪತ್ರೆ ರೋಗಿಗಳು ಮನೆ ಇಷ್ಟಕ್ಕೆ ಸೀಮಿತವಾಗಿರುತ್ತೇವೆ. ಅದರಾಚೆಗೆ ಇನ್ನೂ ಹೆಚ್ಚಿನ ಜವಾಬ್ದಾರಿ ನಮ್ಮ ಮೇಲಿದೆ. ಸ್ವಚ್ಛತೆಗೆ ಜಯದೇವ ಆಸ್ಪತ್ರೆ ಮಾದರಿಯಾಗಿದೆ. ಇದಕ್ಕೆ ನರ್ಸಿಂಗ್ ಅಧೀಕ್ಷಕರಾದ ಹರೀಶ್‌ಕುಮಾರ್, ಹೌಸ್‌ಕೀಪಿಂಗ್ ಸಿಬ್ಬಂದಿ ಮುಖ್ಯಕಾರಣ. ಕಾಯಕಲ್ಪ ಯೋಜನೆಯಡಿಯಲ್ಲಿ ಶಾಲೆಗಳಿಗೆ ವೈದ್ಯರ ತಂಡ ಭೇಟಿ ನೀಡಿ ಆರೋಗ್ಯ, ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುತ್ತಿದೆ ಎಂದರು.

ಪಾಲಿಕೆ ಸದಸ್ಯ ಎಸ್.ಬಿ.ಎಂ. ಮಂಜು, ಮಹಾರಾಜ ಕಾಲೇಜು ಪ್ರಾಂಶುಪಾಲ ಸಿ.ಎ.ಶ್ರೀಧರ್, ಪ್ರೊಬಿ.ಎಸ್.ಯಶೋಧ, ಆರ್‌ಎಂಓ ಡಾ.ಪಶುಪತಿ, ಡಾ.ಭಾರತಿ, ಡಾ.ಬಿ.ಚಂದ್ರಶೇಖರ್, ಡಾ.ಎಂ.ಬಿ. ಸುರೇಶ್, ಡಾ.ನಿಂಗರಾಜು, ಡಾ.ಮಧುಸೂದನ್, ಡಾ.ಕೃಷ್ಣಪ್ಪ, ಡಾ.ದೇವರಾಜ್, ಡಾ.ರಾಘವೇಂದ್ರ, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ವಾಣಿಮೋಹನ್, ಚಂಪಕಮಾಲ, ಶರತ್ ಹಾಜರಿದ್ದರು.

ಅಯೋರ್ಟಾ ಕವಾಟ ಅಳವಡಿಕೆ ಯಶಸ್ವಿ



ಮೈಸೂರು, ಜ.16 – ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಇಲ್ಲದೆ ಅಯೋರ್ಟಾ ಕವಾಟವನ್ನು (TAVI) ಯಶಸ್ವಿಯಾಗಿ ಹೃದಯಕ್ಕೆ ಅಳವಡಿಸಲಾಗಿದೆ ಎಂದು ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ|| ಕೆ.ಎಸ್. ಸದಾನಂದ್ ತಿಳಿಸಿದರು.

ಮಂಡ್ಯದ 87 ವರ್ಷದ ನಿವೃತ್ತ ಇ.ಎನ್.ಟಿ. ತಜ್ಞವೈದ್ಯರಾದ ಡಾ|| ಆರ್.ಎನ್. ಚೆನ್ನವೀರಪ್ಪ ಅವರಿಗೆ ಡಾ|| ಜಾನ್‌ಜೋಸ್ ಹಾಗೂ ಡಾ|| ದಿನೇಶ್ ನೇತೃತ್ವದ ತಂಡ ಯಶಸ್ವಿಯಾಗಿ ಅಯೋರ್ಟಾ ಕವಾಟವನ್ನು ಅಳವಡಿಸಿದ್ದು, ಇದುವರೆಗೆ 6 ಜನ ರೋಗಿಗಳಿಗೆ ಈ ಚಿಕಿತ್ಸೆಯನ್ನು ನೀಡಲಾಗಿದೆ.

ಸಾಮಾನ್ಯವಾಗಿ ಈ ಸಮಸ್ಯೆಗೆ ತೆರೆದ ಹೃದಯ ಚಿಕಿತ್ಸೆ ಮಾಡುತ್ತೇವೆ. ಆದರೆ ವಯಸ್ಸಾದವರಿಗೆ, ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಲಾಗದವರಿಗೆ ತೊಡೆಯ ರಕ್ತನಾಳದ ಮೂಲಕ ಕೃತಕ ಕವಾಟವನ್ನು ಹೃದಯಕ್ಕೆ ಜೋಡಿಸಲಾಗುತ್ತದೆ. ಈ ಚಿಕಿತ್ಸೆ ಮಾಡುವುದರಿಂದ ಎದೆಯ ಮೇಲೆ ಯಾವುದೇ ತರಹದ ಗಾಯ ಆಗುವುದಿಲ್ಲ. ಎರಡು ದಿನದಲ್ಲೇ ಸಾಮಾನ್ಯರಂತೆ ಓಡಾಡಬಹುದು. ಈ ಚಿಕಿತ್ಸೆಗೆ ಸುಮಾರು 16 ಲಕ್ಷ ರೂ. ವೆಚ್ಚವಾಗುತ್ತದೆ. ಈ ಯಶಸ್ವಿ ಚಿಕಿತ್ಸೆಯ ತಂಡದಲ್ಲಿ ಡಾ.ಜಾನ್‌ಜೋಸ್, ಡಾ.ದಿನೇಶ್, ಡಾ.ವೀಣಾನಂಜಪ್ಪ, ಡಾ.ಶ್ರೀಮಂತ್, ಡಾ.ಮಂಜುನಾಥ್ ಅನ್ವೇಕರ್, ಡಾ.ಭಾರತಿ ಪಾಲ್ಗೊಂಡಿದ್ದರು ಎಂದರು. ಈ ಸಂದರ್ಭದಲ್ಲಿ ಆರ್.ಎಂ.ಓ. ಪಶುಪತಿ, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್, ಶುಶ್ರೂಷಕಿ ಉಮಾ ಹಾಜರಿದ್ದರು.

ಕೇಂದ್ರದ ಸಾಮಾಜಿಕ ನ್ಯಾಯ, ಸಬಲೀಕರಣ ಇಲಾಖಾ ಕಾರ್ಯದರ್ಶಿ ಮೈಸೂರು ಪ್ರವಾಸ



ಮೈಸೂರು,ಜ.16–ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಕಾರ್ಯದರ್ಶಿ ಶ್ರೀಮತಿ ಅಂಜಲಿ ಭಾವ್ರ ಜ.17ರಿಂದ 19ರವರೆಗೆ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಜ.17ರ ಸಂಜೆ ಮೈಸೂರಿಗೆ ಆಗಮಿಸಲಿರುವ ಅವರು ಜ.18 ಹಾಗೂ 19ರಂದು ಮೈಸೂರು ನಗರದ ಹೋಟೆಲ್ ಲಲಿತ ಮಹಲ್ ಪ್ಯಾಲೇಸ್‌ನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ 19ರ ಸಂಜೆ ಬೆಂಗಳೂರಿಗೆ ಪ್ರಯಾಣಿಸುವರೆಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ಸದೃಢಗೊಳಿಸಲು ಬೂತ್ ಅಭಿಯಾನ ಸಹಕಾರಿ

ಮೈಸೂರು, ಜ. 16– ಭಾರತೀಯ ಜನತಾ ಪಕ್ಷ ಬೂತ್ ವಿಜಯ ಅಭಿಯಾನದ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸದೃಢಗೊಳಿಸುವ ಮಹತ್ವಾಕಾಂಕ್ಷೆ ಹೊಂದಿದೆ. ಮತದಾರರನ್ನು ಮತಗಟ್ಟೆಗೆ ಕರೆತರುವ ಕಾರ್ಯಕರ್ತರಿಗೆ ತರಬೇತಿ ನೀಡಲು ಇದು ಸಹಕಾರಿಯಾಗಿದೆ ಎಂದು ನಗರಪಾಲಿಕೆ ಸದಸ್ಯ ಬಿ.ವಿ.ರವೀಂದ್ರ ಹೇಳಿದರು.

ವಾರ್ಡ್ ನಂ.18ರ ಮೇದರ ಬ್ಲಾಕ್ ಪ್ರಮುಖ ಬಿಜೆಪಿ ಕಾರ್ಯಕರ್ತರ ಮನೆ ಮನೆಗೆ ಪಕ್ಷದ ಧ್ವಜ ಹಾಗೂ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಎಳ್ಳು ಬೆಲ್ಲ ವಿತರಿಸಿ, ಬೂತ್ ವಿಜಯ ಅಭಿಯಾನದಲ್ಲಿ ಮಾತನಾಡಿದರು. 157ನೇ ಬೂತ್ ಅಧ್ಯಕ್ಷ ಮುರುಗೇಶ್, ಕಾರ್ಯದರ್ಶಿ ರೂಪ, ಶಕ್ತಿ ಕೇಂದ್ರದ ಅಧ್ಯಕ್ಷ ಷಣ್ಮುಗಂ, ಕಿರಣ್ ಬೋಲಾರ್, ಬಿಜೆಪಿ ಮುಖಂಡರಾದ ಶಿವಶಂಕರ್, ಕೃಷ್ಣ, ಗುರುಮೂರ್ತಿ, ಶಶಾಂಕ್, ಚಂದ್ರು ಇನ್ನಿತರ ಬಿಜೆಪಿ ಮುಖಂಡರು ಭಾಗವಹಿಸಿದ್ದರು.



ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯಲ್ಲಿ ಎಳ್ಳು, ಬೆಲ್ಲದೊಂದಿಗೆ 10 ಸಾವಿರ ನೀರಿನ ಕ್ಯಾನ್ ವಿತರಿಸಿ ಸಂಕ್ರಾಂತಿ ಆಚರಣೆ



ಮೈಸೂರು, ಜ. 16– ಹೂಟಗಳ್ಳಿಯ ಹೌಸಿಂಗ್ ಬೋರ್ಡ್ ಕಾಲೋನಿಯ ಸರ್ಕಲ್‌ನಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ಹೇಮಂತ್‌ಕುಮಾರ್‌ಗೌಡ ನೇತೃತ್ವದಲ್ಲಿ ಪ್ರತಿ ಮನೆಗೂ ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಎಳ್ಳು ಬೆಲ್ಲವನ್ನು ಹಂಚುವುದರೊಂದಿಗೆ 20 ಲೀ.ನ 10 ಸಾವಿರ ನೀರಿನ ಕ್ಯಾನ್‌ಗಳನ್ನು ವಿತರಿಸಿ, ಸಂಕ್ರಾಂತಿ ಹಬ್ಬದ ಶುಭಾಶಯ ಕೋರಲಾಯಿತು.

ನಂತರ ಮಾತನಾಡಿದ ಹೇಮಂತ್ ಕುಮಾರ್‌ಗೌಡ ಮಾತನಾಡಿ, ಹಬ್ಬ ಹರಿದಿನಗಳಲ್ಲಿ ಉಡುಗೊರೆ ನೀಡುವುದು, ಸಿಹಿ ಹಂಚಿ ಭೇದ–ಭಾವವಿಲ್ಲದೆ ಸಂಭ್ರಮಿಸುವುದು ಸನಾತನ ಸಂಪ್ರದಾಯದ ಭಾಗವಾಗಿದೆ. ರಾಜಾಳ್ವಿಕೆಯ ಕಾಲದಿಂದ ನಾಡಿನಲ್ಲಿ ವಸ್ತ್ರ ದವಸ ದಾನ್ಯಗಳನ್ನು ಅರಸರು ದಾನವಾಗಿ ನೀಡುತ್ತಿದ್ದರು. ಆರ್ಥಿಕ ದುರ್ಬಲರಿಗೆ ಸಹಾಯ ಹಸ್ತ ಚಾಚುವ ಸಂಪ್ರದಾಯವನ್ನು ಕಾರ್ಯಕರ್ತರು ಹಾಗೂ ಮುಖಂಡರ ಸಹಕಾರದೊಂದಿಗೆ ಮುಂದುವರಿಸಲಾಗಿದೆ ಎಂದರು. ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬಿ.ಎಂ. ರಘು, ಗೆಜ್ಜಗಳ್ಳಿ ಮಹೇಶ್, ಹಿರಿಯ ಕಾರ್ಯಕರ್ತರಾದ ಗೋಪಾಲರಾವ್, ವೇದರಾಜ್, ರಾಜಕುಮಾರ್, ಬೋಗಾದಿ ನಂದೀಶ್, ಚಾಮುಂಡೇಶ್ವರಿ ಮಹಿಳಾ ಮೋರ್ಚಾ ಅಧ್ಯಕ್ಷ ಮಂಜುಳಾ, ಭಾರತಿ ಪಶುಪತಿ, ಗಂಗನಗೌಡ, ದೇವರಾಜು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ನೇತಾಜಿನಗರದಲ್ಲಿ ಸರ ಅಪಹರಣ

ಮೈಸೂರು,ಜ.16(ಆರ್‌ಕೆ)– ಅಂಗಡಿಯಿಂದ ಮೊಮ್ಮಕ್ಕಳೊಂದಿಗೆ ಮನೆಗೆ ತೆರಳುತ್ತಿದ್ದ ಮಹಿಳೆಯ ಕೊರಳಿಂದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ನೇತಾಜಿನಗರದಲ್ಲಿ ಇಂದು ಸಂಜೆ ಸಂಭವಿಸಿದೆ. ಪ್ರಭಾವತಿ ಎಂಬುವರೇ 35 ಗ್ರಾಂನ ಚಿನ್ನದ ಸರ ಕಳೆದುಕೊಂಡವರು. ಇಬ್ಬರು ಮೊಮ್ಮಕ್ಕಳೊಂದಿಗೆ ಅಂಗಡಿಗೆ ಹೋಗಿ ಮನೆಗೆ ಹಿಂದಿರುಗುತ್ತಿದ್ದಾಗ ಹಿಂದಿನಿಂದ ಬಜಾಜ್ ಪಲ್ಸರ್ ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಸಂಜೆ 6.45 ಗಂಟೆ ವೇಳೆಗೆ ನೇತಾಜಿನಗರದ ಕ್ರಾಸ್‌ವೊಂದರ ಬಳಿ ಅವರ ಕುತ್ತಿಗೆಯಿಂದ ಸರ ಕಿತ್ತುಕೊಂಡು ಪರಾರಿಯಾದರು. ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಪೊಲೀಸರು, ಮಹಜರು ನಡೆದ್ದಾರೆ. ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು, ಸರ ಅಪಹರಣಕಾರರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಕಾಂಗ್ರೆಸ್ ಭವನದಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ಜಿಲ್ಲಾ ಕಾರ್ಯಕಾರಿಣಿ ಸಭೆ

ಜನರಿಗೆ ಕಾಂಗ್ರೆಸ್ ಕಾರ್ಯಕ್ರಮಗಳ ಮಹತ್ವ ಈಗ ಅರಿವಾಗಿದೆ

ಇದು ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್: ಓಬಿಸಿ ಜಿಲ್ಲಾಧ್ಯಕ್ಷ ಕೆ.ಮಾರುತಿ




ಮೈಸೂರು, ಜ.16(ಆರ್‌ಕೆಬಿ)– ಬಿಜೆಪಿ ಆಡಳಿತದಿಂದ ಬೇಸತ್ತಿರುವ ಜನರಿಗೆ ಕಾಂಗ್ರೆಸ್‌ನ ಹಿಂದಿನ ಕಾರ್ಯಕ್ರಮಗಳ ಬಗ್ಗೆ ಈಗ ಮನವರಿಕೆಯಾಗಿದ್ದು, ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗುವ ಮುನ್ಸೂಚನೆ ಸಿಕ್ಕಿದೆ. ಹಾಗಾಗಿ, ಪಕ್ಷದ ಹಿಂದುಳಿದ ವರ್ಗಗಳ ಘಟಕದ ಮುಖಂಡರು, ಕಾರ್ಯಕರ್ತರು ಶಕ್ತಿ ಮೀರಿ, ವಿಶ್ವಾಸದಿಂದ ಕೆಲಸ ಮಾಡಿದರೆ ಪಕ್ಷವನ್ನು ಅಧಿಕಾರಕ್ಕೆ ತರಬಹುದು ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ಜಿಲ್ಲಾಧ್ಯಕ್ಷ ಕೆ.ಮಾರುತಿ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಪಕ್ಷದ ಹಿಂದುಳಿದ ವರ್ಗಗಳ ಘಟಕದ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಮುಂದೆ ಹಿಂದುಳಿದ ವರ್ಗಗಳ ಸಮಾವೇಶವನ್ನು ಮೈಸೂರಿನಲ್ಲಿಯೇ ಹಮ್ಮಿಕೊಳ್ಳಲಾಗುತ್ತಿದೆ ಅಲ್ಲದೆ ಶಿವಮೊಗ್ಗದಲ್ಲಿ ರಾಜ್ಯ ಮಟ್ಟದ ಸಮಾವೇಶ ಏರ್ಪಡಿಸಲು ಸಿದ್ಧತೆ ನಡೆದಿದೆ ಎಂದು ಹೇಳಿದರು.

ಘಟಕದ ಜಿಲ್ಲಾ ಉಪಾಧ್ಯಕ್ಷ ಹಿನಕಲ್ ಉದಯ್ ಮಾತನಾಡಿ, ಪಕ್ಷದ ಮುಖಂಡರು ಹಿಂದುಳಿದ ವರ್ಗಗಳ ಘಟಕದ ಮುಖಂಡರನ್ನು ಪರಿಗಣಿಸುತ್ತಿಲ್ಲ. ಯಾವುದೇ ಮಾಹಿತಿ ಸರಿಯಾಗಿ ದೊರೆಯುತ್ತಿಲ್ಲ. ಚುನಾವಣೆ ಬರುತ್ತಿರುವುದರಿಂದ ಮುಂದೆ ಹೀಗಾಗದೇ ಹಿಂದುಳಿದ ವರ್ಗಗಳ ಘಟಕದ ಮುಖಂಡರನ್ನು ಪಕ್ಷದ ಎಲ್ಲಾ ಕಾರ್ಯಕ್ರಮಗಳ ಸಂದರ್ಭದಲ್ಲಿ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಹಿಂದುಳಿದ ವರ್ಗಗಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸ್ವಾಮಿಗೌಡ, ಉಪಾಧ್ಯಕ್ಷ ಸರಗೂರು ಮಹದೇವಶೆಟ್ಟಿ ಹಾಗೂ ಜಿಲ್ಲೆಯ ಹಿಂದುಳಿದ ವರ್ಗಗಳ ವಿವಿಧ ಬ್ಲಾಕ್ ಅಧ್ಯಕ್ಷರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.1.2023 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ:** ವಾರ್ಷಿಕ ಕ್ರೀಡಾಕೂಟ, ಮುಖ್ಯ ಅತಿಥಿಗಳು: ಮಾನಸ ಆಸ್ಪತ್ರೆಯ ಕೀಲು ಮೂಳೆ ತಜ್ಞ ಡಾ.ರಘುನಂದನ್, ಅಧ್ಯಕ್ಷತೆ: ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ಎಂ.ರಾಮಪ್ಪ, ಸ್ಥಳ: ದೀಪಾ ಶಾಲೆ ಕ್ರೀಡಾಂಗಣ, ರೂಪಾನಗರ, ಬೆಳಗ್ಗೆ 9.30ಕ್ಕೆ.

■ **ಚಿನ್ಮಯ ಮಿಷನ್:** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ "ನಾರದ ಭಕ್ತಿಸೂತ್ರ" ಕುರಿತು ಸಂಜೆ 6:30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6ರಿಂದ 6:30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ –ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸದಾಶಿವ ಪಾಟೀಲ್, ಜಯಂತಿ ವಿ. ಭಟ್, ವ್ಯಾಖ್ಯಾನ– ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 8.30 "ಉಲಿ ಉಯ್ಯಾಲೆ" ಸರಣಿ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 10.00 ಅವಧರಿಸು ಬಾ ಅಮರ ನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು, 10.30 ನಮ್ಮ ಆರೋಗ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಸ್ತ್ರೀ ಚೇತನ–ಭಕ್ತಿಗೀತೆಗಳನ್ನು ಹಾಡುವ ರಾಜೀವ್‌ನಗರದ ಯಶೋದಾ ಎಂ.ಆರ್. ಅವರೊಂದಿಗೆ ಆತ್ಮೀಯ ಮಾತುಕತೆ, 12.30 ದೇವರನಾಮ–ಶ್ರೀ ರಕ್ಷಾ, ಆರ್.ಕೆ. ಶ್ರೀಕಂಠನ್, 12.45 ಮಹಿಳೆಯರಲ್ಲಿ ಉದ್ಯಮಶೀಲತೆ ಕುರಿತು ಭಾಗ್ಯ ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು–ಎಂ.ಪ್ರಭಾಕರ್, ಎಂ.ಎಶ್ ಶೀಲ ಮತ್ತು ವೃಂದ, 3.00 ಆರ್.ಕೆ. ರಾಘವನ್–ವೀಣಾ ವಾದನ, 4.00 ಕಥಾ ಕಾಲಕ್ಷೇಪ "ಅರಣ್ಯಕಾಂಡ", ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ– ಎರೆಹುಳು ಗೊಬ್ಬರ ತಯಾರಿಕೆ ಹಾಗೂ ಮಾರಾಟದಿಂದ ಕಟ್ಟಿಕೊಂಡ ಸ್ವಾವಲಂಬಿ ಬದುಕು ಕುರಿತು ಎನ್. ನರಸಿಂಹಮೂರ್ತಿ ಅವರೊಂದಿಗೆ ಮಾತುಕತೆ, 9.15 ಯಕ್ಷಗಾನದ ಹಾಡುಗಳು–ರಾಮ್ ಸಾಲಿಯಾನ್ ಮತ್ತು ಸಂಗಡಿಗರು, 9.30 ಎಂ.ಎಸ್. ಗೋಪಾಲಕೃಷ್ಣನ್ – ವಯೋಲಿನ್, 10.00 ಗಮಕ ವ್ಯಾಖ್ಯಾನ, ವಾಚನ– ಧನ್ಯಾಪಡ್ಯಾಣ, ವ್ಯಾಖ್ಯಾನ– ಮುಳಿಯ ಶಂಕರ್ ಭಟ್

ಜ.21ರಿಂದ 29ರವರೆಗೆ ರಾಜ್ಯವ್ಯಾಪಿ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ




ಬೆಂಗಳೂರು: ಇದೇ 21ರಿಂದ 29 ರವರೆಗೆ ರಾಜ್ಯವ್ಯಾಪಿ 'ವಿಜಯ ಸಂಕಲ್ಪ' ಅಭಿಯಾನವನ್ನು ಆರಂಭಿಸಲಿದ್ದು, 2 ಕೋಟಿ ಜನರನ್ನು ಸಂಪರ್ಕಿಸುವ ಗುರಿ ಹೊಂದಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ 39 ಸಂಘಟನಾ ಜಿಲ್ಲೆಗಳು, 312 ಮಂಡಲಗಳಲ್ಲಿ ಈ ಅಭಿಯಾನ ನಡೆಯಲಿದೆ. ಮಹಾಶಕ್ತಿ ಕೇಂದ್ರ ಮತ್ತು ಶಕ್ತಿ ಕೇಂದ್ರಗಳ ಸಭೆಗಳು ನಡೆಯಲಿವೆ ಎಂದು ತಿಳಿಸಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ವಿಜಯಪುರದಲ್ಲಿ ಜ.21ರಂದು ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಭಾಗವಹಿಸಲಿದ್ದಾರೆ. ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆ ಎಂದರು.

ಈ ಅಭಿಯಾನದ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಕಾರ್ಯಕ್ರಮಗಳ ಫಲಾನುಭವಿಗಳನ್ನು ಸಂಪರ್ಕಿಸಲಾಗುವುದು. ಸುಮಾರು 2 ಕೋಟಿಗೂ ಹೆಚ್ಚು ಫಲಾನುಭವಿಗಳು ಎಂದರೆ, 1 ಕೋಟಿ ಕುಟುಂಬಗಳನ್ನು ಸಂಪರ್ಕಿಸುವ ಗುರಿ ಹಮ್ಮಿಕೊಳ್ಳಲಾಗಿದೆ. ಜನ್‌ಧನ್, ಪಿಎಂ ಕಿಸಾನ್, ಪಿಎಂ ಆವಾಸ್, ಉಜ್ವಲಾ, ರೈತ ವಿದ್ಯಾನಿಧಿ ಸೇರಿದಂತೆ ಎಲ್ಲ ಕಾರ್ಯಕ್ರಮಗಳ ಫಲಾನುಭವಿಗಳನ್ನು ಸಂರ್ಕಿಸುತ್ತೇವೆ ಎಂದರು. ಅವರ ಮನೆಗಳ ಮೇಲೆ ಪಕ್ಷವನ್ನು ಬೆಂಬಲಿಸುವ ಉದ್ದೇಶದ ಸ್ಟಿಕ್ಕರ್‌ಗಳನ್ನು ಅಂಟಿಸಲಾಗುವುದು. ಇದಕ್ಕಾಗಿ 3 ಕೋಟಿ ಸ್ಟಿಕ್ಕರ್ ಹಂಚಲಾಗುವುದು. ಈ ಕಾರ್ಯಕ್ರಮ ಏಕ ಕಾಲದಲ್ಲಿ 58 ಸಾವಿರ ಬೂತ್‌ಗಳಲ್ಲಿ ನಡೆಯಲಿದೆ. ಇದರಲ್ಲಿ ಕೇಂದ್ರ ಸಚಿವರು, ರಾಜ್ಯ ಸಚಿವರು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಇದೇ 29ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 'ಮನ್‌ಕಿ ಬಾತ್ ರೇಡಿಯೋ' ಕಾರ್ಯಕ್ರಮವನ್ನು ಎಲ್ಲ ಬೂತ್‌ಗಳಲ್ಲಿ ಒಟ್ಟಿಗೇ ಕುಳಿತು ಆಲಿಸುವ ಕಾರ್ಯಕ್ರಮವೂ ಇದೆ. ಇದರೊಂದಿಗೆ ಅಭಿಯಾನವನ್ನು ಪೂರ್ಣಗೊಳಿಸಲಾಗುವುದು ಎಂದು ಅಶ್ವತ್ಥನಾರಾಯಣ ಹೇಳಿದರು.

ನಾ ನಾಯಕಿಯಲ್ಲ... ನಾಲಾಯಕ್

ಕಾಂಗ್ರೆಸ್ ಪಕ್ಷ ಹಮ್ಮಿಕೊಂಡ 'ನಾ ನಾಯಕಿ' ಕಾರ್ಯಕ್ರಮ 'ನಾಲಾಯಕ್' ಎಂದು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವ್ಯಾಖ್ಯಾನಿಸಿದರು.

ಈ ಕಾರ್ಯಕ್ರಮದಿಂದ ಏನೂ ಪ್ರಯೋಜನ ಆಗುವುದಿಲ್ಲ. ಉತ್ತರ ಪ್ರದೇಶದಲ್ಲಿ ಪ್ರಿಯಾಂಕ ವಾದ್ರಾ ಅವರು ಪ್ರಚಾರಕ್ಕೆ ಹೋದ ಮೇಲೆ ಅಲ್ಲಿ ಕಾಂಗ್ರೆಸ್ ಸಿಂಗಲ್ ಡಿಜಿಟ್‌ಗೆ ಇಳಿಯಿತು. ದೇಶದಲ್ಲಿ ಕಾಂಗ್ರೆಸ್ ಅಪ್ರಸ್ತುತವಾಗಿದೆ ಎಂದರು.

ದೇಶದಲ್ಲಿ ಕೋವಿಡ್ ತಾರಕಕ್ಕೆ ಏರಿದ ಸಂದರ್ಭದಲ್ಲಿ ಲಸಿಕೆ ಹಾಕಿಸಿಕೊಳ್ಳಬೇಡಿ ಎಂದು ಇಡೀ ದೇಶದಲ್ಲಿ ಅಪಪ್ರಚಾರ ಮಾಡಿದವರು ಇದೇ ವ್ಯಕ್ತಿಗಳು. ಭಾರತ್ ತೋಡೊ ಎನ್ನುವ ವ್ಯಕ್ತಿಗಳ ಜತೆ ಸೇರಿ ಭಾರತ್ ಜೋಡೊ ಯಾತ್ರೆ ಮಾಡುತ್ತಿದ್ದಾರೆ ಎಂದು ಅವರು ಲೇವಡಿ ಮಾಡಿದರು.

ಮೈಸೂರು ಮಹಾ ನಗರಪಾಲಿಕೆ ಆದೇಶಕ್ಕೆ ಕಿಮ್ಮತ್ತಿಲ್ಲ...!

ಭೂಮಿಯೊಳಗೆ ಕೇಬಲ್ ಅಳವಡಿಸುವ ಸಂಬಂಧ ಇದುವರೆಗೆ ಒಂದು ಅರ್ಜಿ ಸಲ್ಲಿಕೆ ಇಲ್ಲ

- ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಗಿತ್ತು
- ಆದರೆ ಯಾರೊಬ್ಬರೂ ಅರ್ಜಿ ಸಲ್ಲಿಸಿಲ್ಲ; ಅನುಮತಿ ಕೋರಿಲ್ಲ



ಮೈಸೂರು, ಜ.16(ಎಸ್‌ಬಿಡಿ)– ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಕೇಬಲ್‌ಗಳನ್ನು ತೆರವು ಮಾಡಿ, ಭೂಮಿಯೊಳಗೆ(ಅಂಡರ್‌ಗ್ರೌಂಡ್–ಯುಜಿ) ಅಳವಡಿಸಲು ನಗರ ಪಾಲಿಕೆ ಅನುಮತಿ ಪಡೆಯಲು ಫೆಬ್ರವರಿ 10ರವರೆಗೆ ಕಾಲಾವಕಾಶ ನೀಡಿದ್ದು, ಆದರೆ ಈವರೆಗೆ ಒಂದೂ ಅರ್ಜಿ ಸಲ್ಲಿಕೆಯಾಗಿಲ್ಲ.

ವಿದ್ಯುತ್ ಕಂಬಗಳಲ್ಲಿ ಅಳವಡಿಸಿರುವ ಮೇಲ್ಮಟ್ಟದ (ಓವರ್‌ಹೆಡ್) ಕೇಬಲ್‌ಗಳಿಂದ ನಗರದ ಸೌಂದರ್ಯ ಹಾಳಾಗಿರುವುದಲ್ಲದೆ, ಅವಘಡಗಳಿಗೂ ಆಸ್ಪದವಾಗಿದೆ ಎಂದು ಡಿ.15ರಂದು ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿತ್ತು. ಸದಸ್ಯರ ಒತ್ತಾಯದಂತೆ ಯುಜಿ ಕೇಬಲ್‌ಗೆ ಪರಿವರ್ತಿಸುವ ನಿರ್ಣಯ ಕೈಗೊಳ್ಳಲಾಗಿತ್ತು. ಇದಕ್ಕೆ ಅನುಮತಿ ಪಡೆಯಲು ಎಲ್ಲಾ ಕೇಬಲ್‌ದಾರರು ಜ.15ರೊಳಗೆ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಈ ಸಂಬಂಧ ಪತ್ರಿಕಾ ಪ್ರಕಟಣೆ ವಿಳಂಬವಾಗಿತ್ತು. ಸದ್ಯ ನಗರ ಪಾಲಿಕೆ ವಾರದ ಹಿಂದೆ ಪ್ರಕಟಣೆ ಹೊರಡಿಸಿ, ಅರ್ಜಿ ಸಲ್ಲಿಸಿ ಅನುಮತಿ ಪಡೆಯಲು ಫೆ.10ರವರೆಗೆ ಕಾಲಾವಕಾಶ ನೀಡಲಾಗಿದೆ. ಆದರೆ ವಾರದಿಂದ ಒಂದೂ ಅರ್ಜಿ ಸಲ್ಲಿಕೆಯಾಗಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್ ಹಾಗೂ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಅರ್ಜಿ ಸಲ್ಲಿಸಿ ಅನುಮತಿ ಪಡೆಯಲು ಫೆ.10ರವರೆಗೆ ಕಾಲಾವಕಾಶ ನೀಡಲಾಗಿದ್ದು, ಈವರೆಗೆ ಯಾರೂ ಅರ್ಜಿ ಸಲ್ಲಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಗೊಂದಲ ಪರಿಹರಿಸಿ: ಈ ನಡುವೆ ಕೌನ್ಸಿಲ್ ನಿರ್ಣಯದ ಬಳಿಕವೂ ವಿದ್ಯುತ್ ಕಂಬಗಳಲ್ಲಿ ಕೇಬಲ್ ಅಳವಡಿಸಿರುವವರು ವಾರ್ಷಿಕ ಶುಲ್ಕ ಪಾವತಿಸುವಂತೆ ಸೆಸ್ಕ್ ಪ್ರಕಟಣೆ ನೀಡಿರುವುದರಿಂದ ಕೇಬಲ್‌ದಾರರು ಗೊಂದಲಕ್ಕೀಡಾಗಿದ್ದಾರೆ. ಸೆಸ್ಕ್‌ಗೆ ಶುಲ್ಕ ಪಾವತಿಸುವುದೋ ಅಥವಾ ಯುಜಿ ಕೇಬಲ್‌ಗೆ ಪರಿವರ್ತಿಸುವುದೋ ಎಂದು ತಿಳಿಯದಂತಾಗಿದ್ದಾರೆ. ನಗರಪಾಲಿಕೆ ಹಾಗೂ ಸೆಸ್ಕ್ ಅಧಿಕಾರಿಗಳು ಚರ್ಚಿಸಿ ಶೀಘ್ರ ಗೊಂದಲ ಪರಿಹರಿಸಬೇಕೆಂಬ ಒತ್ತಾಯ ಕೇಳಿಬರುತ್ತಿದೆ.

ತ್ವರಿತ ಕ್ರಮವಾಗಬೇಕು: ವಿದ್ಯುತ್ ಕಂಬಗಳಲ್ಲಿ ಒಂದೆರಡಲ್ಲ ಹತ್ತಾರು ಕೇಬಲ್‌ಗಳನ್ನು ಅಳವಡಿಸಲಾಗಿದೆ. ಕೆಲವೆಡೆ ಕೇಬಲ್ ಬಾಕ್ಸ್‌ಗಳು ಕೈಗೆಟಕುವಂತೆ ನೇತಾಡುತ್ತಿರುತ್ತವೆ. ಮಳೆ, ಗಾಳಿಯಿಂದ ಅದೆಷ್ಟೋ ಕಡೆ ತುಂಡರಿಸಿ ನೆಲಕ್ಕೆ ಬಿದ್ದಿರುತ್ತದೆ. ಕೆಲವೆಡೆ ರಸ್ತೆ ವಿಭಜಕದಲ್ಲೂ ಕೇಬಲ್ ತುಂಡಾಗಿ ಬಿದ್ದಿವೆ. ಶುಲ್ಕ ಪಾವತಿಸಿಕೊಂಡು ಸೆಸ್ಕ್ ವತಿಯಿಂದ ಅನುಮತಿ ನೀಡುವುದರ ಬಗ್ಗೆಯೂ ಆಕ್ಷೇಪವಿದೆ. ಕೇಬಲ್ ದುರಸ್ತಿ ವೇಳೆ ವಿದ್ಯುತ್ ಪ್ರವಹಿಸಿ ಕಾರ್ಮಿಕರು ಸಾವನ್ನಪ್ಪುವ ಸಾಧ್ಯತೆಯಿದೆ. ಹಾಗಾಗಿ ವಿದ್ಯುತ್ ಕಂಬಗಳಲ್ಲಿ ಯಾವುದೇ ಕೇಬಲ್ ಅಳವಡಿಸಲು ಅವಕಾಶ ಕೊಡಬಾರದು. ಯುಜಿ ಕೇಬಲ್‌ಗಳಿಗೆ ಪರಿವರ್ತಿಸುವುದು ಉತ್ತಮ. ಒಮ್ಮೆಲೆ ಆಗದಿದ್ದರೂ ಈ ಪ್ರಕ್ರಿಯೆ ತ್ವರಿತವಾಗಿ ಆರಂಭವಾಗಬೇಕು. ಈ ನಿಟ್ಟಿನಲ್ಲಿ ನಗರ ಪಾಲಿಕೆ, ಸೆಸ್ಕ್ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶ, ಅವರಿಗೇ ಮಾರಕವಾಗದಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೇಬಲ್ ತುಂಡರಿಸಲಾಗಿತ್ತು

ನಿಯಮಾನುಸಾರ ನಿಗದಿತ ಶುಲ್ಕ ಪಾವತಿಸದೆ ವಿದ್ಯುತ್ ಕಂಬಗಳಲ್ಲಿ ಕೇಬಲ್ ಅಳವಡಿಸಲಾಗಿದೆ ಎಂದು ಮೈಸೂರಿನ ದೇವರಾಜ ಅರಸು ರಸ್ತೆ, ಶಿವರಾಂಪೇಟೆ, ವಿನೋಬಾ ರಸ್ತೆ ಸೇರಿದಂತೆ ವಿವಿಧೆಡೆ ಜೂ.10ರಂದು ಸೆಸ್ಕ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದರು. ಅನಧಿಕೃತ ಕೇಬಲ್‌ಗಳನ್ನು ಮುಲಾಜಿಲ್ಲದೆ ಕತ್ತರಿಸಿ ಬಿಸಾಡಿದ್ದರು. ಆದರೆ ಹೀಗೆ ಏಕಾಏಕಿ ಕೇಬಲ್‌ಗಳನ್ನು ಕತ್ತರಿಸಿದರೆ ಇಂಟರ್‌ನೆಟ್ ಸಮಸ್ಯೆಯಾಗಿ ವಿದ್ಯಾರ್ಥಿಗಳು, ವಾಣಿಜ್ಯೋದ್ಯಮಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಪಾಲಿಕೆ ಕಾಲಾವಕಾಶ ನೀಡಿದೆ. ಆದರೆ ಯುಜಿ ಕೇಬಲ್‌ಗೆ ಪರಿವರ್ತಿಸುವುದು ಅಗತ್ಯವಾಗಿದೆ.

–ಸಾರ್ವಜನಿಕರ ಆಗ್ರಹ

13 ಸಚಿವರ ಸಿಡಿಗಳು ಚುನಾವಣೆ ಒಳಗೆ ಬಿಡುಗಡೆಯಾಗಲಿದೆ



ಸಿಎಂ ಇಬ್ರಾಹಿಂ ಹೊಸ ಬಾಂಬ್

ಕೋಲಾರ: ಕಾಂಗ್ರೆಸ್‌ನವರು ಬಾಯಿ ಬಿಡುತ್ತಿಲ್ಲ. ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋದ 13 ಜನ ಶಾಸಕರ ಸಿಡಿ ಇದೆ. ಸದನದಲ್ಲಿ ಅವರೇ ಹೇಳಿದ್ದಾರೆ. ಸ್ಟೇ ತೆಗೆದುಕೊಂಡಿದ್ದಾರೆ. ಗೋಪಾಲಯ್ಯ ಒಬ್ಬ ಮಾತ್ರ ಸ್ಟೇ ತೆಗೆದುಕೊಂಡಿಲ್ಲ. ಉಳಿದಂತೆ 13 ಸಚಿವರ ಸಿಡಿಗಳು ಚುನಾವಣೆ ಒಳಗೆ ಬಿಡುಗಡೆಯಾಗಲಿವೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಹೊಸ ಬಾಂಬ್ ಸಿಡಿಸಿದ್ದಾರೆ.

ಕೋಲಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ಯಾಂಟ್ರೋ ರವಿ ಪ್ರಕರಣದ ವಿಚಾರಣೆ ಪಾರದರ್ಶಕವಾಗಿರಬೇಕಾದರೆ ನಿವೃತ್ತ ನ್ಯಾಯಾಧೀಶರ ಮೂಲಕ ತನಿಖೆ ಮಾಡಿಸುವುದು ಉತ್ತಮ. ಸ್ಯಾಂಟ್ರೋ ರವಿ ಪ್ರಕರಣ ಸಿಐಡಿ ಅಲ್ಲ, ಸಿಬಿಐ ತನಿಖೆ ಆಗಬೇಕು. ಇಲ್ಲವಾದಲ್ಲಿ ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕು ಎಂದು ಸಿ.ಎಂ.ಇಬ್ರಾಹಿಂ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯ ಬಾದಾಮಿ ಗೆಲ್ಲಲು ನಾನು ಕಾರಣ. ಬಾದಾಮಿ ಚುನಾವಣೆಯಲ್ಲಿ ನಾನು ಹೋಂವರ್ಕ್ ಮಾಡಿದ್ದು, ಸಿದ್ದರಾಮಯ್ಯ ಅಲ್ಲ. ನಾನು ಅವರನ್ನು ಗೆಲ್ಲಿಸಿದೆ ಅದಕ್ಕೆ ಅವರ ಸರಿಯಾದ ಉಪಕಾರ ಮಾಡಿದರು. ಸಿದ್ದರಾಮಯ್ಯ ಕೋಲಾರದಲ್ಲಿ ನಿಲ್ಲಲ್ಲ. ಮನೇ ದೇವರು ಹೇಳಿದ್ದಾರೆ ಅವರು ಬರಲ್ಲ. ಆದರೆ ಸಿದ್ದರಾಮಯ್ಯ ಬಲವಂತಕ್ಕೆ ಕೋಲಾರಕ್ಕೆ ಬರುತ್ತಿದ್ದಾರೆ. ಕೊನೆಗೆ ಹೈಕಮಾಂಡ್ ಮೇಲೆ ಹಾಕುತ್ತಿದ್ದಾರೆ. ಸಿದ್ದರಾಮಯ್ಯರನ್ನು ಸೋಲಿಸಲು ಕೋಲಾರಕ್ಕೆ ಕರೆದುಕೊಂಡು ಬರುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ಗೆ ರಾಜ್ಯದಲ್ಲಿ 123 ಸೀಟ್ ಬರುವುದು ಖಚಿತ. ಈ ಬಾರಿ ನಾವೇ ಅಧಿಕಾರಕ್ಕೆ ಬರುತ್ತೇವೆ. ನಮ್ಮ ಪಕ್ಷದವರು ಸೇರಿ ಸಿಎಂ ಕುಮಾರಸ್ವಾಮಿ ಎಂದು ಹೇಳುತ್ತೇವೆ. ಆದರೆ ಕಾಂಗ್ರೆಸ್, ಬಿಜೆಪಿಯಲ್ಲಿ ಹಾಗಿಲ್ಲ, ನೀವು ಹೇಳಿ ನೋಡಿ ನೋಡೋಣ ಎಂದು ಕಾಂಗ್ರೆಸ್, ಬಿಜೆಪಿಗೆ ಸವಾಲು ಹಾಕಿದ್ದಾರೆ.

ಪ್ರತಿ ಎಕರೆಗೆ 250 ರೂ. ಡೀಸೆಲ್ ಸಬ್ಸಿಡಿ: ತಿಂಗಳಾಂತ್ಯಕ್ಕೆ ರೈತ ಶಕ್ತಿ ಯೋಜನೆ ಜಾರಿ



ಬೆಂಗಳೂರು: ರೈತಾಪಿ ಕೃಷಿಕರ ಮೇಲಿನ ಹೊರೆ ತಪ್ಪಿಸುವ ಸಲುವಾಗಿ ಬಜೆಟ್‌ನಲ್ಲಿ ಘೋಷಿಸಿದಂತೆ ರೈತ ಶಕ್ತಿ ಯೋಜನೆಗೆ ಈ ತಿಂಗಳಾಂತ್ಯಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.

ರೈತರಿಗೆ ಕೃಷಿ ಯಾಂತ್ರೀಕರಣವು ಡೀಸೆಲ್ ಇಂಧನದ ಮೇಲೆ ಬಹುತೇಕ ಅವಲಂಬಿತವಾಗಿದೆ. ಹೀಗಾಗಿ ರೈತರ ಮೇಲಿನ ಆರ್ಥಿಕ ಹೊರೆ ಆದಷ್ಟು ಕಡಿತಗೊಳಿಸುವ ನಿಟ್ಟಿನಲ್ಲಿ 2022–23ನೇ ಸಾಲಿನ ಬಜೆಟ್‌ನಲ್ಲಿ ರೈತ ಶಕ್ತಿ ಯೋಜನೆಯನ್ನು ಪ್ರಕಟಿಸಲಾಗಿತ್ತು.

ಪ್ರತಿ ಎಕರೆಗೆ 250 ರೂ.ನಂತೆ ಗರಿಷ್ಠ ಐದು ಎಕರೆಗೆ ನೇರ ನಗದು ವರ್ಗಾವಣೆ ಮೂಲಕ ಡೀಸೆಲ್ ಸಹಾಯಧನವನ್ನು ನೀಡಲಾಗುತ್ತದೆ. ಸುಮಾರು 45 ಲಕ್ಷಕ್ಕೂ ಹೆಚ್ಚಿನ ರೈತಾಪಿ ಕುಟುಂಬಗಳಿಗೆ ಡಿಬಿಟಿ ಮೂಲಕ ಸಬ್ಸಿಡಿಯನ್ನು ನೇರವಾಗಿ ರೈತರ ಖಾತೆಗೆ ಸಿಎಂ ನೇರವಾಗಿ ಬಿಡುಗಡೆ ಮಾಡಲಿದ್ದಾರೆ.

ರಾಜ್ಯದ ರೈತರಿಗೆ ಕೃಷಿ ಇಲಾಖೆಯ ಎಲ್ಲಾ ಯೋಜನೆಗಳನ್ನು ರೈತರಿಗೆ FRUITS ಪೋರ್ಟಲ್ ಮೂಲಕ ನೋಂದಣಿ ಗುರುತಿನ ಸಂಖ್ಯೆ ಬಳಸಿ ಕಿಸಾನ್ ತಂತ್ರಾಂಶದ ಮೂಲಕವೇ ಅನುಷ್ಠಾನ ಮಾಡಲಾಗುತ್ತಿದೆ. ಅದೇ ರೀತಿಯಲ್ಲಿ FRUITS ಪೋರ್ಟಲ್‌ನಲ್ಲಿ ನೋಂದಣಿಗೊಂಡ ರಾಜ್ಯದ ಎಲ್ಲಾ ರೈತರಿಗೆ ರೈತ ಶಕ್ತಿ ಯೋಜನೆಯನ್ನು ಕಿಸಾನ್ ತಂತ್ರಾಂಶ ಬಳಸಿಕೊಂಡು ನೇರ ವರ್ಗಾವಣೆ (DBT) ಮೂಲಕವೇ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ.

ನಗದು ಯೋಜನೆಯ FRUITS ಪೋರ್ಟಲ್‌ನಲ್ಲಿ ನೊಂದಣಿಗೊಂಡ ರಾಜ್ಯದ ಎಲ್ಲಾ ರೈತರು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಈ ಯೋಜನೆಯು ಅರ್ಹತಾಧಾರಿತ ಯೋಜನೆಯಾಗಿರುವುದರಿಂದ ಯಾವುದೇ ರೈತರು ಪ್ರತ್ಯೇಕವಾಗಿ ವೈಯಕ್ತಿಕ ಅರ್ಜಿ ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ. ದಾಖಲೆಗಳ ಪರಿಶೀಲನೆಯನ್ನು ಸರ್ಕಾರದ FRUITS ಪೋರ್ಟಲ್‌ನಲ್ಲಿ ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ಮಾಡಲಾಗುತ್ತದೆ.

FRUITS ಪೋರ್ಟಲ್‌ನಲ್ಲಿ ನಮೂದಿಸಲಾದ ಜಾಗದ ವಿಸ್ತೀರ್ಣದ ಆಧಾರದ ಮೇಲೆ ರೈತರಿಗೆ ಡೀಸೆಲ್ ಸಹಾಯಧನವನ್ನು ಡಿಬಿಟಿ ಮೂಲಕ ರೈತರ ಖಾತೆಗೆ ವರ್ಗಾಯಿಸಲಾಗುತ್ತದೆ. FRUITS ತಂತ್ರಾಂಶದಲ್ಲಿ ನೋಂದಣಿಗೊಂಡ ರೈತರು ಹೊಂದಿರುವ ಭೂ ಹಿಡುವಳಿಯ ಆಧಾರದ ಮೇಲೆ ಪ್ರತಿಯೊಬ್ಬ ರೈತರಿಗೆ ಪ್ರತಿ ಎಕರೆಗೆ 250 ರೂ. ಗರಿಷ್ಠ 5 ಎಕರೆಗೆ 1250 ರೂ. ವರೆಗೆ ಡೀಸೆಲ್ ಸಹಾಯಧನವನ್ನು ಒದಗಿಸಲಾಗುತ್ತದೆ. ಅರ್ಹ ರೈತರಿಗೆ ಡೀಸಲ್ ಸಹಾಯಧನದ ಮೊತ್ತವನ್ನು ಡಿಬಿಟಿ ಪೋರ್ಟಲ್ ಮೂಲಕ ಸೀಡೆಡ್ ಬ್ಯಾಂಕ್/ಪೋಸ್ಟ್ ಆಫೀಸ್ ಖಾತೆಗೆ ವರ್ಷಕ್ಕೊಮ್ಮೆ ವರ್ಗಾಯಿಸಲಾಗುತ್ತದೆ ಎಂದು ಕೃಷಿ ಸಚಿವರ ಕಚೇರಿ ತಿಳಿಸಿದೆ.

ಸುಭಾಷ್ ಚಂದ್ರಬೋಸ್ ಸಂಬಂಧ ಸ್ಪರ್ಧೆ



ಮೈಸೂರು, ಜ.16(ಎಸ್‌ಪಿಎನ್)–ಸ್ವಾತಂತ್ರ್ಯ ಸೇನಾನಿ ನೇತಾಜಿ ಸುಭಾಷ್ ಚಂದ್ರಬೋಸ್ ಅವರ 125ನೇ ಜನ್ಮ ದಿನಾಚರಣೆ ಅಂಗವಾಗಿ 'ಭಾರತದ ರಾಷ್ಟ್ರೀಯತೆಗೆ ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಕೊಡುಗೆಗಳು' ವಿಷಯ ಕುರಿತು ಪಿಯುಸಿ ವಿದ್ಯಾರ್ಥಿಗಳಿಗೆ ಜ.23ರಂದು ಕೆಎಸ್‌ಓಯು ಆವರಣದ ಕಾವೇರಿ ಸಭಾಂಗಣದಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ 5 ಸಾವಿರ ಪ್ರಥಮ ಬಹುಮಾನ, 3 ಸಾವಿರ ರೂ ದ್ವಿತೀಯ ಹಾಗೂ 2 ಸಾವಿರ ರೂ. ತೃತೀಯ ಬಹುಮಾನ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ನೀಡಲಾಗುವುದು. ಈ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿದೆ. ಪ್ರಬಂಧವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರೆಯಬಹುದು. ಈ ಸ್ಪರ್ಧೆಗೆ ಒಂದು ಗಂಟೆ ಕಾಲಾವಕಾಶ ನಿಗದಿಗೊಳಿಸಲಾಗಿದೆ. ಜ.23ರಂದು ಬೆಳಗ್ಗೆ 10.30ರಿಂದ 11.30ರವರೆಗೆ ಕಾವೇರಿ ಸಭಾಂಗಣದ ಮುಂಭಾಗದಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ನೊಂದಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜ.22ರೊಳಗಾಗಿ ಡಾ.ಮಂಜುನಾಥ (91108–73218), ಡಾ.ಜ್ಯೋತಿ ಶಂಕರ್ (94486–03159), ಗಣೇಶ್(99647–60090) ವಾಟ್ಸಾಪ್ ನಂಬರ್‌ಗಳಿಗೆ ಅರ್ಹ ವಿದ್ಯಾರ್ಥಿಗಳು ತಮ್ಮ ಹೆಸರು ಮತ್ತು ಕಾಲೇಜು ವಿವರಗಳನ್ನು ಕಳುಹಿಸಬಹುದು ಎಂದು ನೊಡೆಲ್ ಅಧಿಕಾರಿ ಡಾ.ಪಿ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಖಿಲ ಭಾರತ ವಿವಿ ಕ್ರೀಡಾಕೂಟಕ್ಕೆ ಆಯ್ಕೆ



ಮೈಸೂರು,ಜ.16(ಎಸ್‌ಪಿಎನ್)– ಚೆನ್ನೈನಲ್ಲಿ ಫೆ.20ರಿಂದ 23ರವರೆಗೆ ನಡೆಯಲಿರುವ 'ಅಖಿಲ ಭಾರತ ವಿಶ್ವವಿದ್ಯಾನಿಲಯ ಕ್ರೀಡಾಕೂಟ'ಕ್ಕೆ ಮೈಸೂರು ವಿವಿಯ ಅಥ್ಲೆಟಿಕ್ ಕ್ರೀಡಾಪಟು ವಿ.ಅಂಬಿಕಾ ಆಯ್ಕೆಯಾಗಿದ್ದಾರೆ.

2023ತ ಜ.9ರಿಂದ 12ರವರೆಗೆ ನಡೆದ ದಕ್ಷಿಣ– ಪಶ್ಚಿಮ ವಲಯದ ಇಂಟರ್ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಮೈಸೂರು ವಿವಿಯ ಕ್ರೀಡಾಪಟು ವಿ.ಅಂಬಿಕಾ ಗುಂಡು ಎಸೆತ(ಜ.3ರಿಂದ ಜ.12ರವರೆಗೆ ನಡೆದ ಸ್ಪರ್ಧೆ) ಸ್ಪರ್ಧೆಯಲ್ಲಿ 14.68 ಮೀಟರ್ ದೂರ ಎಸೆದು ಬೆಳ್ಳಿ ಪದಕ ಪಡೆದಿದ್ದರು. ಈ ಹಿನ್ನೆಲೆಯಲ್ಲಿ ಕ್ರೀಡಾಪಟು ವಿ.ಅಂಬಿಕಾ ಅವರ ಸಾಧನೆಗೆ ಮೈಸೂರು ವಿನಸ್ ಥ್ರೋಯಿಂಗ್ ಕ್ಲಬ್ ತರಬೇತುದಾರ ಎಂ.ಸಿ.ಮೋಹನ್‌ಕುಮಾರ್, ಇತರೆ ಅಥ್ಲೆಟಿಕ್ ಕ್ರೀಡಾಪಟುಗಳು ಶ್ಲಾಘಿಸಿದ್ದಾರೆ ಎಂದು ಹಿರಿಯ ಕ್ರೀಡಾಪಟು ಎಂ.ಪಿ.ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲಿಂಗದೇವರ ಕೊಪ್ಪಲು ಗ್ರಾಮದಲ್ಲಿ ಗ್ರಾಪಂ ಮಾಜಿ ಸದಸ್ಯ ಹಳೆಕಾಮನ ಕೊಪ್ಪಲು ಕರೀಗೌಡ ನೇತೃತ್ವದಲ್ಲಿ ಸಂಕ್ರಾಂತಿ ಆಚರಿಸಲಾಯಿತು.

ಇಂದಿನಿಂದ ಬಜರಂಗ ದಳ 2 ದಿನಗಳ ರಾಷ್ಟ್ರವ್ಯಾಪಿ ಪ್ರತಿಭಟನೆ



ನವದೆಹಲಿ: ಬಜರಂಗ ದಳವು ಭಯೋತ್ಪಾದನೆಯನ್ನು ಸೃಷ್ಟಿಸಲು ಹಿಂದೂಗಳನ್ನು ಗುರಿಯಾಗಿಸುವ ಮೂಲಭೂತವಾದಿಗಳ ವಿರುದ್ಧ ಜನವರಿ 17 ರಿಂದ ಎರಡು ದಿನಗಳ ರಾಷ್ಟ್ರವ್ಯಾಪಿ ಪ್ರತಿಭಟನೆಗಳನ್ನು ನಡೆಸಲಿದೆ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸೋಮವಾರ ಪ್ರಕಟಿಸಿದೆ.

ವಿಎಚ್‌ಪಿಯ ಕೇಂದ್ರ ಜಂಟಿ ಪ್ರಧಾನ ಕಾರ್ಯದರ್ಶಿ ಡಾ.ಸುರೇಂದ್ರ ಜೈನ್ ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ಭಜರಂಗದಳದ 9 ಕಾರ್ಯಕರ್ತರು ಹತ್ಯೆಗೀಡಾಗಿದ್ದು, 32 ಮಂದಿ ಜಿಹಾದಿಗಳಿಂದ ದಾಳಿಗೊಳಗಾಗಿದ್ದಾರೆ ಎಂದರು. ಜನವರಿ 17 ಮತ್ತು 18ರಂದು, ಬಜರಂಗದಳವು ದೇಶದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಿದೆ ಮತ್ತು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಲಿದೆ. ಇದರಲ್ಲಿ ದೇಶದ ಮೇಲಿನ 'ಜಿಹಾದಿ' ವಿನ್ಯಾಸಗಳನ್ನು ತಟಸ್ಥಗೊಳಿಸಲು ರಾಷ್ಟ್ರವ್ಯಾಪಿ ಯೋಜನೆಯನ್ನು ಪ್ರಸ್ತುತಪಡಿಸಲಾಗುವುದು ಎಂದರು. ಅವರು ಮದರಸಾದಲ್ಲಿ ಉತ್ತೀರ್ಣರಾದ ಅಪ್ರಾಪ್ತರು ಮತ್ತು ಕಸಾಯಿಖಾನೆಯಲ್ಲಿ ತರಬೇತಿ ಪಡೆದ ಮಕ್ಕಳನ್ನು ನೇಮಿಸಿಕೊಳ್ಳುವುದರಿಂದ, ಅಂತಹ ಅಪರಾಧ ಎಸಗುವ 'ಅಪ್ರಾಪ್ತರನ್ನು' 'ವಯಸ್ಕರು' ಎಂದು ಕರೆದು ಶಿಕ್ಷಿಸಲು ಬಾಲಾಪರಾಧಿ ಕಾಯ್ದೆಯಲ್ಲಿ ಶಾಶ್ವತ ಅವಕಾಶವನ್ನು ಮಾಡುವ ಅಗತ್ಯವಿದೆ ಎಂದರು. ಬಜರಂಗ ದಳವು ವಿಎಚ್‌ಪಿಯ 0ಯುವ ಘಟಕವಾಗಿದೆ.

ಸರ್ಕಾರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕ್ಷೀಣ; 10,500 ಶಿಕ್ಷಕರು ಹೆಚ್ಚುವರಿ!



ಬೆಂಗಳೂರು: ವರ್ಗಾವಣೆಯ ಹೊಸ ನೀತಿಯ ಅನ್ವಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಿದ್ದು, ಮಕ್ಕಳು ಕಡಿಮೆ ಇರುವ ಶಾಲೆಗಳಲ್ಲಿನ 10,500 ಶಿಕ್ಷಕರನ್ನು 'ಹೆಚ್ಚುವರಿ' ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿದೆ.

ಸರ್ಕಾರ ಒಂದರಿಂದ ಐದನೇ ತರಗತಿಯವರೆಗೆ 40 ವಿದ್ಯಾರ್ಥಿಗಳಿಗೆ, ಆರರಿಂದ ಎಂಟನೇ ತರಗತಿಯವರೆಗೆ 35 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಂತೆ ಅನುಪಾತ ನಿಗದಿ ಮಾಡಿದೆ. ಈ ಅನುಪಾತಕ್ಕೆ ಅನುಗುಣವಾಗಿ ರಾಜ್ಯದ ವಿವಿಧ ಶಾಲೆಗಳಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವರ್ಷ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದ್ದು, ಎರಡು ವರ್ಷಗಳಿಗೆ ಒಮ್ಮೆ ಹೆಚ್ಚುವರಿ ಶಿಕ್ಷಕರ ಪಟ್ಟಿ ಸಿದ್ಧಪಡಿಸಿ, ಅವರನ್ನು ಅಗತ್ಯವಿರುವ ಇತರೆ ಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ಬಾರಿ 10,500 ಶಿಕ್ಷಕರು ಹೆಚ್ಚುವರಿಯಾಗಿದ್ದು, ವರ್ಗಾವಣೆಗೂ ಮೊದಲು ಅವರಿಗೆ ಸ್ಥಳ ನಿಯುಕ್ತಿ ಮಾಡಲಾಗುತ್ತಿದೆ. ನಂತರ ಉಳಿಯುವ ಖಾಲಿ ಹುದ್ದೆಗಳಿಗೆ ಕೌನ್ಸೆಲಿಂಗ್ ಮೂಲಕ ಸಾಮಾನ್ಯ ವರ್ಗಾವಣೆ ಮಾಡಲಾಗುತ್ತದೆ. ಒಂದರಿಂದ ಎಂಟನೇ ತರಗತಿಯವರೆಗಿನ ಪ್ರಾಥಮಿಕ ಶಾಲೆಗಳಲ್ಲಿ 1.53 ಲಕ್ಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ವರ್ಗಾವಣೆಯ ನೀತಿಯಂತೆ ಶೇ.7ರಷ್ಟು ಶಿಕ್ಷಕರು ವರ್ಗಾವಣೆಗೆ ಅವಕಾಶ ಪಡೆಯುತ್ತಾರೆ. ಅಂದರೆ 10,700 ಶಿಕ್ಷಕರು ಈ ಬಾರಿ ವರ್ಗಾವಣೆಗೆ ಅರ್ಹತೆ ಪಡೆಯಲಿದ್ದಾರೆ. ಅಷ್ಟೇ ಸಂಖ್ಯೆಯ ಶಿಕ್ಷಕರು ಹೆಚ್ಚುವರಿಯಾಗಿದ್ದಾರೆ.

200ಕ್ಕಿಂತ ಹೆಚ್ಚಿದ್ದರಷ್ಟೇ ದೈಹಿಕ ಶಿಕ್ಷಣ ಶಿಕ್ಷಕರು: ಯಾವುದೇ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 200ಕ್ಕಿಂತ ಹೆಚ್ಚು ಮಕ್ಕಳಿದ್ದರಷ್ಟೇ ದೈಹಿಕ ಶಿಕ್ಷಣ ಶಿಕ್ಷಕರನ್ನು ಸರ್ಕಾರ ನೀಡುತ್ತದೆ. 200ಕ್ಕಿಂತ ಕಡಿಮೆ ಮಕ್ಕಳಿದ್ದರೆ ಅಲ್ಲಿಗೆ ಅವಕಾಶವಿಲ್ಲ. ಈಗಾಗಲೇ ನೇಮಕಗೊಂಡಿರುವ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದರೆ ಅವರನ್ನು ಹೆಚ್ಚುವರಿ ಎಂದು ಪರಿಗಣಿಸಿ, ಅಗತ್ಯವಿರುವ ಶಾಲೆಗಳಿಗೆ ನಿಯೋಜಿಸಲಾಗುತ್ತಿದೆ. 200ಕ್ಕಿಂತ ಕಡಿಮೆ ಮಕ್ಕಳು ಇದ್ದರೆ ದೈಹಿಕ ಶಿಕ್ಷಣ ಶಿಕ್ಷಕರು ಬೇಡ ಎಂಬ ಇಲಾಖೆಯ ನಿರ್ಧಾರವೇ ಅವೈಜ್ಞಾನಿಕ. 199 ಇರುವ ಮಕ್ಕಳು ದೈಹಿಕ ಶಿಕ್ಷಣ ತರಬೇತಿಯಿಂದ ವಂಚಿತರಾಗಬೇಕೇ ಪ್ರತಿ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಸರ್ಕಾರದ ಧ್ಯೇಯಕ್ಕೆ ಇಂತಹ ನೀತಿಗಳು ವಿರುದ್ಧವಾಗಿವೆ. ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹಾಳಾಗುತ್ತಿರುವ ಪರಿ ಸ್ಥಿತಿ ನಿರ್ಮಾಣವಾಗುತ್ತಿದೆ. ತಕ್ಷಣ ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ತಡೆಹಾಕ ಬೇಕು ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶಿಕ್ಷಣ ಇಲಾಖೆ ಆಯುಕ್ತ ಆರ್.ವಿಶಾಲ್ ಅವರಿಗೆ ಲಿಖಿತ ಪತ್ರ ಬರೆದಿದ್ದಾರೆ.

ನಿಧನ


ಎಸ್.ಎನ್.ಜೋಷಿ



ಮೈಸೂರು, ಜ.16– ಮೈಸೂರಿನ ಅಡ್ವಾನ್ಸ್ ಕಾಂಪೋನೆಂಟ್ಸ್ ಡೈರೆಕ್ಟರ್ ಎಸ್.ಎನ್.ಜೋಷಿ (79) ಅವರು ಇಂದು ನಿಧನರಾದರು.

ಇವರು ಪತ್ನಿ, ಅಡ್ವಾನ್ಸ್ ಕಾಂಪೋನೆಂಟ್ಸ್ ನಿರ್ದೇಶಕರಲ್ಲಿ ಒಬ್ಬರಾದ ವಿಕ್ರಮ್ ಸೇರಿ ಇಬ್ಬರು ಪುತ್ರರು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತುಫೈಲ್ ಅಹಮದ್ ಮೇಕ್ರಿ



ಹಲವಾರು ಮುಸ್ಲಿಂ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಮೈಸೂರಿನ ಸುಭಾಷ್‌ನಗರ ನಿವಾಸಿ ತುಫೈಲ್ ಅಹಮದ್ ಮೇಕ್ರಿ(97) ಅವರು ಸೋಮವಾರ ನಿಧನರಾದರು.

ಇವರು ಫರೂಖಿಯಾ ಎಜುಕೇಷನ್ ಸೊಸೈಟಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಮೃತರು ಮೈಸೂರು ಜಿಲ್ಲಾ ವಕ್ಫ್ ಬೋರ್ಡ್‌ನ ಮಾಜಿ ಛೇರ್ಮನ್ ಆರೀಫ್ ಮೇಕ್ರಿ ಸೇರಿದಂತೆ ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ (ಜ.17) ಮಧ್ಯಾಹ್ನ 1 ಗಂಟೆಗೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ತನ್ವೀರ್ ಸೇಠ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯ್ಯದ್ ಎಕ್ಬಾಲ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿ ಸೈಯ್ಯದ್ ಫಾರೂಖ್, ನಗರ ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಶಹಾಬುದ್ದೀನ್ ಇನ್ನಿತರರು ಸಂತಾಪ ಸೂಚಿಸಿದ್ದಾರೆ.

ವಿಕಲಚೇತನ ಮಕ್ಕಳ ಭವಿಷ್ಯ ರೂಪಿಸಲು ಶಿಕ್ಷಕರು ಮುತುವರ್ಜಿ ವಹಿಸಲಿ

- ಉದ್ಯಮಿ ಆರ್.ಗುರು ಕಿವಿಮಾತು
- ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ವಾರ್ಷಿಕೋತ್ಸವ



ಮೈಸೂರು ಸರಸ್ವತಿಪುರಂನಲ್ಲಿರುವ ರೋಟರಿ ವೆಸ್ಟ್ ಸಭಾಂಗಣದಲ್ಲಿ ಸೋಮವಾರ ನಡೆದ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆ ವಾರ್ಷಿಕೋತ್ಸವದಲ್ಲಿ ಲಯನ್ ಪ್ರೊ.ನ.ವೆಂಕೋಬಾರಾವ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಉದ್ಯಮಿಗಳಾದ ಆರ್.ಗುರು, ಜಗನ್ನಾಥ್ ಶೆಣೈ, ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಉಪಸ್ಥಿತರಿದ್ದರು.

ಮೈಸೂರು,ಜ.16(ಎಸ್‌ಪಿಎನ್)–ವಿಕಲಚೇತನ ಮಕ್ಕಳಿಗೆ ಅನುಕಂಪಗಿಂತ ಅವಕಾಶಗಳು ಮುಖ್ಯ. ಅದಕ್ಕಾಗಿ ಶಿಕ್ಷರು ಕೊಠಡಿಯಲ್ಲಿ ಮುತುವರ್ಜಿ ವಹಿಸಿ ಭವಿಷ್ಯ ರೂಪಿಸಲು ಮುಂದಾಗಬೇಕು ಎಂದು ಉದ್ಯಮಿ ಆರ್.ಗುರು ಸಲಹೆ ನೀಡಿದರು.

ಮೈಸೂರು ಸರಸ್ವತಿಪುರಂನಲ್ಲಿರುವ ರೋಟರಿ ವೆಸ್ಟ್ ಸಭಾಂಗಣದಲ್ಲಿ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಹತೆ ಹೊಂದಿರುವ ವಿಕಲಚೇತನ ಅರ್ಹ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿ ಅವಕಾಶ ದೊರಕುತ್ತಿದೆ. ಏಕೆಂದರೆ, ಅವರಿಗೂ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಿದರೆ, ಅವರ ಮುಂದಿನ ಭವಿಷ್ಯವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯು ಹಲವು ವರ್ಷಗಳಿಂದ ಬುದ್ಧಿಮಾಂದ್ಯ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ. ಇದರಿಂದ ಹಲವು ವಿಶೇಷಚೇತನ ಮಕ್ಕಳ ಭವಿಷ್ಯ ರೂಪಿಸಲು ಸಾಧ್ಯವಾಗಿದೆ. ಈ ಮಕ್ಕಳ ಪೋಷಕರಿಗೆ ತಮ್ಮ ಮಕ್ಕಳ ಮುಂದಿನ ಭವಿಷ್ಯ ಕುರಿತು ಸದಾ ಅನಿಶ್ಚಿತಃ ಕಾಡುತ್ತಿರುತ್ತದೆ. ಪೋಷಕರು ತಮ್ಮ ಮಕ್ಕಳ ಭವಿಷ್ಯ ಸಂಬಂಧ ಆತಂಕದಿಂದ ಹೊರಬರಲು ಸಮಾಜ ಮತ್ತು ಶಿಕ್ಷಕರ ಸಹಕಾರ ಅತೀ ಮುಖ್ಯ ಎಂದು ಹೇಳಿದರು.

ಕೈಗಾರಿಕೋದ್ಯಮಿ ಜಗನ್ನಾಥ್ ಶೆಣೈ ಮಾತನಾಡಿ, ಬುದ್ಧಿಮಾಂದ್ಯ ಮಕ್ಕಳ ಕಲಿಕೆಯಲ್ಲಿ ಶಿಕ್ಷಕರು ತಾಯಿಯಾಗಿ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಇಂತಹ ಮಕ್ಕಳಿಗೆ ಭವಿಷ್ಯ ರೂಪಿಸಲು ಸಾಧ್ಯವಿದೆ ಎಂದರು.

ಕಳೆದ ಹಲವು ವರ್ಷಗಳಿಂದ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಮುಖ್ಯಸ್ಥರಾಗಿ ನ.ವೆಂಕೋಬರಾವ್ ಅವರ ಸೇವೆ ಅನನ್ಯ. ಅವರನ್ನು ಇಂದಿನ ವಾರ್ಷಿಕೋತ್ಸವದಲ್ಲಿ ವಿಶೇಷವಾಗಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಎಂಜೆಎಫ್ ಪದನಾಮ ಫಲಕ ವಿತರಣೆ: ಇದೇ ವೇಳೆ ಕಳೆದ ಹಲವು ವರ್ಷಗಳಿಂದ ಲಯನ್ಸ್ ಸಂಸ್ಥೆಯ ವಿವಿಧ ಹುದ್ದೆಗಳನ್ನು ಅಲಂಕರಿಸಿ, ಸಮಾಜ ಸೇವೆಯಲ್ಲಿ ತೊಡಗಿದ್ದ ಲಯನ್ ಪ್ರೊ.ನ. ವೆಂಕೋಬಾರಾವ್, ಲಯನ್ಸ್ ಸಂಸ್ಥೆ ಸ್ಥಾಪಕ 'ಮೆಲ್ವಿನ್ ಜೋನ್ಸ್ ಫೆಲೋ' (ಎಂಜೆಎಫ್) ಅಂತರ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅದರ ಪದನಾಮ ಫಲಕವನ್ನು ಲಯನ್ ಎನ್.ಕೃಷ್ಣೇಗೌಡ, ಲಯನ್ ಎನ್.ಸುಬ್ರಹ್ಮಣ್ಯ, ಲಯನ್ ಕೆ.ಎಲ್.ರಾಜ ಶೇಖರ್ ಹಾಗೂ ಲಯನ್ ಕೆ.ದೇವೇಗೌಡ ನೇತೃತ್ವದಲ್ಲಿ ವಿತರಿಸಲಾಯಿತು.

ಈ ವೇಳೆ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಅಧ್ಯಕ್ಷ ರವೀಂದ್ರ ಜೋಶಿ, ಮ್ಯಾನೇಜಿಂಗ್ ಟ್ರಸ್ಟಿ ಪೃಥ್ವಿ ಸುಧೀಂದರ್, ಖಜಾಂಚಿ ಡಾ.ಅನಿಲ್‌ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ನಂತರ ವಿಶೇಷಚೇತನ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ ಈ ವಾರ ಫುಲ್ ಸಿನಿಮಾಗೆ ಹೋಗೋಣಾ..
ಬರುವ ವಾರ ಫುಲ್ ಶಾಪಿಂಗ್ ಮಾಡೋಣ..
ಪತಿ : ಅದರ ಮುಂದಿನ ವಾರ ಫುಲ್ ದೇವಸ್ಥಾನಕ್ಕೆ ಹೋಗೋಣಾ.
ಪತ್ನಿ : ಯಾಕೆ?
ಪತಿ : ಭಿಕ್ಷೆ ಬೇಡೋಕೆ!

ಮೈಸೂರು ಮಿತ್ರ

ಮಂಗಳವಾರ, 17 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸುಖ ನಮ್ಮಲ್ಲಿನ ಕೆಟ್ಟದ್ದನ್ನು, ಹೊರತಂದರೆ, ಕಷ್ಟ ನಮ್ಮಲ್ಲಿನ ಒಳ್ಳೆಯದನ್ನು ಹೊರತರುತ್ತದೆ. – ಫ್ರಾನ್ಸಿಸ್ ಬೇಕನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಂಬಿ ತುಂಬಿ ಹೊಯ್ದರೂ ಹಂಬಲ ಮಾತ್ರ ಹೋಗದು

ನಿಮ್ಮ ಪತ್ರಗಳು

ಉಚಿತ ಕೊಡುಗೆಗಳು ದೇಶಕ್ಕೆ ಮಾರಕ!

ಮಾನ್ಯರೆ,

ಚುನಾವಣೆ ವೇಳೆಯ ಸಮಯದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ತಮ್ಮತ್ತ ಸೆಳೆಯಲು ಘೋಷಣೆ ಮಾಡುವ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಹೇಗಾದರೂ ಸರಿ ಅಧಿಕಾರಕ್ಕೇರಲೇಬೇಕು ಎಂಬ ಉಮೇದಿಯೊಂದಿಗೆ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಉಚಿತ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆಬೀಳುವುದು ತೆರಿಗೆದಾರರ ಮೇಲೆಯೇ. ಒಂದು ಪಕ್ಷ ಅಧಿಕಾರದ ಗದ್ದುಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಚರ್ಚೆ ಹಾಗೂ ಆತ್ಮಾವಲೋಕನ ನಡೆಯುವುದು ಅವಶ್ಯಕ.

ಉಚಿತ ಘೋಷಣೆಗಳ ಜಾರಿಯಿಂದಾಗಿ ರಾಜ್ಯ ಹಾಗೂ ದೇಶಗಳ ಆರ್ಥಿಕ ಪರಿಸ್ಥಿತಿ ಹಳ್ಳ ಹಿಡಿಯುತ್ತದೆ. ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಯ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೇ ಹೊರತು ಉಚಿತ ಘೋಷಣೆಗಳನ್ನು ಮಾಡಿ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸುವುದಲ್ಲ. ಉಚಿತ ವಿದ್ಯುತ್, ಉಚಿತ ಬಸ್ ಪ್ರಯಾಣ, ಉಚಿತ ನೀರು... ಹೀಗೆ ಸಾಲು ಸಾಲು ಉಚಿತವಾಗಿ ಕೊಡುತ್ತೇವೆ ಎಂಬ ಭರವಸೆಗಳನ್ನು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಮೊದಲು ಕೈಬಿಡಬೇಕು. ಪ್ರತಿ ಚುನಾವಣೆಯಲ್ಲಿ ಜನರಿಗೆ ನೀಡಲಾಗುವ ಈ ರೀತಿಯ ಉಚಿತ ಘೋಷಣೆ ಹಾಗೂ ಕೊಡುಗೆಗಳಿಗೆ ಇತಿಶ್ರೀ ಹಾಕಲೇಬೇಕಾಗಿದೆ. ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಈ ಉಚಿತ ಕೊಡುಗೆಗಳಿಂದ ರಾಜ್ಯ ಹಾಗೂ ರಾಷ್ಟ್ರದ ಆರ್ಥಿಕತೆಯ ಮೇಲೆ ಬೀಳುವ ಗಂಭೀರ ಪರಿಣಾಮವನ್ನು ಎಲ್ಲರೂ ಅರಿಯಬೇಕಿದೆ. ಅದೇ ರೀತಿ ರಾಜಕೀಯ ಪಕ್ಷಗಳು ಎಲ್ಲವನ್ನು ಉಚಿತವಾಗಿ ನೀಡುತ್ತೇವೆ ಎಂಬ ಆಶ್ವಾಸನೆಗಳನ್ನು ಬದಿಗಿಟ್ಟು, ಜನತೆಗೆ ಉಚಿತವಾಗಿ ಕೊಡುವುದನ್ನೇ ಕಡಿಮೆ ಬೆಲೆಗೆ ಕೊಟ್ಟು ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡಿ ದುಡಿಯುವ ಕೈಗಳಿಗೆ ಕೆಲಸ ಕೊಡುವ ಪ್ರಾಮಾಣಿಕ ನಿಟ್ಟಿನತ್ತ ಎಲ್ಲಾ ರಾಜಕೀಯ ಪಕ್ಷಗಳು ಚಿಂತಿಸುವುದು ಅಗತ್ಯ ಹಾಗೂ ಅವಶ್ಯಕವಾಗಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ರೈಲ್ವೆ ಕನ್ನಡೀಕರಣದ ಅಭಾಸಗಳನ್ನು ತಪ್ಪಿಸಲಿ



ಮಾನ್ಯರೇ,

ರೈಲ್ವೆಯು ತನ್ನ ನಾಮಫಲಕಗಳಲ್ಲಿ ಕನ್ನಡ ಭಾಷೆ ಲಿಪಿಯನ್ನು ತನ್ನದೇ ಶೈಲಿಯಲ್ಲಿ ಬರೆಯುವ ರೀತಿ ಹೊಸದೇನಲ್ಲ. ಭಾಷಾಂತರಿಸಿ ಬರೆಯುವಾಗಲೂ ಇಂತಹ ಅನೇಕ ಅಭಾಸಗಳನ್ನು ಕಾಣಬಹುದು. ಇಂತಹ ಹಲವು ನಾಮಫಲಕಗಳು ಜನರನ್ನು ಗೊಂದಲಕ್ಕೀಡು ಮಾಡಿದರೆ ಇನ್ನೂ ಕೆಲವು ಹಾಸ್ಯಾಸ್ಪದವಾಗಿರುತ್ತವೆ.

ಇದಕ್ಕೊಂದು ಉದಾಹರಣೆ ಇಲ್ಲಿದೆ. ಹೈದರಾಬಾದ್‌ನ 'ಕಾಚಿಗುಡ' ನಿಲ್ದಾಣಕ್ಕೆ ತೆರಳುವ ರೈಲಿನ ನಾಮಫಲಕದಲ್ಲಿ ರೈಲ್ವೆ 'ಕಾಚೇಗೌಡ' ಎಂದು ಕನ್ನಡೀಕರಣ ಮಾಡಿದೆ.

ಪ್ರಯಾಣಿಕರು ತಮ್ಮ ವಿವೇಚನೆ ಮತ್ತು ಜವಾಬ್ದಾರಿಯಿಂದ ಯಾವುದೇ ಗೊಂದಲಕ್ಕೊಳಗಾಗದೇ ಪ್ರಯಾಣಿಸುತ್ತಿದ್ದರೂ ಇಂತಹ ಅಭಾಸ, ಹಾಸ್ಯಾಸ್ಪದ ಮತ್ತು ಗೊಂದಲ ಪೂರ್ಣ ಕನ್ನಡೀಕರಣಗಳಿಗೆ ರೈಲ್ವೆ ಇತಿಶ್ರೀ ಹಾಡಲು ಸ್ಥಳೀಯ ಕನ್ನಡಿಗ ಭಾಷಾ ಪರಿಣಿತರ ಸಹಾಯ ಪಡೆಯಲಿ.

–ಅನಿಲ್ ಕುಮಾರ್ ನಾಡಿಗೇರ್, ಇಂಧನ ಹಾಗೂ ಪರಿಸರ ಸಲಹೆಗಾರರು, ಮೈಸೂರು.

ಬೂಸ್ಟರ್ ಡೋಸ್‌ಗೆ ಲಸಿಕೆ ಕೊರತೆ

ಮಾನ್ಯರೆ,

ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಕೋವಿಡ್ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆ ಆದಷ್ಟು ಬೇಗ ಬೂಸ್ಟರ್ ಡೋಸ್ ತೆಗೆದುಕೊಳ್ಳುವಂತೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಆದರೆ ಈ ನಡುವೆ ರಾಜ್ಯದ ಕೋವಿ ಶಿಲ್ಡ್ ಮತ್ತು ಕಾರ್ಬೋವ್ಯಾಕ್ಸ್ ಕೊರತೆ ಎದುರಾಗಿದೆ ಎಂದು ತಿಳಿದುಬಂದಿದೆ. ಕಳೆದ ಬುಧವಾರದವರೆಗೆ ರಾಜ್ಯದಲ್ಲಿ 6.87 ಲಕ್ಷ ಕೊವ್ಯಾಕ್ಸಿನ್ ಲಭ್ಯವಿತ್ತು. ರಾಜ್ಯದಲ್ಲಿ ಬಹು ಜನರು ಎರಡು ಡೋಸ್ ತೆಗೆದುಕೊಂಡಿದ್ದು ಮುಂದಿನ ಬೂಸ್ಟರ್‌ಗಾಗಿ ಕಾಯುತ್ತಿದ್ದಾರೆ. ಕೋವಿಶೀಲ್ಡ್ ಅನ್ನು ಆಯ್ಕೆ ಮಾಡಿದ್ದಾರೆ. ಅಂತಹವರಿಗೆ ಅದೇ ಲಸಿಕೆ ಅಥವಾ ಹೆಟೇರೋ ಲಾಜಸ್ ಕಾರ್ಬೋವ್ಯಾಕ್ಸ್ ನೀಡಬೇಕಾಗುತ್ತದೆ. ಆದಾಗ್ಯೂ ಹೆಚ್ಚಿನ ಆರೋಗ್ಯ ಕೇಂದ್ರಗಳಲ್ಲಿ ಕೋವಿ ಶೀಲ್ಡ್ ಮತ್ತು ಕಾರ್ಬೋವ್ಯಾಕ್ಸ್ ಎರಡು ಲಭ್ಯವಿಲ್ಲದಾಗಿದೆ. ಇದರಿಂದ ಜನರಿಗೆ ಸೂಕ್ತ ವ್ಯಾಕ್ಸಿನ್ ದೊರಕದೆ ಕೊರೋನಾ ಸೋಂಕು ಭಯ ಪಡುವಂತಾಗಿದೆ. ಇದರಿಂದ ರಾಜ್ಯ ಸರ್ಕಾರ ಎಲ್ಲರಿಗೂ ಬೂಸ್ಟರ್ ಡೋಸ್ ದೊರಕುವಂತೆ ಮಾಡಬೇಕಾಗಿ ಮನವಿ

–ವಿಜಯ್ ಕೆ ಎಂ, ಮಹಾರಾಜ ಕಾಲೇಜು, ಮೈಸೂರು

ಸ್ಯಾಂಟ್ರೋ ರವಿಗೆ ರಾಜ ಗೌರವ ಬೇಕೆ?

ಮಾನ್ಯರೆ,

ಕಳೆದ ಒಂದು ವಾರದಿಂದ ದಿನಪತ್ರಿಕೆ, ಇನ್ನಿತರೆ ಸುದ್ದಿ ಮಾಧ್ಯಮಗಳಲ್ಲಿ ಕೇಳಿ ಬಂದಿದ್ದು, ಸ್ಯಾಂಟ್ರೋ ರವಿ ಅಲಿಯಾಸ್ ಮಂಜುನಾಥನನ್ನು ಪೊಲೀಸರು ಗುಜರಾತ್‌ನಿಂದ ಬಂಧಿಸಿ ಕರ್ನಾಟಕಕ್ಕೆ ಕರೆದುಕೊಂಡ ಬಂದಿದ್ದಾರೆ. ಇಲ್ಲಿ ಗಮನಿಸಬಹುದಾದ ವಿಚಾರವೆಂದರೆ ಈತ ಮಾಡಿದ್ದು ಸಮಾಜ ಸೇವೆ ಏನು ಅಲ್ಲ, ಬದಲಾಗಿ ವೇಶ್ಯಾ ವಾಟಿಕೆಯನ್ನು ತನ್ನ ಸ್ಯಾಂಟ್ರೋ ಕಾರಿನಲ್ಲೇ ದಂಧೆ ನಡೆಸುತ್ತಿದ್ದ ಎಂಬ ಮಾಹಿತಿ ಇದೆ. ಅಧಿಕಾರಿಗಳ ಟ್ರಾನ್ಸ್‌ಫರ್ ದಂಧೆಯೂ ಸೇರಿ ಪ್ರಸ್ತುತ ಕೆಲ ಆಡಿಯೋ, ಪ್ರಭಾವಿ ನಾಯಕರ ಜೊತೆಗಿನ ಫೋಟೋಗಳಿಂದ ಆರೋಪಗಳು ಬೆಳಕಿಗೆ ಬಂದಿದ್ದು, ಈತನನ್ನು ಬಂಧಿಸಲು ಸರಿಸುಮಾರು 7 ವಿಶೇಷ ಪೊಲೀಸ್ ತಂಡಗಳಿಂದ ಕಾರ್ಯಾಚರಣೆ ನಡೆಸಲಾಯಿತು.

ಉದಾಹರಣೆಗೆ ಸಮಾಜದಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಸಣ್ಣ ತಪ್ಪು ಮಾಡಿದಾಗ ತಕ್ಷಣಕ್ಕೆ ದಂಡ ವಿಧಿಸುವುದು, ಕೇಸ್ ದಾಖಲೆ, ಜೆಸಿಬಿ ಮೂಲಕ ಕಟ್ಟಡವನ್ನು ನೆಲಸಮ ಮಾಡುವುದು ಹೀಗೆ ಎಲ್ಲಾ ಕಠಿಣ ಕಾನೂನು ಕ್ರಮ ಜರುಗುವ ಸಾಧ್ಯತೆ ಹೆಚ್ಚು. ಆದರೆ ಪ್ರಭಾವಿ ವ್ಯಕ್ತಿಗಳ ಬಂಧನ, ಕೇಸ್ ದಾಖಲು ಅಂತ ಬಂದಾಗ ಅವರಿಗೆ ವಿಶೇಷ ಪ್ರಾಮುಖ್ಯತೆ ನೀಡುವುದರಿಂದ ಅಂತಹವರು ಸಮಾಜದಲ್ಲಿ ರಾಜಾರೋಷವಾಗಿ ಬದುಕುತ್ತಾರೆ. ಇನ್ನು ಸ್ಯಾಂಟ್ರೋ ರವಿ ಯಾರೆಲ್ಲರ ಜತೆಗೆ ಯಾವ ರೀತಿಯ ನಂಟು ಇತ್ತು ಎಂಬುದು ಹೊರ ಬರಬೇಕಾಗಿದೆ.

–ಆನಂದ ಜೇವೂರ್, ಕಲಬುರಗಿ



ಡಾ. ಗುಬ್ಬಿಗೂಡು ರಮೇಶ್
ಮೊ : 97429–34512


ದೀಪ ಸಾಲು

ಅಂಕದ ಪರದೆಯ ಸರದಿ! ಕಣ್ಣ ಮುಂದಿನ ಮಾದರಿಗಳು



ಮುಕೇಶ್ ಅಂಬಾನಿ


ಅನಿಲ್ ಅಂಬಾನಿ


ಸಚಿನ್ ತೆಂಡೂಲ್ಕರ್


ವಿನೋದ್ ಕಾಂಬ್ಳಿ


ಡಾ.ರಾಜ್‌ಕುಮಾರ್


ಕಲ್ಯಾಣ್‌ಕುಮಾರ್


ಉದಯ್‌ಕುಮಾರ್


ರಾಧಿಕಾ ಪಂಡಿತ್


ಶುಭ ಪೂಂಜಾ

ಮನುಷ್ಯರಲ್ಲಿ ಸಾಮಾನ್ಯವಾಗಿ ಎರಡು ವರ್ಗಗಳಿವೆ. ಒಂದು ಹಠಕ್ಕೆ ಬಿದ್ದು ಏಣಿ ಹತ್ತಿ ಅಸಾಧ್ಯವಾದುದನ್ನೇ ಸಾಧ್ಯ ಮಾಡಿ ಸಾಧಕರ ಗುಂಪಿಗೆ ಸೇರಿಕೊಳ್ಳುವವರ ವರ್ಗ. ಮತ್ತೊಂದು ಹಗಲಿರುಳೆನ್ನದೆ ದುಡಿದು ಆಕಾಶಕ್ಕೇರಿದವರ, ಸಾಧನೆ ಸಂಸ್ಕಾರಗಳನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿ, ಅಧ್ಯಯನ ಮಾಡಿ, ಓದಿ, ತಿಳಿದು ಸಂಭ್ರಮಿಸುವ ವರ್ಗ. ಅದರಲ್ಲೂ ಕೆಲವರು ಇಂಥಾ ಮಹಾನ್ ಸಾಧಕರ ಸಾಧನೆಗಳ ಸಾಫಲ್ಯತೆಗೆ ತಾವೂ ಕೂಡ ಮಾರು ಹೋಗಿ, ಅದೇ ದಾರಿಯಲ್ಲಿ ಸಾಗುತ್ತಾ ಅವರ ಪ್ರೇರಣೆ–ಪ್ರಭಾವಗಳಿಗೆ ಒಳಗಾಗುವುದು ಲೋಕಾರೂಢಿ.

ಅನಾದಿ ಕಾಲದಿಂದ ವರ್ತಮಾನದವರೆಗೆ ಈ ಪ್ರಕಾರದ ತಲೆಮಾರಿನ ಸಂಚಲನ ನಡೆದೇ ಇದೆ. ಆದರೆ ಇವತ್ತು ಮೇಲಿನ ಲೋಕಾರೂಢಿಯಂತೆ, ನಡೆದು ಬಂದ ದಾರಿಗೆ, ಕವಲುದಾರಿಯಾಗಿ ಟಿಸಿಲೊಡೆದ ವಿಚಿತ್ರ ವೈರುಧ್ಯದ ಸಂಗತಿಗಳು ಪ್ರತಿಯೊಬ್ಬರ ಬದುಕಿನ ಅಧ್ಯಾಯದಲ್ಲೂ ಚಲಿಸುವ ಮೋಡಗಳಂತೆ ಚಲಿಸುತ್ತವೆ. ಅಂದರೆ ಕೆಲವು ಸಂದರ್ಭಗಳಲ್ಲಿ ಪ್ರಭಾವವೂ ಇಲ್ಲ, ಪ್ರೇರಣೆಯೂ ಇಲ್ಲ! ಪ್ರತಿಫಲಗಳ ಪಾತಳಿಯ ಮೇಲೆ ಸೌಧಗಳನ್ನು ಕಟ್ಟಲು ಹೊರಟವರು, ಪ್ರತಿಭೆಗಳ ಪ್ರಾಂಜಲದಿಂದ ಪ್ರಸಿದ್ಧರಾದವರು, ಪಿತ್ರಾರ್ಜಿತವಾಗಿ ಬಂದ ಸಂಪತ್ತಿನ ಸುಪ್ಪತ್ತಿಗೆಯ ಮೇಲೆ ಕುಳಿತು ಗೆಲುವಿನ ಕೀಲು ಕುದುರೆ ಆಡಿಸಿದವರು, ಲೋಕ ನಡೆದು ಬಂದ ದಾರಿಯಲ್ಲಿ ಅಪ್ಪ ಕೊಟ್ಟ ಬಳುವಳಿಯನ್ನು ದುಪ್ಪಟ್ಟು ಮಾಡಿದವರು, ಕಠಾರಿ ವೀರರಂತೆ ಕತ್ತಿ ಝಳಪಿಸುತ್ತಾರೆ. ಆದರೆ ಅದರಲ್ಲೂ ಕೆಲವರು ಎಲ್ಲವನ್ನೂ ಕಳೆದುಕೊಂಡು ನಿಪ್ಪಟ್ಟಿನ ಥರ ಆದವರೂ ಇದ್ದಾರೆ. ಆದರೆ ಈ ಕವಲುದಾರಿಯ ಪಯಣ ಹಾಗಲ್ಲ, ಇವು ಒಂದೇ ಬಳ್ಳಿಯ ಹೂಗಳು. ಅವಕ್ಕೆ ಹೊಕ್ಕಳು ಬಳ್ಳಿಯ ಸಂಬಂಧವಿದೆ. ಸ್ನೇಹ ಸಿರಿಗಂಧದ ಸೇತುಬಂಧವಿದೆ. ಸಾಮ್ಯತೆಯ ಸಮಕಾಲೀನ ಸುಸಂಗತಿಗಳಿವೆ. ಒಟ್ಟಾರೆ ಒಂದೇ ಕಾಲದಲ್ಲಿ, ಒಂದೇ ಕುಟುಂಬದಲ್ಲಿ, ಒಂದೇ ಥರದ ಸಾಧನೆಯ ಪಥದಲ್ಲಿ, ಒಟ್ಟೊಟ್ಟಿಗೆ ಏಕ ಕಾಲಕ್ಕೇ ಸಾಗಿ ಬಂದ ಸಾಧಕರನೇಕರು ಬೇರೆ ಬೇರೆ ಕ್ಷೇತ್ರಗಳಲ್ಲಿ ಸೊಂಪಾಗಿ ಸ್ವರ್ಗ ಸೃಷ್ಟಿಸಿಕೊಂಡವರೂ ಇದ್ದಾರೆ. ಮಂಕಾಗಿ ಮನೆ ಸೇರಿದವರೂ ಇದ್ದಾರೆ. ಇದೇ ಕವಲುದಾರಿಯ ಪಯಣ, ಒಂದೇ ಬಳ್ಳಿಯ ಹೂಗಳ ಮುಖಾಮುಖಿಯ ರೋದನ. ಇಂಥ ವಿಕ್ಷಿಪ್ತ ಪಾತ್ರಗಳ ಜೀವನ ತಂದಿಟ್ಟ ಘಟನೆಗಳ ಪಾಸಿಂಗ್ ಶಾಟ್‌ಗಳು ಆಗಾಗ ಚಲಿಸುವ ಮೋಡ ಗಳಂತೆ ನಮ್ಮ ಕಣ್ಣ ಮುಂದೆಯೇ ಹಾದು ಹೋಗುತ್ತಿರುತ್ತವೆ. ಇಂಥ ಚಲಿಸುವ ಮೋಡಗಳ ಕತೆಯೇ ನಮ್ಮ ಕಣ್ಣ ಮುಂದಿನ ಮಾದರಿಗಳು.

ಮುಖೇಶ್ ಅಂಬಾನಿ, ಅನಿಲ್ ಅಂಬಾನಿ ಇಬ್ಬರೂ ಅಣ್ಣತಮ್ಮಂದಿರು. ತಮ್ಮ ತಂದೆ ಧೀರೂಬಾಯ್ ಅಂಬಾನಿ ದುಡಿದು ಮಾಡಿದ ದುಡ್ಡು ಆಸ್ತಿ ಇಬ್ಬರೂ ಮಕ್ಕಳಿಗೆ ಸರಿಸಮನಾಗಿಯೇ ಹಂಚಿಕೆಯಾಯಿತು. ಆದರೆ ತಂದೆಯ ಶ್ರೀಮಂತಿಕೆ ಮಕ್ಕಳಿಗೆ ವರ್ಗಾವಣೆಯಾದ ಮೇಲೆ ಇಬ್ಬರು ಸ್ವತಂತ್ರ ಉದ್ಯಮಿಗಳಾದರು. Again ಅದೇ ಲೋಕಾರೂಢಿಯ ನಡೆದು ಬಂದ ದಾರಿಯ ಲೆಕ್ಕಾಚಾರ ಶುರುವಾಯಿತು. ಇಬ್ಬರಿಗೂ ಪಿತ್ರಾರ್ಜಿತವಾಗಿ ಬಂದ ಸಂಪತ್ತನ್ನು ದುಪ್ಪಟ್ಟು ಮಾಡುವ ಹಂಬಲ. ಎಲ್ಲರಂತೆ, ಎಲ್ಲದರಂತೆ ಇಲ್ಲೂ ಕೂಡ ಸಹೋದರರಿಬ್ಬರು ವ್ಯಾಪಾರದ ಕುದುರೆ ಓಡಿಸಿದರು. ಆದರೆ ವಿಚಿತ್ರ ನೋಡಿ! ಒಂದೇ ವೇಗ, ಒಂದೇ ದಾರಿ, ಒಂದೇ ಗುರಿಯಿರಿಸಿಕೊಂಡು ಓಡಿದ ಕುದುರೆಗಳು ಓಡುತ್ತಲೇ ಲೋಕಾರೂಢಿಯ ಲೆಕ್ಕಾಚಾರದ ನಡೆದುಬಂದ ದಾರಿಯ ಜಾಡು ಮರೆತು ಕವಲು ದಾರಿಯಲ್ಲಿ ಸಾಗಿದವು. ಒಂದು ಕುದುರೆ ಲೆಕ್ಕಾಚಾರದಲ್ಲಿ ಗೆದ್ದು ಬೀಗಿದರೆ! ಮತ್ತೊಂದು ಕುದುರೆ ಹತಾಶೆಯ ಉರುಳಿಗೆ ಸಿಲುಕಿ ಸೋಲಿನ ಕುಣಿಕೆಗೆ ಕೊರಳೊಡ್ಡಿತು. ಗೆದ್ದು ಬೀಗಿದ ಮತ್ತೊಂದು ಕುದುರೆ ಗೆಲುವಿನ ಚಿಮ್ಮು ಹಲಗೆಯ ಮೇಲೆ ಇನ್ನೂ ಓಡುತ್ತಿದೆ.

ನಮ್ಮದೇ ಕಾಲದಲ್ಲಿ ಅಂದರೆ 2002ರಲ್ಲಿ ಅಪ್ಪ ಧೀರೂಬಾಯಿ ಅಂಬಾನಿಯ ಆರ್ಥಿಕ ಸಾಮ್ರಾಜ್ಯದ ಒಡೆತನದ ಪಾಲು ಹಂಚಿಕೊಂಡ ಸೋದರರಲ್ಲಿ ಅಣ್ಣ ಮುಖೇಶ್ ಅಂಬಾನಿ ಇವತ್ತು ಪ್ರಪಂಚದ 21ನೇ ಸಂಖ್ಯೆಯಲ್ಲಿ ಗುರುತಿಸಿಕೊಂಡ, ಈಗ ಏಷ್ಯಾದ 2ನೇ ಬಿಲಿಯನೇರ್ ಶ್ರೀಮಂತನಾಗಿ ಆರ್ಥಿಕ ಸಫಲತೆ ಕಂಡುಕೊಂಡ. ಪ್ರಪಂಚದ ಪ್ರಭಾವಿ ವ್ಯಕ್ತಿಗಳ ಸಾಲಿನಲ್ಲಿ ಇಂದು 8ನೆಯ ಸಂಖ್ಯೆಯ ಸ್ಥಾನಮಾನ ದಕ್ಕಿಸಿಕೊಂಡ. ಭಾರತದ ಅತೀ ದೊಡ್ಡ ಶ್ರೀಮಂತರ ಪೈಕಿ ಮೊದಲ ಸಾಲಿನಲ್ಲಿ ಬೀಗಿದ. ಅದೇ ಅಪ್ಪನ ರಕ್ತ ಹಂಚಿಕೊಂಡು ಹುಟ್ಟಿದ ಅದೇ ಕುಟುಂಬದ ಅನಿಲ್ ಅಂಬಾನಿ 716 ಮಿಲಿಯನ್ ಡಾಲರ್ ಸಾಲಗಾರನಾದ. ಅನಿಲ್ ನಡೆಸುತ್ತಿದ್ದ ರಿಲಯನ್ಸ್ ಕಮ್ಯುನಿಕೇಷನ್ ಕಂಪನಿಗೆ 2012ರಲ್ಲಿ ಚೀನಾದ 3 ಕಂಪನಿಗಳು 6800 ಕೋಟಿ ರೂ ಸಾಲ ನೀಡಿ ಅದರ ಮರುಪಾವತಿ ಮಾಡದ ಕಾರಣ, ಅನಿಲ್ ಮೇಲೆ ಲಂಡನ್ ಕೋರ್ಟಿನಲ್ಲಿ ದಾವೆ ಹೂಡಿದ್ದವು. ಇಂಥ ಹೊತ್ತಿನಲ್ಲಿ ಬ್ರಿಟನ್ ನ್ಯಾಯಾಲಯದ ಮುಂದೆ ಮಂಡಿಯೂರಿ ನಿಂತ ಅನಿಲ್ ಅಂಬಾನಿ ಕೊಟ್ಟ ಹೇಳಿಕೆ ಹೇಗಿತ್ತು ಗೊತ್ತಾ! "ನನ್ನ ಬಳಿ ಬಿಡಿಗಾಸು ಇಲ್ಲ ಪತ್ನಿಯ, ಕುಟುಂಬದವರ ದುಡ್ಡಿನಲ್ಲಿ ಜೀವನ ನಡೆಸುತ್ತಿದ್ದೇನೆ. ಜೀವನ ನಿರ್ವಹಣೆಗೆ ಮಗನಿಂದಲೂ ಸಾಲ ಪಡೆದಿದ್ದೇನೆ. ಒಟ್ಟಾರೆ ವೈಭವದ ಜೀವನ ಬಿಟ್ಟು ಸಾಮಾನ್ಯ ಜೀವನ ನಡೆಸುತ್ತಿದ್ದೇನೆ" ಎಂಬ ಅಳಲು ತೋಡಿಕೊಂಡಿದ್ದ ಅನಿಲ್ ಅಂಬಾನಿಯ ಜೀವನದಲ್ಲಿ ಲೆಕ್ಕಾಚಾರಗಳೆಂಬ ಪಾಸಿಂಗ್ ಶಾಟ್, ಚಲಿಸುವ ಮೋಡಗಳ ಕವಲುದಾರಿಯನ್ನೇ ಸೃಷ್ಟಿಸಿತ್ತು.

ಒಟ್ಟಾರೆ ಒಂದೇ ಬಳ್ಳಿಯ ಹೂಗಳು, ಕವಲುದಾರಿಯ ಹೊರಳು, ಮನುಷ್ಯನ ದಿಕ್ಕನ್ನೇ ಬದಲಾಯಿಸಿ ಒಂದು ಕಡೆ ದವಲತ್ತು ತುಂಬಿದರೆ ಮತ್ತೊಂದು ಕಡೆ ದಿವಾಳಿಯೆಬ್ಬಿಸುತ್ತವೆ. ಯಾರ ಅಂಕೆಗೂ ಸಿಗದೆ ನರ್ತಿಸುವ ನವಿಲು ಗರಿಬಿಚ್ಚಿದರೆ ಕಣ್ಣು, ಗರಿ ಮುಚ್ಚಿದರೆ ಬರಿಯ ಮಣ್ಣು. ಮನೆಯ ಚಿನ್ನ ಮಾರಿ ವಕೀಲರ ಫೀಜು ಕಟ್ಟಿದ್ದೇನೆ ಎಂದು ಹೇಳಿಕೊಳ್ಳುವ ಅನಿಲ್ ಸಹೋದರ ಮುಖೇಶ್ ವಿಶ್ವದ ಶ್ರೀಮಂತ. ಯಾರಿಗೆ ಎಷ್ಟಿದ್ದರೂ

ಯಾರಿಗೆ ಯಾರುಂಟು । ಎರವಿನ ಸಂಸಾರ ।
ನೀರ ಮೇಲಣ ಗುಳ್ಳೆ । ನಿಜವಲ್ಲಾ ಹರಿಯೇ ।

ಯಾರಿಗೆ ಯಾರೋ? ॥ಪ॥ – ಹೀಗೆ ಗಾಳಿಗೋಪುರ ಸಿನಿಮಾದ ನಮ್ಮ ಹಳೆಯ ಹಾಡು ಸುಮ್ಮನೆ ನೆನಪಾಯಿತು.

ನಿಮಗೆ ಗೊತ್ತಿರಬೇಕು. ಕ್ರಿಕೆಟ್ ಲೋಕದ ಧ್ರುವತಾರೆ ಸಚಿನ್ ತೆಂಡೂಲ್ಕರ್ ಮತ್ತು ವಿನೋದ್ ಕಾಂಬ್ಳಿ ಇಬ್ಬರು ಸಮಕಾಲೀನರೇ. ಒಂದೆರಡು ವರ್ಷ ವಯಸ್ಸಿನ ಅಂತರದ ಸಮಕಾಲೀನರು. ಒಟ್ಟಿಗೇ ಕ್ರಿಕೆಟ್ ಪ್ರಪಂಚಕ್ಕೆ ಕಾಲಿಟ್ಟವರು. 1988ರಲ್ಲಿ ಮುಂಬೈನಲ್ಲಿ ಮೊದಲ ಬಾರಿಗೆ ಪಾರ್ಟನರ್‌ಶಿಪ್‌ನಲ್ಲಿ 664 ರನ್‌ಗಳನ್ನು ಮುಂಬೈನ ಪಿಚ್‌ವೊಂದರಲ್ಲಿ ಜೊತೆಯಾಟದಲ್ಲಿ ದಾಖಲಿಸಿದವರು. ಒಂದೇ ಗುರಿ ಒಂದೇ ವೇಗ ಒಂದೇ ಕಾಲಘಟ್ಟದಲ್ಲಿ ಜೊತೆಯಾಗಿ, ಇಂಡಿಯನ್ ಕ್ರಿಕೆಟ್ ಅಂಗಳಕ್ಕೆ ಕಾಲಿಟ್ಟ ಜೊತೆಗಾರರು. 1989ರಲ್ಲಿ ಸಚಿನ್ ಭಾರತ ಕ್ರಿಕೆಟ್ ತಂಡ ಸೇರಿಕೊಂಡರು, 1991ರಲ್ಲಿ ಇವರಿಗೆ ಜೊತೆಯಾದರು ವಿನೋದ್ ಕಾಂಬ್ಳಿ. ಹಲವು ವರುಷಗಳ ನಂತರ ನಡೆದು ಬಂದ ದಾರಿ, ಕವಲುದಾರಿಗೆ ತಿರುಗಿತು ನೋಡಿ! ಫಲಿತಾಂಶ ಮಾತ್ರ ಒಬ್ಬರ ಬಾಳಲ್ಲಿ ಮಿಂಚು ಹುಳುವಿನಂತೆ ಮಿನುಗಿದರೆ, ಮತ್ತೊಬ್ಬರ ಪ್ರೊಫೆಷನ್ನು ಬಸವನ ಹುಳುವಿನಂತೆ ಜೊಲ್ಲು ಸುರಿಸುತ್ತಿತ್ತು. ಕ್ರಿಕೆಟ್ ಲೋಕದ ಎಲ್ಲ ರೆಕಾರ್ಡುಗಳನ್ನೂ ಧೂಳಿಪಟ ಮಾಡಿ ತನ್ನ ಕೈಚಳಕದಿಂದ ಕ್ರಿಕೆಟ್ ಲೋಕದ ದೇವರು ಎನಿಸಿಕೊಂಡ ಸಚಿನ್. 2012ರಿಂದ 2018ರವರೆಗೆ ಸಂಸತ್ ಪ್ರವೇಶ ಮಾಡಿ ಅಲ್ಲಿಯೂ ಕುಳಿತುಕೊಳ್ಳಲು ಕುರ್ಚಿಯ ದಾರಿ ತೋರಿಸಿತು ಗೆಲುವಿನ ಚಿಲುಮೆ. ಅದೇ ವಿನೋದ್ ಕಾಂಬ್ಳಿಯ ಪ್ರತಿಭೆ, ವಯಸ್ಸು, ಗುರಿ, ತನ್ನ ಆಟ ಎಲ್ಲವನ್ನೂ ತೋರಿಸಿ ವಿನೋದ್ ಕಾಂಬ್ಳಿ 2011ರಲ್ಲಿ ಕ್ರಿಕೆಟ್‌ನಿಂದ ನಿವೃತ್ತರಾದರು. ಸಚಿನ್ 2013ರವರೆಗೂ ಕ್ರೀಡಾಂಗಣದಲ್ಲಿದ್ದು ತಾನೂ ಕೂಡ ನಿವೃತ್ತಿ ಘೋಷಿಸಿಕೊಂಡರು. ಹೀಗೆ ನಡೆದು ಬಂದ ದಾರಿಯ ಪಯಣ ಕವಲುದಾರಿಗೆ ಎಳೆದರೆ ಏನೇನೆಲ್ಲಾ ಆಗಬಹುದೋ ಯಾರಿಗೂ ಗೊತ್ತಾಗುವುದಿಲ್ಲ.

ನಮ್ಮ ಕಾಲದ ಕನ್ನಡದ ಸಿನಿಮಾ ನಟಿಯರಿಬ್ಬರು ನನಗೆ ಅಚ್ಚರಿ ಎನಿಸುತ್ತಾರೆ. ಅವರ ಲೆಕ್ಕಾಚಾರದ ನಡೆವ ದಾರಿ, ಕವಲುದಾರಿ ಹೇಗಿದೆ ನೋಡಿ! ರಾಧಿಕಾ ಪಂಡಿತ್ ಮತ್ತು ಶುಭಾಪುಂಜ ಒಟ್ಟಿಗೇ ಸಿನಿಮಾ ಲೋಕಕ್ಕೆ ಬಂದವರು. ಇಬ್ಬರೂ ಸಮಕಾಲೀನರೆ, ಪ್ರತಿಭಾವಂತ ಹೆಣ್ಣುಮಕ್ಕಳೇ! 2008ರಲ್ಲಿ 'ಮೊಗ್ಗಿನ ಮನಸ್ಸು' ಚಿತ್ರದ ಮೂಲಕ ಬೆಳ್ಳಿ ಪರದೆಗೆ ಪ್ರವೇಶ ಪಡೆದವರು. ರಾಧಿಕಾ ಪಂಡಿತ್ ಸರಿಸುಮಾರು 30 ಸಿನಿಮಾಗಳಲ್ಲಿ ನಟಿಸಿದರೆ, ಶುಭಾ 27 ಸಿನಿಮಾಗಳಲ್ಲಿ ನಟಿಸಿ ಈಗಲೂ ನಟಿಸುತ್ತಲೇ ಇರುವ ನಟಿ. ಇಬ್ಬರದ್ದು almost ಒಂದೇ ಗುರಿ, ವೇಗ, ಸಮಕಾಲೀನರು ಎಲ್ಲ ಸರಿ! ಆದರೆ ರಾಧಿಕಾ ನಡೆದು ಬಂದ ದಾರಿಯಲ್ಲಿ 30 ಸಿನಿಮಾಗಳಲ್ಲಿ 4 ಫಿಲಂಫೇರ್, ಶ್ರೇಷ್ಠ ನಟಿ ಪ್ರಶಸ್ತಿ, ಕಾದು ಕುಳಿತಿತ್ತು. ಸರಿಯಾದ ಸಮಯಕ್ಕೆ ಸುಭದ್ರವಾದ ಕುಟುಂಬ, ಮದುವೆ, ಮಕ್ಕಳು ಅಂತ ಜೀವನಕ್ಕೆ ಭದ್ರತೆಯ ಬಾಗಿಲು ತೆರೆದಿತ್ತು. ಕವಲುದಾರಿಯ ಪಯಣ ಇನ್ನೊಬ್ಬರನ್ನು ಈ ಎಲ್ಲದಕ್ಕೂ ಕಾಯಿಸಿ ಕಡೆಗೆ ಇತ್ತೀಚೆಗಷ್ಟೇ ಹಸೆಮಣೆ ಏರಿಸಿ, ಹೊಸ ಜೀವನದ ದಾರಿ ತೋರಿಸಿದೆ. ಎಲ್ಲದಕ್ಕೂ ಎಲ್ಲರಿಗೂ ದಕ್ಕುವ, ಮಿಕ್ಕುವ, ಒಪ್ಪುವ, ಕಾಲಾವಕಾಶದ ಅಂಕದ ಪರದೆ ಸರಿಯಲೇಬೇಕು. ಅಲ್ಲಿಯವರೆಗೂ ಎಲ್ಲರೂ ಕಾಯಲೇಬೇಕು. ಇದೇನು ಶಾಸ್ತ್ರವೂ ಅಲ್ಲ ಸ್ತೋತ್ರವೂ ಅಲ್ಲ, ಬದುಕಿನ ಸೂತ್ರ. ಆದರೆ ಸೂತ್ರದ ದಾರ ನಮ್ಮ ಕೈಯ್ಯಲ್ಲಿಲ್ಲ.

ವರನಟ ಡಾ. ರಾಜಕುಮಾರ್, ಉದಯಕುಮಾರ್, ಕಲ್ಯಾಣ್ ಕುಮಾರ್ ಇವರುಗಳನ್ನು ಆ ಕಾಲದ ಚಿತ್ರರಸಿಕರು ಕುಮಾರತ್ರಯರು ಅಂತಲೇ ಕರೆಯುತ್ತಿದ್ದರು. ಮೂವರೂ ಪ್ರತಿಭಾವಂತ ನಟರೆ, ಸಮರ್ಥರೆ, ತಮ್ಮ ವಿನಯ ಸಜ್ಜನಿಕೆಯ ಗುಣ ಸ್ವಭಾವಗಳ ಬೋನಸ್‌ನಿಂದಾಗಿ ರಾಜ್‌ಕುಮಾರ್ ನಮ್ಮ ಕಾಲದವರೆಗೂ ಪ್ರಸ್ತುತರಾದರು. ನಡೆದು ಬಂದ ದಾರಿಯ ಪಯಣ ಕವಲುದಾರಿಯ ತೋರಣಕ್ಕೆ ಇಂಥ ಅಸಂಖ್ಯಾತ ಜೀವನ ಸಂದರ್ಭಗಳು ನಮ್ಮ ಕಣ್ಣ ಮುಂದೆ ಚಲಿಸುವ ಮೋಡಗಳಂತೆ ಚಲಿಸುತ್ತಿರುತ್ತವೆ. ಇದಕ್ಕೆ ಯಾರೂ ಕಾರಣರಲ್ಲ! ಯಾವುದೂ ಕಾರಣವಲ್ಲ! ನಿಮ್ಮ ಕಣ್ಣಲ್ಲೂ ಇಂಥ ಅಸಂಖ್ಯಾತ ಮೋಡಗಳಿವೆ. ಅವು ಚಲಿಸುತ್ತಲೇ ಇರುತ್ತವೆ. ಭಗವದ್ಗೀತೆಯಲ್ಲಿ ಕೃಷ್ಣ 47ನೇ ಶ್ಲೋಕದಲ್ಲಿ ಅರ್ಜುನನಿಗೆ ಉಪದೇಶ ಮಾಡಿದ ಸಾಲು ನಮ್ಮ ಸರದಿ.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲ ಹೇತುರ್ಭೂರ್ಮಾ ತೇ ಸಂಘೋದ್ಯಸ್ತ್ವ ಕರ್ಮಣಿ॥
ಕರ್ಮ ಮಾಡುವುದರಲ್ಲಿ ಮಾತ್ರವೇ ನಮಗೆ ಅಧಿಕಾರ, ಫಲದಲ್ಲಿ ಅಲ್ಲ. ಏನಂತೀರಿ?



ರಮಾಗೋವಿಂದ ರಂಗಮಂದಿರದಲ್ಲಿ ನಡೆದ ನಾಟಕ ಕದಂಬ ಉತ್ಸವದಲ್ಲಿ ಶ್ರೀರಂಗಪಟ್ಟಣದ ಗಮ್ಯ ತಂಡ ಪರಿಣಯ ಪ್ರಸಂಗ ಪ್ರದರ್ಶನ ನಡೆಯಿತು.

ಜ.19, ಕಾಗೇರಿ ಮೈಸೂರಿಗೆ



ಮೈಸೂರು,ಜ.16–ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮೈಸೂರು ನಗರಕ್ಕೆ ಜ.19ರಂದು ಭೇಟಿ ನೀಡುವರು. ಅಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಕಲಾಮಂದಿರದಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ ಕುರಿತು ಗಣ್ಯರು, ಸೂಕ್ತವೆನಿಸುವ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಎಡಿಸಿ ಲೋಕನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೃಹ ಸಚಿವರಿಗೆ ಅವರ ಇಲಾಖೆಯಲ್ಲಿ ನಡೆಯೋ ವಿಷಯ ಗೊತ್ತಿಲ್ಲವೇ?



ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ತಮ್ಮ ಇಲಾಖೆಯಲ್ಲಿ ಏನೆಲ್ಲಾ ನಡೆಯುತ್ತಿತ್ತು ಎನ್ನುವುದು ಗೊತ್ತಿರಲಿಲ್ಲವೇ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನೆ ಮಾಡಿದ್ದಾರೆ.

ಬಿಡದಿಯ ತಮ್ಮ ತೋಟದಲ್ಲಿ ರೈತ ಸಂಕ್ರಾಂತಿ ಕಾರ್ಯಕ್ರಮಕ್ಕೂ ಮುನ್ನ ಮಾತನಾಡಿದ ಅವರು, ತಮ್ಮ ಇಲಾಖೆಯಲ್ಲಿ ದಂಧೆ ನಡೆಯುತ್ತಿದ್ದರೆ ಸಚಿವರು ಏನು ಮಾಡುತ್ತಿದ್ದರು. ಅದನ್ನು ಅವರು ಜನರಿಗೆ ತಿಳಿಸಬೇಕು. ಸ್ಯಾಂಟ್ರೋ ರವಿ ಬಳಿ ಹಣ ಪಡೆದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ತೀನಿ ಎನ್ನುವ ಆರಗ ಜ್ಞಾನೇಂದ್ರ ಹೇಳಿಕೆ ವಿಚಾರಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅವರು ಆತ್ಮಹತ್ಯೆ ಮಾಡಿಕೊಳ್ಳಲಿ ಅಂತ ನಾನ್ಯಾಕೆ ಹೇಳಲಿ. ಈ ಸರ್ಕಾರದಲ್ಲಿ ನಡೆಯುತ್ತಿರುವ ಕಾಸಿಗಾಗಿ ಪೋಸ್ಟಿಂಗ್ ವಿಚಾರ ಬೀದಿ ಬೀದಿಯಲ್ಲಿ ಚರ್ಚೆ ನಡೆಯುತ್ತಿದೆ. ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ದಂಧೆಗಳ ಜನರು ಕೂತಲ್ಲಿ, ನಿಂತಲ್ಲಿ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ. ಈಗ ಬಂಧನಕ್ಕೆ ಒಳಗಾಗಿರುವ ವ್ಯಕ್ತಿ ಎಲ್ಲಿ, ಯಾರಿಂದ ಏನೆಲ್ಲಾ ಕೆಲಸ ಮಾಡಿಕೊಂಡಿದ್ದಾನೆ ಎಲ್ಲ ಕಡೆ ಹೇಳಿಕೊಂಡು ತಿರುಗಿದ್ದಾನೆ. ಆತನ ಫೋಟೋಗಳು, ಆಡಿಯೋಗಳು ರಾಜ್ಯದ ತುಂಬಾ ಹಬ್ಬಿವೆ. ಇದೆಲ್ಲಾ ಗೃಹ ಸಚಿವರ ಗಮನಕ್ಕೆ ಬಂದಿಲ್ಲವೇ ಎಂದು ಸಚಿವರಿಗೆ ಪ್ರಶ್ನಿಸಿದ್ದಾರೆ.

ಜ.20, ಆರೋಗ್ಯ ತಪಾಸಣೆ

ಮೈಸೂರು,ಜ.16–ಮೈಸೂರು ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಜ.20ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 2ರವರೆಗೆ ಫಿಸ್ಟುಲಾ ಮತ್ತು ಪೈಲ್ಸ್ ಇತರೆ ಕಾಯಿಲೆಗಳಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಮೊ.ಸಂ:8277888525/26 ಸಂಪರ್ಕಿಸಬಹುದು.

ತೇಜಸ್ವಿನಿಗೆ ಪಿಹೆಚ್.ಡಿ




ಮೈಸೂರು: ಡಾ.ಎಸ್.ಅರುಣ್ ದಾಸ್ ಅವರ ಮಾರ್ಗದರ್ಶನದಲ್ಲಿ ಎಂ.ಯು. ತೇಜಸ್ವಿನಿ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಂಕ್ರಾಂತಿ ಸಂತಸ; ಎಳ್ಳು–ಬೆಲ್ಲ ಹಂಚಿ ಸಂಭ್ರಮ



ಮೈಸೂರು,ಜ.16–ನಗರದ ಚಾಮುಂಡಿ ಬೆಟ್ಟ ಪಾದದ ಬಳಿ ಇರುವ ಅಂಬಾ ಭವಾನಿ ಮಹಿಳಾ ಸಮಾಜದ ಕಚೇರಿಯಲ್ಲಿ ಮಹಿಳೆಯರು ಪರಸ್ಪರ ಎಳ್ಳು ಬೆಲ್ಲ ಹಂಚಿ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಮಕರ ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಅಂಬಾ ಭವಾನಿ ಮಹಿಳಾ ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ ಮಾತನಾಡಿ, ಯುವ ಜನಾಂಗ ಸಂಕ್ರಾಂತಿ ಎಳ್ಳು ಬೆಲ್ಲ ಸವಿಯುವ ಮೂಲಕ ಆರೋಗ್ಯ ಸಮೃದ್ಧಿ, ವಿಕಾಸ, ಶೈಕ್ಷಣಿಕ ಪ್ರಗತಿ ಹಾಗೂ ಸಮಸ್ತ ಲೋಕದ ಹಿತವನ್ನು ಸಾರುವ ಚಿಂತನೆಯನ್ನು ನಡೆಸುವ ದಿಕ್ಕಿನಲ್ಲಿ ನಾವೆಲ್ಲರೂ ಸ್ಫೂರ್ತಿಯನ್ನು ತುಂಬಬೇಕಿದೆ. ಎಳ್ಳು ಬೆಲ್ಲದ ಮಹತ್ವ ಹಾಗೂ ಗೋವುಗಳನ್ನು ಪೂಜಿಸುವ ಸಂಪ್ರದಾಯ ಮುಂದುವರೆಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ. ಎಳ್ಳು ಬೆಲ್ಲವನ್ನು ತಿನ್ನುವ ಮೂಲಕ ಸಮಸ್ತ ಜನರಿಗೂ ಒಳಿತನ್ನು ಉಂಟುಮಾಡಲಿ ಎಂದರು. ಇದೇ ವೇಳೆ ಮೀರಾ, ಉಮಾ, ಮಮತಾ, ಶಶಿ, ಮೀನಾಕ್ಷಿ, ಪುಷ್ಪ, ಪ್ರೇಮ ರವಿ, ಭಾಗ್ಯವತಿ, ಪ್ರೇಮ, ಮಾದೇವಿ ಹಾಗೂ ಇನ್ನಿತರ ಮಹಿಳೆಯರು ಭಾಗವಹಿಸಿದ್ದರು.



ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ಶಾಲೆ ಅಧ್ಯಕ್ಷ ಟಿ.ಬಾಬು, ಪ್ರಾಂಶುಪಾಲೆ ಶಶಿಕಲಾ, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಸುಚಿತ್ರಾ ವಿದ್ಯಾರ್ಥಿಗಳಿಗೆ ಸಂಕ್ರಾಂತಿ ಹಬ್ಬದ ಸಂಪ್ರದಾಯ, ಹಿನ್ನೆಲೆ ಹಾಗೂ ಮಹತ್ವದ ಅರಿವು ಮೂಡಿಸಿದರು. ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಸ್ಯಾಂಟ್ರೋ ರವಿ ಪ್ರಕರಣ ಸಿಐಡಿ ತನಿಖೆ

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಪೊಲೀಸ್ ಆಯುಕ್ತ ಬಿ. ರಮೇಶ್ ಪ್ರಕರಣ ಸಂಬಂಧ ತಲೆಮರೆಸಿಕೊಂಡಿದ್ದ ಸ್ಯಾಂಟ್ರೋ ರವಿ ಹಾಗೂ ಇಬ್ಬರು ಸಹಚರರನ್ನು ಬಂಧಿಸಲಾಗಿದ್ದು, ಹೆಚ್ಚುವರಿ ತನಿಖೆಗಾಗಿ ಆರೋಪಿಗಳನ್ನು ಪೊಲೀಸ್ ವಶಕ್ಕೆ ಒಪ್ಪಿಸುವಂತೆ ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯಕ್ಕೆ ಇಂದು ಅರ್ಜಿ ಸಲ್ಲಿಸಲಾಗಿತ್ತು ಎಂದರು. ಮೈಸೂರು ಜೈಲಿನಲ್ಲಿದ್ದ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸುವ ವೇಳೆಗೆ ಸರ್ಕಾರ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸುವಂತೆ ಆದೇಶಿಸಿದ ಮಾಹಿತಿ ತಿಳಿಯುತ್ತಿದ್ದಂತೆಯೇ ಆ ವಿಷಯವನ್ನು ನ್ಯಾಯಾಧೀಶರ ಗಮನಕ್ಕೆ ತರಲಾಯಿತು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಆರೋಪಿಗಳನ್ನು ಮತ್ತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಆದೇಶಿಸಿದ್ದಾರೆ ಎಂದು ರಮೇಶ್ ತಿಳಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಆದೇಶದಂತೆ ಸ್ಯಾಂಟ್ರೋ ರವಿ ಪ್ರಕರಣವನ್ನು ಸಿಐಡಿಗೆ ಒಪ್ಪಿಸಲಾಗಿದೆ. ಮೈಸೂರಿನಲ್ಲಿರುವ ಡಿವೈಎಸ್‌ಪಿ ನೇತೃತ್ವದ ಸಿಐಡಿ ಘಟಕದ ಅಧಿಕಾರಿಗಳು ಇನ್ನು ಮುಂದೆ ಪ್ರಕರಣದ ತನಿಖೆ ನಡೆಸಲಿದ್ದಾರೆ. ಆ ಸಂಬಂಧ ವಿಜಯನಗರ ಠಾಣೆಯಲ್ಲಿರುವ ಎಲ್ಲಾ ದಾಖಲೆಗಳೊಂದಿಗೆ ಕಡತವನ್ನು ತನಿಖಾಧಿಕಾರಿಗಳಾಗಿದ್ದ ಎನ್.ಆರ್. ಉಪವಿಭಾಗದ ಎಸಿಪಿ ಎಂ. ಶಿವಶಂಕರ್ ಸಿಐಡಿ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಪ್ರಕರಣ ವರ್ಗಾವಣೆಯಾಗುತ್ತಿದ್ದಂತೆಯೇ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳ ತಂಡ, ಇಂದು ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಬಿ.ರಮೇಶ್ ಅವರನ್ನು ಭೇಟಿ ಮಾಡಿ ಪ್ರಕರಣ ದಾಖಲಾದ ದಿನದಿಂದ ಈವರೆಗೆ ನಡೆಸಿರುವ ಪ್ರಕ್ರಿಯೆ ಕುರಿತಂತೆ ಚರ್ಚಿಸಿ, ಮಾಹಿತಿ ಪಡೆದುಕೊಂಡರು.

ಪ್ರಕರಣದ ಬಗ್ಗೆ ಕೂಲಂಕಶವಾಗಿ ಅಧ್ಯಯನ ಮಾಡಲಿರುವ ಸಿಐಡಿ ಪೊಲೀಸರು, ನಾಳೆ (ಜ.17) ಆರೋಪಿಗಳನ್ನು ಹೆಚ್ಚುವರಿ ವಿಚಾರಣೆ, ಸ್ಥಳ ಮಹಜರು ಹಾಗೂ ಪ್ರಕರಣಕ್ಕೆ ಅಗತ್ಯವಿರುವ ಕೆಲ ವಸ್ತುಗಳನ್ನು ವಶಪಡಿಸಿಕೊಳ್ಳಬೇಕಾಗಿರುವುದರಿಂದ ತಮ್ಮ ವಶಕ್ಕೆ ಒಪ್ಪಿಸುವಂತೆ ಮನವಿ ಮಾಡಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ ಮೈಸೂರು ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಸ್ಯಾಂಟ್ರೋ ರವಿ ಮತ್ತಿಬ್ಬರು ಆರೋಪಿಗಳನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆಯಲು ಅರ್ಜಿ ಸಲ್ಲಿಸಿದಾಗ ವಿಚಾರಣೆಗಾಗಿ ಮತ್ತೆ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗುವುದು.

ಜ.25ರವರೆಗೆ ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಬಂಧನಕ್ಕೆ ಒಪ್ಪಿಸಿ, ನ್ಯಾಯಾಧೀಶರು ಆದೇಶಿಸಿದ್ದರು. ಅದರಂತೆ ಇಂದು ತನಿಖಾಧಿಕಾರಿ ಎಂ. ಶಿವಶಂಕರ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳು, 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಿ, ಪೊಲೀಸ್ ವಶಕ್ಕೆ ನೀಡುವಂತೆ ಸರ್ಕಾರಿ ಅಭಿಯೋಜಕರ ಮೂಲಕ ಅರ್ಜಿ ಸಲ್ಲಿಸಿ, ಮನವಿ ಮಾಡಿದರು. ಅದೇ ವೇಳೆ ಸದರಿ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿ, ಸರ್ಕಾರ ಆದೇಶ ಹೊರಡಿಸಿರುವ ವಿಷಯ ತಿಳಿದು ಆ ಮಾಹಿತಿಯನ್ನು ನ್ಯಾಯಾಧೀಶರ ಗಮನಕ್ಕೆ ತರಲಾಯಿತು.

ಪೊಲೀಸ್ ಕಸ್ಟಡಿಗೆ ಒಪ್ಪಿಸುವಂತೆ ಸರ್ಕಾರಿ ಅಭಿಯೋಜಕರು ಮನವಿ ಮಾಡುತ್ತಿದ್ದಂತೆಯೇ ಆರೋಪಿ ಪರ ವಕೀಲ ಹರೀಶ್ ಪ್ರಭು ಮತ್ತು ಚೇತನ್ ಆಕ್ಷೇಪ ವ್ಯಕ್ತಪಡಿಸಿ, ಸ್ಯಾಂಟ್ರೋ ರವಿಗೆ ಜೀವ ಬೆದರಿಕೆ ಇದೆ. ಹಣಕಾಸಿನ ವ್ಯಾಜ್ಯವನ್ನು ವಿಜೃಂಭಿಸಲಾಗಿದೆ. ಸಂತ್ರಸ್ತೆಯು ತನ್ನ ಅಕ್ಕನ ಮದುವೆಗೆ ಪಡೆದಿದ್ದ 10 ಲಕ್ಷ ರೂ. ಹಣ ಹಿಂದಿರುಗಿಸಲಾರದೇ ಸುಳ್ಳು ದೂರು ದಾಖಲಿಸಿದ್ದಾರೆ ಎಂದರು.

ಆರೋಪಿಯು ಸಂತ್ರಸ್ತೆಯನ್ನು ಮದುವೆಯಾಗಿಲ್ಲ. ಆತನ ಬಳಿ ಐಷಾರಾಮಿ ಬಂಗಲೆ, ಕಾರುಗಳಿಲ್ಲ, ಸಂತ್ರಸ್ತೆ ಮದುವೆಯಾಗಿದ್ದರೆ ಈವರೆಗೆ ಏಕೆ ಸಾಕ್ಷ್ಯಾಧಾರ ಕೊಟ್ಟಿಲ್ಲ. ಕೇವಲ ಮೊಬೈಲ್ ಸ್ಟೇಟಸ್‌ನಲ್ಲಿ ಫೋಟೋ ಹಾಕಿ ಕೊಂಡಿರುವುದನ್ನೇ ಈ ರೀತಿ ಬಿಂಬಿಸಲಾಗುತ್ತಿದೆಯಾದ್ದರಿಂದ ಸ್ಯಾಂಟ್ರೋ ರವಿಯನ್ನು ಪೊಲೀಸ್ ವಶಕ್ಕೆ ನೀಡುವ ಅಗತ್ಯ ಇಲ್ಲ ಎಂದು ವಾದ ಮಂಡಿಸಿದರು. ಪ್ರತಿಯಾಗಿ ವಾದ ಮಂಡಿಸಿದ ಸರ್ಕಾರಿ ಅಭಿಯೋಜಕರು, ಗುರುತರವಾದ ಆರೋಪಗಳಿರುವುದರಿಂದ ಹಾಗೂ ಈ ಪ್ರಕರಣ ಅಂತಾರಾಜ್ಯಕ್ಕೂ ವ್ಯಾಪಿಸಿರುವ ಕಾರಣ ಹಲವು ಸತ್ಯಾಂಶಗಳನ್ನು ಹೆಕ್ಕಿ ತೆಗೆಯಬೇಕಾಗಿದೆ, ವಿಚಾರಣೆ ನಡೆಸಿ ಸ್ಥಳ ಮಹಜರು ಮಾಡಬೇಕಿರುವುದರಿಂದ ಪೊಲೀಸ್ ವಶಕ್ಕೆ ಒಪ್ಪಿಸುವಂತೆ ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ವಾದ– ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಈಗಾಗಲೇ ಪ್ರಕರಣವನ್ನು ಸಿಐಡಿಗೆ ಒಪ್ಪಿಸುವಂತೆ ಸರ್ಕಾರ ಆದೇಶಿಸಿರುವ ವಿಷಯ ತಿಳಿದ ಹಿನ್ನೆಲೆಯಲ್ಲಿ ಆರೋಪಿಗಳನ್ನು ಜನವರಿ 25 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಆದೇಶಿಸಿದರು. ಅದರಿಂದಾಗಿ ಸ್ಯಾಂಟ್ರೋ ರವಿಯನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆಗೊಳಪಡಿಸಬೇಕೆಂಬ ಪೊಲೀಸರ ಪ್ರಯತ್ನ ಫಲಿಸಲಿಲ್ಲ. ಸಿಐಡಿಗೆ ವರ್ಗಾವಣೆಯಾಗಿರುವುದರಿಂದ ನಾಳೆ (ಜ.17) ಅಧಿಕಾರಿಗಳು ವಿಚಾರಣೆಗಾಗಿ ಸ್ಯಾಂಟ್ರೋ ರವಿ ಹಾಗೂ ಮತ್ತಿಬ್ಬರು ಆರೋಪಿಗಳನ್ನು ತಮ್ಮ ವಶಕ್ಕೆ ನೀಡುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಒಡನಾಡಿ ಸ್ವಾಗತ: ಪ್ರಕರಣವನ್ನು ಸಿಐಡಿಗೆ ಒಪ್ಪಿಸಿರುವುದನ್ನು ಸ್ವಾಗತಿಸಿರುವ ಒಡನಾಡಿ ಸೇವಾ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ, ಈ ಬೆಳವಣಿಗೆಯಿಂದಾಗಿ ಸಂತ್ರಸ್ತೆಗೆ ನ್ಯಾಯ ದೊರಕುವ ವಿಶ್ವಾಸವಿದೆ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಅದೇ ರೀತಿ ತಾನು ಮಾಡಿರುವ ಎಲ್ಲಾ ಆರೋಪಗಳಿಗೂ ಸಾಕ್ಷ್ಯಾಧಾರಗಳಿವೆ, ವಿಚಾರಣೆ ವೇಳೆ ಎಲ್ಲಾ ಸತ್ಯ ಸಂಗತಿಗಳನ್ನು ಈಗಾಗಲೇ ದಾಖಲೆ ಸಮೇತ ಪೊಲೀಸರಿಗೆ ಸಲ್ಲಿಸಿದ್ದೇನೆ ಎಂದು ಪ್ರಕರಣದ ದೂರುದಾರರಾದ ಸಂತಸ್ತೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಬೊಮ್ಮೇನಹಳ್ಳಿ ರೈತರ ಸಮ್ಮತಿ

ಎಂದು ಹೇಳಿದರು. 50:50ರ ಅನುಪಾತದಡಿ ಭೂಮಿ ನೀಡುವ ರೈತರಿಗೆ ಈ ಯೋಜನೆಯಿಂದ ಹೆಚ್ಚು ಪ್ರಯೋಜನವಾಗಲಿದೆ. ಭೂಮಿ ಕಳೆದುಕೊಂಡ ರೈತರಿಗೆ ಪರ್ಯಾಯ ಜೀವನೋಪಾಯಕ್ಕಾಗಿ 10 ಲಕ್ಷ ರೂ. ಬಡ್ಡಿ ರಹಿತ ಸಾಲವನ್ನು ಮುಂಗಡವಾಗಿ ನೀಡಲಾಗುವುದು. ಆದರೆ, ಸಾಲ ಪಡೆದ ರೈತರು ಈ ಬಡ್ಡಿ ರಹಿತ ಹಣವನ್ನು ಮುಡಾಗೆ ನಿಗದಿತ ಅವಧಿಯೊಳಗೆ ಹಿಂದಿರುಗಿಸಬೇಕಾಗುತ್ತದೆ. ತಪ್ಪಿದಲ್ಲಿ ಮಂಜೂರಾದ ನಿವೇಶನಗಳ ವಿಲೇವಾರಿಯಿಂದ 10 ಲಕ್ಷ ರೂ. ಸಾಲದ ಮೊತ್ತವನ್ನು ಕಡಿತಗೊಳಿಸಿಕೊಳ್ಳಲು ಮುಡಾಗೆ ಅನುಮತಿ ನೀಡುವ ಮೂಲಕ ರೈತರು ಸರಿದೂಗಿಸಿಕೊಳ್ಳಲು ಅವಕಾಶವಿದೆ ಎಂದರು. ಸಭೆಯಲ್ಲಿ ಉಪಸ್ಥಿತರಿದ್ದ ಸಿಐಟಿಬಿ ಮಾಜಿ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಮಾತನಾಡಿ, ವಸತಿ ಬಡಾವಣೆ ರಚನೆಗೆ ಭೂಮಿ ನೀಡುವುದು ರೈತರಿಗೆ ಸುರಕ್ಷಿತವಾಗಿದ್ದು, ರೈತರು ತಮ್ಮಲ್ಲಿರುವ ಅನುಕೂಲಗಳನ್ನು ಪರಿಗಣಿಸಿ, ಮುಡಾ ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಿದ್ಧವಾಗಿರುವುದರಿಂದ ರೈತರು ತಮ್ಮ ಜಮೀನುಗಳನ್ನು ನೀಡಲು ಮುಂದಾಗಬೇಕು ಎಂದು ಈ ಭಾಗದ ರೈತರಲ್ಲಿ ಮನವಿ ಮಾಡಿದರು. 50:50ರ ಅನುಪಾತದ ಪ್ರಮುಖ ಲಕ್ಷಣಗಳ ಕುರಿತು ರೈತರಿಗೆ ವಿವರಿಸಿದ ಅವರು, ಈ ಹಂಚಿಕೆ ಸೂತ್ರದ ಬಗ್ಗೆ ರೈತರು ಭಯಪಡುವ ಅಗತ್ಯವಿಲ್ಲ. ಏಕೆಂದರೆ ಇದು ರೈತರಿಗೆ ಅನೇಕ ರೀತಿಯಲ್ಲಿ ಪ್ರಯೋಜನಕಾರಿಯಾಗಲಿದೆ ಎಂದು ಹೇಳಿದರು. ಸಭೆಯಲ್ಲಿ ಮುಡಾ ಸದಸ್ಯೆ ಎಂ.ಲಕ್ಷ್ಮೀದೇವಿ, ಕಾರ್ಯದರ್ಶಿ ವೆಂಕಟರಾಜು ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಯುವಜನತೆಗೆ ಸರ್ಕಾರ ಆದ್ಯತೆ; ಕನ್ನಡದಲ್ಲಿ ಶಬ್ದ ಕಲಿತು ಸಂದೇಶ ನೀಡಬೇಕು

ಯುವಜನೋತ್ಸವ ಸಮಾರೋಪದಲ್ಲಿ ಸಿಎಂ ಬೊಮ್ಮಾಯಿ ಸಲಹೆ



ಧಾರವಾಡ: ನಾವು ಯಾವುದೇ ರಾಜ್ಯಕ್ಕೆ ಸೇರಿದವರಾಗಲೀ, ಏನೇ ಮಾಡಲಿ ಕೊನೆಯಲ್ಲಿ ನಮ್ಮೆಲ್ಲರ ಹೃದಯದಲ್ಲಿ ತುಡಿಯುವುದು ಭಾರತ ಮಾತೆ. ಭಾರತ ಮಾತೆ ನಮ್ಮೆಲ್ಲರನ್ನೂ ಬೆಸೆಯುತ್ತಾಳೆ. ಹೀಗಾಗಿ ನಮ್ಮ ಜೀವನ ಭಾರತದ ಒಳಿತಿಗಾಗಿ ಸದಾ ಮಿಡಿಯುತ್ತಿರಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಅವರು ಸೋಮವಾರ ಧಾರವಾಡದಲ್ಲಿ ರಾಷ್ಟ್ರೀಯ ಯುವಜನೋತ್ಸವ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಯುವಜನರು ತಮ್ಮ ಕೆಲಸದಲ್ಲಿ, ಸಾಧನೆಯಲ್ಲಿ ದೇಶಕ್ಕೋಸ್ಕರ ಕೆಲಸ ಮಾಡಿ, ದೇಶಕ್ಕೆ ಒಳ್ಳೆಯ ಹೆಸರು ತರುವಲ್ಲಿ ಸಾಧನೆ ಮಾಡಿ ಖುಷಿಯನ್ನು ಗಳಿಸಬೇಕು. ಖುಷಿ ನಮ್ಮ ನಮ್ಮ ಕೆಲಸ ಕಾರ್ಯಗಳಲ್ಲಿಯೇ ಸಿಗುತ್ತದೆ. ಹಿಮಾಲಯ ಪರ್ವತ ಏರಿ ತೇನ್‌ಸಿಂಗ್ ಭಾರತೀಯ ತ್ರಿವರ್ಣ ಧ್ವಜ ಹಾರಿಸಿದ ಘಟನೆಯನ್ನು ವಿವರಿಸಿದರು.

ವಿದೇಶಗಳಿಗೆ ಹೋಲಿಸಿದರೆ ಭಾರತದ ಶಿಕ್ಷಣ ವ್ಯವಸ್ಥೆ ಬಹಳ ಮುಂದಿದೆ. ನಮ್ಮ ದೇಶದ ಜನರ ಬುದ್ಧಿಮಟ್ಟ ವಿದೇಶಿಯರಿಗೆ ಹೋಲಿಸಿದರೆ ಹೆಚ್ಚಾಗಿದೆ. ನಮ್ಮ ಸಂಸ್ಕೃತಿ, ಸಂಸ್ಕಾರ ಬೇರೆ ದೇಶಗಳಿಂದ ವಿಭಿನ್ನವಾಗಿದ್ದು ನಾವು ಅದ್ವಿತೀಯ ಸ್ಥಾನದಲ್ಲಿ ನಿಲ್ಲುತ್ತೇವೆ. ನಮ್ಮ ದೇಶದ ಜನಸಂಖ್ಯೆ ದೇಶದ ತಾಕತ್ತು ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ಗರೀಬ್ ಕಲ್ಯಾಣ ಯೋಜನೆಯಿಂದ ಇಂದು ದೇಶದ ಜನರು ಹಸಿವಿನಿಂದ ಕೂರುವ, ಸಾಯುವ ಪರಿಸ್ಥಿತಿ ಇಲ್ಲ, ಕೋವಿಡ್ ಸಾಂಕ್ರಾಮಿಕ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಿದೆ. ನಮ್ಮ ದೇಶದ ಆರ್ಥಿಕತೆ, ಅವಕಾಶ, ಜನರ ಜೀವನ ಮಟ್ಟ ಸುಧಾರಿಸಿದೆ, ಸ್ಕಿಲ್ ಇಂಡಿಯಾ ಕಾರ್ಯಕ್ರಮ, ಮುದ್ರಾ ಯೋಜನೆ ಶಿಕ್ಷಣ ಜೊತೆಗೆ ಯುವಜನತೆಗೆ ಬಹಳ ಅನುಕೂಲವಾಗುತ್ತಿದೆ ಎಂದು ಶ್ಲಾಘಿಸಿದರು.

ಯುವಕರಿಗೆ ಕರ್ನಾಟಕ ಆದ್ಯತೆ: ನಮ್ಮ ಯುವಜನತೆಗೆ ಕರ್ನಾಟಕ ಸರ್ಕಾರ ಬಹಳ ಕಾರ್ಯಕ್ರಮಗಳನ್ನು ತಂದಿದೆ. ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಯನ್ನು ಆರಂಭಿಸಲಾಗುವುದು. ಯುವಜನತೆಗೆ ಉದ್ಯೋಗಕ್ಕೆ ಪ್ರಾಜೆಕ್ಟ್‌ಗಳನ್ನು ನೀಡಲಾಗುತ್ತದೆ. 5 ಲಕ್ಷ ಯುವಕರಿಗೆ ಸ್ವ ಉದ್ಯೋಗದಡಿ ಕೆಲಸ ನೀಡುವ ಯೋಜನೆಯನ್ನು ಸರ್ಕಾರ ಮಾಡಿದೆ ಎಂದು ಹೇಳಿದರು. ಯುವನೀತಿ ಜಾರಿಗೆ ತರಲಾಗಿದ್ದು, ಅದರಲ್ಲಿ ಶಿಕ್ಷಣ, ಉದ್ಯೋಗ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅವಕಾಶಗಳಿವೆ. ಯುವನೀತಿಗೆ ಸ್ವಾಮಿ ವಿವೇಕಾನಂದರ ಯೋಚನೆಗಳೇ ಪ್ರೇರಣೆಯಾಗಿವೆ.

ಜೀವನವೊಂದು ಆಟ, ಜೀವಿಸಲು ನಾವು ಆಡಬೇಕು ಹೊರತು ಬೇರೆಯವರಿಗೆ ತೊಂದರೆಯನ್ನುಂಟುಮಾಡಲು ಅಲ್ಲ. ಎಲ್ಲರೂ ನ್ಯಾಯನಿಷ್ಠುರವಾಗಿ ಆಟವಾಡಬೇಕು, ನಿಮ್ಮ ಯಶಸ್ಸು ನಿಮ್ಮ ಕೈಯಲ್ಲಿದೆ ಎಂದರು.

ಕನ್ನಡ ಶಬ್ದ ಬೆಳೆಸೋಣ

ಕನ್ನಡಿಗರಾಗಿ ನಾವು ಕನ್ನಡವನ್ನು ಮಾತನಾಡಿ ಬೇರೆ ರಾಜ್ಯದವರಿಂದ ಬಂದವರಲ್ಲಿ ಕನ್ನಡದಲ್ಲಿ ಮಾತನಾಡಿ ಅವರಲ್ಲಿ ಕನ್ನಡ ಭಾಷೆಯನ್ನು ಪರಿಚಯಿಸಿ ನಮ್ಮ ಭಾಷೆಯನ್ನು ಉಳಿಸಿ ಬೆಳೆಸೋಣ ಎಂದು ಸಿಎಂ ಬೊಮ್ಮಾಯಿ ಕಿವಿಮಾತು ಹೇಳಿದರು. ಕನ್ನಡದಲ್ಲಿ ಏಳು ಶಬ್ದ ಕಲಿತು ಕನ್ನಡ ಭಾಷೆಯಲ್ಲಿಯೇ ಸಂದೇಶ ಕಳುಹಿಸಬೇಕು ಎಂದರು.

ಬೆಳಗಾವಿಯ ಹಿಂಡಲಗಾ ಜೈಲಿನಿಂದ ನಿತಿನ್ ಗಡ್ಕರಿಗೆ ಬೆದರಿಕೆ ಕರೆ

ಕೂಲಂಕಷ ತನಿಖೆ ನಡೆಸುತ್ತೇವೆ: ಸಿಎಂ ಬೊಮ್ಮಾಯಿ



ಹುಬ್ಬಳ್ಳಿ: ಬೆಳಗಾವಿಯ ಹಿಂಡಲಗಾ ಜೈಲಿನಿಂದ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಬೆದರಿಕೆ ಕರೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ಸರ್ಕಾರ ಕೂಲಂಕಷವಾಗಿ ತನಿಖೆ ನಡೆಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಹೇಳಿದ್ದಾರೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರ ನಾಗ್ಪುರ ಕಚೇರಿಗೆ ಕರೆ ಮಾಡಿದ ವ್ಯಕ್ತಿ ಜೀವ ಬೆದರಿಕೆಯೊಡ್ಡಿದ್ದಾನೆ ಮತ್ತು 100 ಕೋಟಿ ರೂ. ಹಣಕ್ಕೆ ಬೇಡಿಕೆಯಿಟ್ಟಿದ್ದಾನೆ. ಕರೆ ಮಾಡಿದ ಆರೋಪಿ ಜಯೇಶ್ ಪೂಜಾರಿ ಹಿಂಡಲಗಾ ಜೈಲಿನ ಕೈದಿಯಾಗಿದ್ದು, ಈ ಹಿಂದಿನ ಕೊಲೆ ಪ್ರಕರಣವೊಂದರಲ್ಲಿ ನ್ಯಾಯಾಲಯದಿಂದ ಮರಣ ದಂಡನೆ ಶಿಕ್ಷೆಗೆ ಗುರಿಯಾಗಿದ್ದಾನೆ ಎಂದು ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಪೂಜಾರಿ ತಾನು ದಾವೂದ್ ಇಬ್ರಾಹಿಂ ಗ್ಯಾಂಗ್ ಸದಸ್ಯ ಎಂದು ಹೇಳಿಕೊಂಡಿದ್ದಾನೆ.

ಹಿಂಡಲಗಾ ಜೈಲಿನಿಂದ ಕರೆ ಮಾಡಲಾಗಿತ್ತು. ನಾವು ಸಂಪೂರ್ಣ ತನಿಖೆ ನಡೆಸುತ್ತಿದ್ದೇವೆ. ನಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಬೊಮ್ಮಾಯಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಕರೆ ಮಾಡಿದ ವ್ಯಕ್ತಿಯ ಹಿನ್ನೆಲೆ ಪರಿಶೀಲನೆ ನಡೆಸುವುದಾಗಿಯೂ ಮುಖ್ಯಮಂತ್ರಿ ಹೇಳಿದ್ದಾರೆ. ಕೊಲೆ ಪ್ರಕರಣದಲ್ಲಿ ನ್ಯಾಯಾಲಯದಿಂದ ಮರಣದಂಡನೆ ಶಿಕ್ಷೆಗೆ ಗುರಿಯಾಗಿದ್ದ ಪೂಜಾರಿ 2016ರಲ್ಲಿ ಜೈಲಿನಿಂದ ಪರಾರಿಯಾಗಿದ್ದ. ಆದರೆ, ನಂತರ ಪೊಲೀಸರು ಬಂಧಿಸಿದ್ದರು.

ಮೋದಿ, ಅಮಿತ್ ಶಾ ತಿಪ್ಪರಲಾಗ ಹಾಕಿದರೂ ಬಿಜೆಪಿ ಅಧಿಕಾರಕ್ಕೆ ಬರಲ್ಲ



ಬೆಂಗಳೂರು: ಕರ್ನಾಟಕಕ್ಕೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಎಷ್ಟು ಸಾರಿ ಭೇಟಿ ಕೊಟ್ಟರೂ ಏನೂ ವ್ಯತ್ಯಾಸ ಆಗಲ್ಲ. ಏನೇ ತಿಪ್ಪರಲಾಗ ಹಾಕಿದರೂ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಇಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ನೇತೃತ್ವದಲ್ಲಿ ನಡೆಯುತ್ತಿರುವ 'ನಾ ನಾಯಕಿ' ಕಾರ್ಯಕ್ರಮಕ್ಕೆ ಸೇರಿದ್ದ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ನರೇಂದ್ರ ಮೋದಿ ಮತ್ತು ಅಮಿತ್ ಶಾ ಎಷ್ಟೇ ಸಾರಿ ರಾಜ್ಯಕ್ಕೆ ಬಂದರೂ ಏನೂ ಆಗಲ್ಲ, ಎಷ್ಟು ಸಾರಿ ಭೇಟಿ ಕೊಟ್ಟರೂ, ಎಷ್ಟು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರೂ, ಎಷ್ಟು ರ್‍ಯಾಲಿಗಳನ್ನು ನಡೆಸಿದರೂ ಏನೂ ಆಗಲ್ಲ ರಾಜ್ಯದ ಜನ ಈಗಾಗಲೇ ತೀರ್ಮಾನ ಮಾಡಿದ್ದಾರೆ.ಭಾರತೀಯ ಜನತಾ ಪಕ್ಷದ ಭ್ರಷ್ಟ ಸರ್ಕಾರ, ಜನ ವಿರೋಧಿ ವಚನ ಭ್ರಷ್ಟ ಸರ್ಕಾರವನ್ನು ಕಿತ್ತುಹಾಕಿ ಕಾಂಗ್ರೆಸ್ ಪಕ್ಷ ತರಬೇಕು ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ಮಾತ್ರ ಮಹಿಳೆಯರ ರಕ್ಷಣೆಗೆ ಬದ್ಧವಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಹಿಳೆಯರ ಕಲ್ಯಾಣಕ್ಕೆ ಪಕ್ಷ ಶಕ್ತಿಮೀರಿ ಪ್ರಯತ್ನ ಮಾಡಿದೆ. 19ನೇ–20ನೇ ಶತಮಾನದಲ್ಲಿ ಮಹಿಳೆಯರ ಶೋಷಣೆ ಬಹಳ ಆಗುತ್ತಿತ್ತು. ಅದಕ್ಕೆ ಅಂಕುಶ ಹಾಕಿದ್ದು ಕಾಂಗ್ರೆಸ್ ಪಕ್ಷ. ಮಹಿಳೆಯರಿಗೆ ರಕ್ಷಣೆ, ಹಕ್ಕು, ಮೀಸಲಾತಿ ಕೊಟ್ಟಿದ್ದು ಕಾಂಗ್ರೆಸ್ ಪಕ್ಷ.

ಸಂವಿಧಾನದ 72 ಮತ್ತು 73 ತಿದ್ದುಪಡಿ ಮಾಡಿ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ.50ರಷ್ಟು ಮೀಸಲಾತಿ ನೀಡಿದ ಪಕ್ಷ ಕಾಂಗ್ರೆಸ್ ಪಕ್ಷ. ಮನುಸ್ಮೃತಿಯನ್ನು ನಂಬುವ ಅನುಸರಿಸುವ ಪಕ್ಷ ಬಿಜೆಪಿ. ಸ್ವಾತಂತ್ರ್ಯ ಬಂದಾಗ ದೇಶದ ಸಾಕ್ಷರತಾ ಪ್ರಮಾಣ ಶೇಕಡಾ 8.86ರಷ್ಟಿತ್ತು. ಈಗ ಹೆಣ್ಣುಮಕ್ಕಳ ಸಾಕ್ಷರತೆ ಪ್ರಮಾಣ ಶೇಕಡಾ 65.5ರಷ್ಟಿದೆ. ಇನ್ನೂ ಸಾಕ್ಷರತೆ ಪ್ರಮಾಣ ಹೆಚ್ಚಾಗಬೇಕು ಎಂದರು.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಮುಖ್ಯರಸ್ತೆ ಸೇರಿದಂತೆ ಲೋಕೋಪಯೋಗಿ ಇಲಾಖೆಯ 1.90 ಕೋಟಿ ರೂ. ಅನುದಾನದಲ್ಲಿ ಕೈಗೊಂಡಿರುವ ವಿವಿಧ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು. 42ನೇ ವಾರ್ಡ್ ಕಾರ್ಪೊರೇಟರ್ ಶಿವಕುಮಾರ್, ಬಿಜೆಪಿ ವಾರ್ಡ್ ಅಧ್ಯಕ್ಷ ಕೆ.ಕೃಷ್ಣ, ಉಪಾಧ್ಯಕ್ಷ ಶಿವಕುಮಾರ್, ನಗರ ರೈತ ಮೋರ್ಚಾ ಅಧ್ಯಕ್ಷ ದೇವರಾಜ, ಮುಖಂಡರಾದ ಚಾಮರಾಜ, ಗೋಪಾಲ್ ದಯಾನಂದ, ಚೌಡಪ್ಪ, ಮಂಜುನಾಥ್, ಶಿವಣ್ಣ, ಅವಿನಾಶ್, ಸಾಗರ್ ಸಂತೋಷ್, ಚೆನ್ನಪ್ಪ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಾದ ನಾಗರಾಜ್, ಚಂದ್ರಮೋಹನ್ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ನೂರಕ್ಕೆ ನೂರು ಫಲಿತಾಂಶ ಸಾಧಿಸಿದರೆ ಕಾಲೇಜಿಗೆ ಬಹುಮಾನ



ಮೈಸೂರು, ಜ.16– ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧಿಸಿದರೆ ಲಕ್ಷ್ಮೀಪುರಂ ಸರ್ಕಾರಿ ಪದವಿಪೂರ್ವ ಕಾಲೇಜಿಗೆ 2 ಲಕ್ಷ ರೂ. ಬಹುಮಾನ ನೀಡುವುದಾಗಿ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಕಾಲೇಜಿನಲ್ಲಿ ಆಯೋಜಿಸಿದ್ದ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಒಂದು ಚಿಂತನೆ ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಅವರ ಫೋಟೋಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರ ಚಿಂತನೆ ಎಂದಿಗೂ ಪ್ರಸ್ತುತ. ಶಿಕ್ಷಣ, ಸಮಾನತೆ, ಹೋರಾಟದ ಮೂಲಕ ಸಮಾಜವನ್ನು ಎಚ್ಚರಿಸುವುದರ ಜೊತೆಗೆ ಸಂವಿಧಾನದ ಮಹತ್ವವನ್ನು ಸಾರಿದ ಮಹಾನ್ ಚೇತನ. ಅವರ ಜೀವನದ ಆದರ್ಶ ತತ್ವಗಳನ್ನು ಮೈಗೂಡಿಸಿಕೊಂಡು ಸಮಾನತೆಯಿಂದ ಬದುಕಬೇಕು. ಮುಂದಿನ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದರೆ 2 ಲಕ್ಷ ರೂ. ಬಹುಮಾನ ನೀಡುವುದಾಗಿ ಘೋಷಿಸಿದರು.

ದೇವನೂರು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಬಾಲಸುಬ್ರಹ್ಮಣ್ಯಂ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಧನೆ ಮಾಡಿದ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದಬೇಕು. ಅವರಲ್ಲಿರುವ ವಿಶೇಷ ಜೀವನಾದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಆಶಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಹಿರಿಯ ಉಪನ್ಯಾಸಕ ಎನ್.ಎಸ್.ಪಶುಪತಿ, ಶಿಕ್ಷಣ ತಜ್ಞ, ಕಾನೂನು ತಜ್ಞ, ರಾಜಕೀಯ ಚಿಂತಕ, ಸಮಾನತೆಯ ಹರಿಕಾರ, ಪುಸ್ತಕ ಪ್ರೇಮಿ, ಮಹಿಳೆಯರಿಗೆ ಶಿಕ್ಷಣ ಮತ್ತು ಸಮಾನತೆಯನ್ನು ತಂದ ಮಹಾನ್ ಚೇತನ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಎಲ್ಲರಿಗೂ ಆದರ್ಶ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಉಪನಿರ್ದೇಶಕ ನಾಗಮಲ್ಲೇಶ್, ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯ ಓಂ ಪ್ರಕಾಶ್, ಕಾಲೇಜು ಪ್ರಾಂಶುಪಾಲ ಸುರೇಶ್, ನಂದೀಶ್, ಹೆಚ್.ಸಿ.ಕಾಳಿಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸ್ಯಾಂಟ್ರೋ ರವಿಯಂಥವರಿಂದ ಆಮಿಷಕ್ಕೊಳಗಾಗುವ ಪ್ರಸಂಗ ಬಂದರೆ ಸಾವು ಬಯಸುತ್ತೇನೆ



ಬೆಂಗಳೂರು: ಸ್ವಚ್ಛ ರಾಜಕಾರಣದಲ್ಲಿ ಬದ್ಧತೆ ಹೊಂದಿರುವ ನಾನು, ಸ್ಯಾಂಟ್ರೊ ರವಿಯಂಥವರಿಂದ ಆಮಿಷಕ್ಕೊಳಗಾಗುವಂತ ಪ್ರಸಂಗ ಬಂದರೆ, ಸಾವನ್ನು ಬಯಸುತ್ತೇನೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಲೆನಾಡು ಮಿತ್ರ ವೃಂದ ಆಯೋಜಿಸಿದ್ದ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಮಾಜ ದ್ರೋಹಿಗಳೂ ಮತ್ತು ಪೀಡಕರಿಂದ ಅಕ್ರಮವಾಗಿ ಹಣ ಗಳಿಸಬೇಕಾದ ಸಂದರ್ಭ ಬಂದರೆ, ಬದುಕಲು ಇಚ್ಛಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನನ್ನ ಗುಜರಾತ್ ಪ್ರವಾಸಕ್ಕೂ, ಸ್ಯಾಂಟ್ರೋ ರವಿ ಬಂಧನಕ್ಕೂ ಥಳುಕು ಹಾಕಿ ಮಾತನಾಡುತ್ತಿರುವ ಕೆಲವು ನಾಯಕರ ಬಗ್ಗೆ ಪ್ರಸ್ತಾಪಿಸಿದ ಸಚಿವರು, ನನ್ನ ಗುಜರಾತ್ ಪ್ರವಾಸ ಬಹಳ ಹಿಂದೆಯೇ ನಿಗದಿಯಾಗಿತ್ತು. ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ನಿಯೋಗದ ನೇತೃತ್ವ ವಹಿಸಿದ್ದ ನನ್ನ ಗುಜರಾತ್ ಭೇಟಿ ಹಾಗೂ ಕಾರ್ಯಕ್ರಮಗಳು ಪಾರದರ್ಶಕವಾಗಿವೆ ಎಂದರು.

ನಾಳೆಯಿಂದ ಸುತ್ತೂರು ಜಾತ್ರಾ ಮಹೋತ್ಸವ









ಒಂದನೇ ಪುಟದಿಂದ

ಪ್ರಭಾತ್ ಪೇರಿ, ನಡೆಯಲಿವೆ ಎಂದು ಹೇಳಿದರು.

20 ಲಕ್ಷ ಭಕ್ತರ ನಿರೀಕ್ಷೆ: ಪ್ರತಿ ವರ್ಷ ನಡೆಯುವ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕರ್ನಾಟಕ ಮತ್ತು ಹೊರ ರಾಜ್ಯದಿಂದ ಸುಮಾರು 20 ಲಕ್ಷಕ್ಕೂ ಅಧಿಕ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಪ್ರತಿನಿತ್ಯ ಸುಮಾರು 2 ರಿಂದ 3 ಲಕ್ಷ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳುವ ಸಾಧ್ಯತೆಯಿದೆ. ಜಾತ್ರೆಗೆ ಆಗಮಿಸುವ ಎಲ್ಲಾ ಭಕ್ತರಿಗೂ ಮೂರು ಹೊತ್ತಿನ ಊಟದ ವ್ಯವಸ್ಥೆ ಮಾಡಲಾಗಿದೆ. ಇದಕ್ಕಾಗಿ ಒಂದು ಸಾವಿರ ಅಡುಗೆ ಬಾಣಸಿಗರು ಹಾಗೂ ಅಡುಗೆ ಬಡಿಸಲು 5000 ಸಾವಿರಕ್ಕೂ ಅಧಿಕ ಸ್ವಯಂ ಸೇವಕರ ನಿಯೋಜಿಸಲಾಗಿದೆ ಎಂದು ಹೇಳಿದರು.

ಕೃಷಿ ಬ್ರಹ್ಮಾಂಡ ಈ ಬಾರಿಯ ವಿಶೇಷತೆ: ಈ ಬಾರಿಯ ಸುತ್ತೂರು ಜಾತ್ರಾ ಮಹೋತ್ಸವದ ಕೃಷಿ ಮೇಳದಲ್ಲಿ ಕೃಷಿ ಬ್ರಹ್ಮಾಂಡ ಎಂಬ ಥೀಮ್ ಇಟ್ಟುಕೊಂಡು ಒಂದು ಎಕರೆ ಕೃಷಿ ಭೂಮಿಯಲ್ಲಿ ರೈತರು ಹೇಗೆ ನೆಮ್ಮದಿ ಜೀವನ ಕಟ್ಟಿಕೊಳ್ಳಬಹುದು ಎಂಬುದರ ಬಗ್ಗೆ ಮಾಹಿತಿ ನೀಡಲಾಗುತ್ತದೆ. ವಿಶ್ವಸಂಸ್ಥೆ 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಿಸಿರುವುದರಿಂದ ಸಿರಿಧಾನ್ಯ ಬೆಳೆ ಈ ಬಾರಿಯ ಜಾತ್ರಾ ಮಹೋತ್ಸವದ ವಿಶೇಷತೆಯಾಗಿದೆ. 10X10 ಮತ್ತು 10X15 ವಿಸ್ತೀರ್ಣದ ಸುಮಾರು 350 ರಿಂದ 400 ಕೃಷಿ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಹೆಚ್ಚಾಗುತ್ತಿರುವುದರಿಂದ ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ದನಗಳ ಪರಿಷೆ ರದ್ದು: ಪ್ರತಿವರ್ಷ ಸುತ್ತೂರು ಜಾತ್ರಾ ಮಹೋತ್ಸವದ ದನಗಳ ಪರಿಷೆಯಲ್ಲಿ ರಾಜ್ಯದ ವಿವಿಧೆಡೆಯಿಂದ ರೈತರು ಸಾವಿರಾರು ಜೊತೆ ರಾಸುಗಳನ್ನು ತಂದು ಪ್ರದರ್ಶಿಸುತ್ತಿದ್ದರು. ಆದರೆ, ಈ ಬಾರಿ ಎಲ್ಲೆಡೆ ರಾಸುಗಳಿಗೆ ಚರ್ಮಗಂಟು ಕಾಯಿಲೆ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯವಂತ ರಾಸುಗಳಿಗೂ ಚರ್ಮರೋಗ ಅಂಟುವ ಆತಂಕ ಇರುವುದನ್ನು ಮನಗಂಡು ದನಗಳ ಜಾತ್ರೆ ರದ್ದು ಮಾಡಲಾಗಿದೆ ಎಂದರು.

ಮುಖ್ಯಮಂತ್ರಿ ಭಾಗಿ: ಜ.19ರಂದು ನಡೆಯುವ ಸಾಮೂಹಿಕ ವಿವಾಹ ಮಹೋತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಸ್.ಎ.ರಾಮದಾಸ್, ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ, ಜೆಕೆ ಟೈರ್ಸ್ ಉಪಾಧ್ಯಕ್ಷ ವೃಪ್ಪ ಈಶ್ವರ್‌ರಾವ್, ತಿರುಮಲೈ ತಂಬು ಹಾಗೂ ಭಾರತೀ ರೆಡ್ಡಿ ಪಾಲ್ಗೊಳ್ಳಲಿದ್ದಾರೆ.

ಜ.20 ರಂದು ರಥೋತ್ಸವ: ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಜ.20ರಂದು ಬೆಳಗ್ಗೆ 10ಕ್ಕೆ ರಥೋತ್ಸವ ಜರುಗಲಿದೆ. ಕೇಂದ್ರ ಕಲ್ಲಿದ್ದಲು ಗಣಿ ಸಚಿವ ಪ್ರಹ್ಲಾದ್ ಜೋಷಿ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ದೇಶಿ ಆಟಗಳು ಮತ್ತು ಚಿತ್ರಕಲಾ ಸ್ಪರ್ಧೆಯ ಅಧ್ಯಕ್ಷತೆಯನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ವಹಿಸಲಿದ್ದಾರೆ. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕ ದಿನೇಶ್ ಗುಂಡೂರಾವ್, ವಿಶ್ವವಾಣಿಯ ವಿಶ್ವೇಶ್ವರ ಭಟ್, ಡಾ.ಸಿ.ಸೋಮಶೇಖರ್ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ.

ಜ.21 ರಂದು ಬೆಳಗ್ಗೆ 10.30ಕ್ಕೆ ಸಿರಿಧಾನ್ಯಗಳ ಮಹತ್ವ ಕುರಿತು ನಡೆಯುವ ವಿಚಾರ ಸಂಕಿರಣದ ಉದ್ಘಾಟನೆಯನ್ನು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ನೆರವೇರಿಸಲಿದ್ದಾರೆ. ಕೇರಳ ಕೃಷಿ ಸಚಿವ ಪಿ.ಪ್ರಸಾದ್, ಆರ್‌ಎಸ್‌ಎಸ್‌ನ ಸಹ ಸರಕಾರ್ಯವಾಹಕ ಸಿ.ಆರ್ ಮುಕುಂದ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ, ಪಬ್ಲಿಕ್ ಟಿವಿಯ ಹೆಚ್.ಆರ್.ರಂಗನಾಥ್ ಹಾಗೂ ಇತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಜ.22 ರಂದು ಭಜನಾ ಮೇಳ ಸಮಾರೋಪ ನಡೆಯಲಿದೆ. ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಸಮಾರೋಪ ಭಾಷಣ ಮಾಡಲಿದ್ದಾರೆ. ವಸತಿ ಸಚಿವ ವಿ ಸೋಮಣ್ಣ, ಸಚಿವರಾದ ಎಂಟಿಬಿ ನಾಗರಾಜು, ಬಿ.ಸಿ ನಾಗೇಶ್, ಶಾಸಕರಾದ ತನ್ವೀರ್ ಸೇಠ್, ಆರ್.ವಿ ದೇಶಪಾಂಡೆ, ಸಂಸದ ಪ್ರತಾಪ್ ಸಿಂಹ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ.

ಜಾತ್ರಾ ಮಹೋತ್ಸವದ ಕೊನೆಯ ದಿನವಾದ ಜ.23 ರಂದು ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ ನಡೆಯಲಿದೆ. ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮಿ, ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಸಮಾರೋಪ ಭಾಷಣವನ್ನು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಮಾಡಲಿದ್ದಾರೆ. ಸಂಸದ ಸದಾನಂದಗೌಡ, ಸಚಿವ ಆಚಾರ್ ಹಾಲಪ್ಪ, ಶಾಸಕರಾದ ಎಂ.ಬಿ ಪಾಟೀಲ್, ಸಿ.ಟಿ ರವಿ, ಜಿ.ಟಿ ದೇವೇಗೌಡ, ಅಡಗೂರು ಹೆಚ್.ವಿಶ್ವನಾಥ, ಅನಿಲ್ ಚಿಕ್ಕಮಾದು ಹಾಗೂ ಇತರರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಜಾತ್ರಾ ಮಹೋತ್ಸವದ ಯಶಸ್ಸಿಗೆ ಈಗಾಗಲೆ ಸಿದ್ಧತಾ ಕಾರ್ಯ ಭರದಿಂದ ಸಾಗಿದ್ದು, ಭಕ್ತರಿಗೆ ಪ್ರಸಾದಕ್ಕೆ ಅಗತ್ಯ ವಸ್ತುಗಳನ್ನು ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿವಿಧ ಕಾರ್ಯಕ್ರಮ ನಡೆಯುವ ವೇದಿಕೆ ನಿರ್ಮಾಣ ಮಾಡಲಾಗುತ್ತಿದೆ. ಎರಡು ವರ್ಷದ ನಂತರ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಭಕ್ತರು ಉತ್ಸುಕರಾಗಿದ್ದು, ಅಪಾರ ಸಂಖ್ಯೆಯ ಭಕ್ತರ ಆಗಮನಕ್ಕೆ ಸುತ್ತೂರು ಕ್ಷೇತ್ರ ಸಾಕ್ಷಿಯಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವಿದ್ಯಾಪೀಠದ ಗೌರವ ಕಾರ್ಯದರ್ಶಿ ಶಿವಕುಮಾರಸ್ವಾಮಿ, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಬೆಟಸೂರ ಮಠ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿ.ಪೇಟೆ ಬಳಿ ಪದವೀಧರೆ ಭೀಕರ ಹತ್ಯೆ



ವಿರಾಜಪೇಟೆ, ಜ.16– ಪದವೀಧರ ಯುವತಿಯನ್ನು ಕತ್ತಿಯಿಂದ ಕಡಿದು ಭೀಕರವಾಗಿ ಕೊಲೆ ಮಾಡಿರುವ ಘಟನೆ ವಿರಾಜಪೇಟೆ ತಾಲೂಕಿನ ನಾಂಗಾಲ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಅಲ್ಲಿನ ನಿವಾಸಿ ಬುಟ್ಟಿಂಯಂಡ ಮಾದಪ್ಪ ಮತ್ತು ಸರಸ್ವತಿ ದಂಪತಿ ಪುತ್ರಿ ಆರತಿ (24) ಎಂಬುವರೇ ಹತ್ಯೆಯಾದವಳಾಗಿದ್ದು, ಭಾನುವಾರ ಸಂಜೆ ಈಕೆಯ ಮನೆ ಬಳಿಯಿರುವ ಮಣ್ಣಿನ ರಸ್ತೆಯಲ್ಲಿ ಶವ ಪತ್ತೆಯಾಗಿದೆ. ಆಕೆಯ ಕುತ್ತಿಗೆ ಮತ್ತು ತಲೆ ಭಾಗಕ್ಕೆ ಕತ್ತಿಯಿಂದ ಕಡಿದು ಹತ್ಯೆ ಮಾಡಲಾಗಿದೆ.

ವಿಷಯ ತಿಳಿದು ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವ ಪೊಲೀಸರು, ಆರತಿಯ ಮೊಬೈಲ್ ಕರೆಗಳನ್ನು ಪರಿಶೀಲಿಸಿದಾಗ, ಆಕೆಯ ಮೊಬೈಲ್‌ಗೆ ಯುವಕನೋರ್ವ ಕೊನೆಯದಾಗಿ ಕರೆ ಮಾಡಿರುವುದು ಕಂಡು ಬಂದಿದೆ. ಈ ಮಧ್ಯೆ ನಾಂಗಾಲ ವ್ಯಾಪ್ತಿಯಲ್ಲಿರುವ ಕೆರೆ ದಡದಲ್ಲಿ ಯುವಕನ ಚಪ್ಪಲಿ, ಮದ್ಯ, ಹೆಲ್ಮೆಟ್, ಜಾಕೆಟ್ ಮತ್ತು ವಿಷದ ಖಾಲಿ ಬಾಟಲಿ ಪತ್ತೆಯಾಗಿದೆ.

ಈ ಹಿನ್ನೆಲೆಯಲ್ಲಿ ಯುವತಿಯನ್ನು ಹತ್ಯೆಗೈದವನು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಸಂಶಯದ ಮೇರೆಗೆ ಅಗ್ನಿಶಾಮಕ ದಳ ಹಾಗೂ ಮುಳುಗು ತಜ್ಞರ ಸಹಕಾರದೊಂದಿಗೆ ಸೋಮವಾರ ಸಂಜೆವರೆಗೂ ಪೊಲೀಸರು ಕೆರೆಯಲ್ಲಿ ಶೋಧ ಕಾರ್ಯ ನಡೆಸಿದರಾದರೂ, ಯಾವುದೇ ಮೃತದೇಹ ಪತ್ತೆಯಾಗಿಲ್ಲ. ಹೀಗಾಗಿ ಹಂತಕ ಕೆರೆಯಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡಂತೆ ದೃಶ್ಯ ಸೃಷ್ಟಿಸಿ, ದಾರಿತಪ್ಪಿಸಿರಬಹುದು ಎಂದು ಶಂಕಿಸಿರುವ ಪೊಲೀಸರು, ಶಂಕಿತ ಯುವಕನಿಗಾಗಿ ಹುಡುಕಾಟ ನಡೆಸಿದ್ದಾರೆ.

ಆರತಿ ಮೊಬೈಲ್‌ಗೆ ಕೊನೆಯದಾಗಿ ಕರೆ ಮಾಡಿದ ಯುವಕ ಯಾರು ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದು, ಆತ ನಾಪತ್ತೆಯಾಗಿದ್ದಾನೆ ಎಂದು ಹೇಳಲಾಗಿದೆ. ಆತನೇ ಯುವತಿಯನ್ನು ಹತ್ಯೆ ಮಾಡಿರಬಹುದು ಎಂದು ಬಲವಾಗಿ ಶಂಕಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಯುವಕನ ಪತ್ತೆಗಾಗಿ ವಿಶೇಷ ತಂಡ ರಚಿಸಲಾಗಿದ್ದು, ತೀವ್ರ ಶೋಧ ಕಾರ್ಯ ನಡೆಯುತ್ತಿದೆ.

ಸ್ನಾನಕ್ಕೆ ತೆರಳಿದ್ದ ಯುವಕ ಕಾವೇರಿ ಪಾಲು



ಕುಶಾಲನಗರ, ಜ.16– ಇಲ್ಲಿನ ಬೈಚನಹಳ್ಳಿ ಬಳಿ ಕಾವೇರಿ ನದಿ ಸ್ನಾನಕ್ಕೆ ತೆರಳಿದ್ದ ಯುವಕನೋರ್ವ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ.

ಸೋಮವಾರಪೇಟೆ ತಾಲೂಕಿನ ತೋಳುರು ಶೆಟ್ಟಳ್ಳಿ ಗ್ರಾಮದ ನಿವಾಸಿ ಧರಣ್ (22) ಮೃತಪಟ್ಟ ದುರ್ದೈವಿಯಾಗಿದ್ದಾನೆ. ಈ ಯುವಕ ಹಿಂದೆ ತಾವರೆಕೆರೆ ಬಳಿಯ ಬಾರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ. ಈಗ ಆಲೂರು ಸಿದ್ಧಾಪುರ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿದು ಬಂದಿದೆ ಇಂದು ನದಿಯಲ್ಲಿ ಸ್ನಾನ ಮಾಡಲು ಹೋದ ಸಂದರ್ಭ ಈ ದುರ್ಘಟನೆ ನಡೆದಿದೆ. ಸ್ಥಳಕ್ಕೆ ಟೌನ್ ಪೊಲೀಸ್ ಠಾಣಾ ಪಿಎಸ್‌ಐ ಅಪ್ಪಾಜಿ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ

ಗೃಹಿಣಿ ಅನುಮಾನಾಸ್ಪದ ಸಾವು



ಮಡಿಕೇರಿ, ಜ.16– ಗೃಹಿಣಿ ಅನುಮಾನಸ್ಪಾದವಾಗಿ ಸಾವನ್ನಪ್ಪಿರುವ ಘಟನೆ ವಿರಾಜಪೇಟೆ ಹೊರವಲಯದ ಐಮಂಗಲ ಗ್ರಾಮದಲ್ಲಿ ನಡೆದಿದೆ. ರಕ್ಷಿತ್ ಎಂಬವರ ಪತ್ನಿ ಕಾವ್ಯ(23) ಎಂಬವರೇ ಮೃತಪಟ್ಟ ಮಹಿಳೆಯಾಗಿದ್ದಾರೆ.

ರಕ್ಷಿತ್ ಮತ್ತು ಕಾವ್ಯ 4 ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು ಎನ್ನಲಾಗಿದೆ. ಜ.15ರಂದು ಪತಿ ರಕ್ಷಿತ್ ಕೆಲಸ ಮುಗಿಸಿ ಸಂಜೆ ವೇಳೆಗೆ ಮನೆ ಹಿಂದಿರುಗಿದಾಗ ಮನೆಯ ಕೊಠಡಿ ಒಂದರಲ್ಲಿ ಕಾವ್ಯ ಅಂಗಾತ ಬಿದ್ದಿರುವುದು ಕಂಡು ಬಂದಿದ್ದು, ಅವರನ್ನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ದೇಹವನ್ನು ವೈದ್ಯರು ಪರೀಕ್ಷಿಸಿದ ಸಂದರ್ಭ ಕಾವ್ಯ ಮೃತಪಟ್ಟಿರುವುದು ದೃಢಪಟ್ಟಿದೆ. ಮೃತಳ ತಂದೆ ವಂಸತ ಎಂಬವರು ನೀಡಿದ ದೂರಿನ ಮೇರೆಗೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿದೆ. ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಗುಂಡು ಹಾರಿಸಿಕೊಂಡು ಯುವಕ ಆತ್ಮಹತ್ಯೆ



ಮಡಿಕೇರಿ, ಜ.16– ಗುಂಡು ಹಾರಿಸಿಕೊಂಡು ಯುವಕ ಆತ್ಮಹತ್ಯೆಗೆ ಶರಣಾದ ಘಟನೆ ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಗರ್ವಾಲೆ ಗ್ರಾಮದಲ್ಲಿ ಭಾನುವಾರ ನಡೆದಿದೆ. ಅಲ್ಲಿನ ನಿವಾಸಿ ನಾಪಂಡ ರಾಜೇಶ್(26) ಎಂಬಾತನೇ ಆತ್ಮಹತ್ಯೆಗೆ ಶರಣಾದ ಯುವಕನಾಗಿದ್ದು, ಭಾನುವಾರ ಕೋವಿ ಸಹಿತ ತೋಟಕ್ಕೆ ತೆರಳಿದ್ದ ರಾಜೇಶ್, ತಮ್ಮ ಕಾಫಿ ತೋಟದಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಈ ಘಟನೆ ಕುರಿತು ಮಾದಾಪುರ ಉಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕುಶಾಲನಗರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಬಿ.ಆರ್.ನಾರಾಯಣ ಆಯ್ಕೆ



ಕುಶಾಲನಗರ, ಜ.16– ಕುಶಾಲನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವತಿಯಿಂದ ಫೆ3 ರಂದು ಕುಶಾಲನಗರದಲ್ಲಿ ಹಮ್ಮಿಕೊಂಡಿರುವ ಕುಶಾಲನಗರ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಕುಶಾಲನಗರದ ಹಿರಿಯ ಸಾಹಿತಿಯೂ ಆದ ಹಿರಿಯ ಪತ್ರಕರ್ತರೂ ಆದ ಕುಶಾಲನಗರದಲ್ಲಿ ನೆಲೆಸಿರುವ ಬಿ.ಆರ್. ನಾರಾಯಣ ಆಯ್ಕೆಯಾಗಿದ್ದಾರೆ.

ಕುಶಾಲನಗರ ತಾಲೂಕು ಕಸಾಪದಿಂದ ಸೋಮವಾರ ಸಿದ್ದಯ್ಯ ಪುರಾಣಿಕ ಬಡಾವಣೆಯಲ್ಲಿರುವ ಬಿ.ಆರ್. ನಾರಾಯಣ ಅವರ ಮನೆಗೆ ತೆರಳಿ ಸಮ್ಮೇಳನ ಸರ್ವಾಧ್ಯಕ್ಷರಾಗಿ ಆಗಮಿಸುವಂತೆ ಆತ್ಮೀಯವಾಗಿ ಆಹ್ವಾನ ನೀಡಿ, ಸ್ವಾಗತಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವಕಾಮತ್ ಹಾಗೂ ಕಸಾಪ ತಾಲೂಕು ಅಧ್ಯಕ್ಷ ಕೆ.ಎಸ್.ಮೂರ್ತಿ ಸೇರಿದಂತೆ ಕಸಾಪ ಪದಾಧಿಕಾರಿಗಳು ಹಾಗೂ ಸಮ್ಮೇಳನದ ವಿವಿಧ ಉಪಸಮಿತಿಗಳ ಪ್ರಮುಖರು ಸೇರಿದಂತೆ ಸಾಹಿತಿ ಬಿ.ಆರ್. ನಾರಾಯಣ ಅವರನ್ನು ಸನ್ಮಾನಿಸಿ, ಫಲ ತಾಂಬೂಲ ನೀಡಿ ಗೌರವಿಸಲಾಯಿತು.

ಈ ಸಂದರ್ಭ ಮಾತನಾಡಿದ ಜಿಲ್ಲಾಧ್ಯಕ್ಷ ಕೇಶವಕಾಮತ್, ಸುಮಾರು ನಾಲ್ಕು ದಶಕಗಳ ಕಾಲ ಉಪನ್ಯಾಸಕ ವೃತ್ತಿ, ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಬಿ.ಆರ್.ನಾರಾಯಣ ಅವರು ಸಮ್ಮೇಳನಕ್ಕೆ ಆಯ್ಕೆಯಾಗಿರುವುದು ಸಂತಸದ ವಿಷಯ. ಈ ಆಯ್ಕೆ ಸಾಹಿತ್ಯ ಪರಿಷತ್ತಿಗೆ ಹಿರಿಮೆ ತಂದಿದೆ ಎಂದರು.

ನರೇನ್ ಕಾರ್ಯಪ್ಪರಿಗೆ ಎಸ್.ಎಂ.ಎ. ರಾಷ್ಟ್ರಪ್ರಶಸ್ತಿ



ಪೊನ್ನಂಪೇಟೆ, ಜ.16– ಜೆ.ಸಿ.ಐ. ಭಾರತದ ಸೀನಿಯರ್ ಮೆಂಬರ್ಸ್ ಅಸೋಸಿಯೇಷನ್ (ಎಸ್.ಎಂ.ಎ.)ನ– 2023ನೇ ಸಾಲಿನ ರಾಷ್ಟ್ರೀಯ ಮಂಡಳಿ ಉಪಾಧ್ಯಕ್ಷರಾಗಿರುವ ಕೊಡಗಿನ ಅಜ್ಜಿಕುಟ್ಟೀರ ಎಸ್. ನರೇನ್ ಕಾರ್ಯಪ್ಪ ಅವರಿಗೆ ಎಸ್.ಎಂ.ಎ. ರಾಷ್ಟ್ರ ಪ್ರಶಸ್ತಿ ಲಭಿಸಿದೆ.

ಜೆ.ಸಿ.ಐ. ಮಹಾಸಂಸ್ಥೆಯ ಹಿರಿಯ ಸದಸ್ಯರ ಸಂಸ್ಥೆ ಎಂದೇ ಕರೆಯಲಾಗುವ ಎಸ್.ಎಂ.ಎ. ಘಟಕಕ್ಕೆ ಕಳೆದ ವರ್ಷ ಕರ್ನಾಟಕದಿಂದ ಆಯ್ಕೆಗೊಂಡ ಏಕೈಕ ರಾಷ್ಟ್ರೀಯ ನಿರ್ದೇಶಕರಾಗಿದ್ದ ಎ.ಎಸ್. ನರೇನ್ ಕಾರ್ಯಪ್ಪ ಅವರಿಗೆ 2022ನೇ ಸಾಲಿನ 'ಅತ್ಯುತ್ತಮ ರಾಷ್ಟ್ರೀಯ ನಿರ್ದೇಶಕ' ರಾಷ್ಟ್ರಪ್ರಶಸ್ತಿ ದೊರೆತಿದೆ.

ಇತ್ತೀಚಿಗೆ ನವದೆಹಲಿಯಲ್ಲಿ ನಡೆದ ಎಸ್.ಎಂ.ಎ. ಪ್ರಥಮ ರಾಷ್ಟ್ರೀಯ ಮಹಾಧಿವೇಶನದಲ್ಲಿ ಎಸ್.ಎಂ.ಎ. ರಾಷ್ಟ್ರೀಯ ಮುಖ್ಯಸ್ಥರಾಗಿದ್ದ ಸಂಜಯ್ ಮಾಂಕಡ್ ಅವರಿಂದ ನರೇನ್ ಕಾರ್ಯಪ್ಪ ಅವರು ಕರ್ನಾಟಕದಿಂದ ಪಾಲ್ಗೊಂಡಿದ್ದ ಎಸ್.ಎಂ.ಎ. ಪ್ರತಿನಿಧಿಗಳ ಸಮ್ಮುಖದಲ್ಲಿ ಈ ಪ್ರಶಸ್ತಿ ಸ್ವೀಕರಿಸಿದರು. ಕಳೆದ ವರ್ಷ ಎಸ್.ಎಂ.ಎ. ವಿಭಾಗದ ರಾಷ್ಟ್ರೀಯ ನಿರ್ದೇಶಕರಾಗಿ ಸಲ್ಲಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಜೆ.ಎಫ್.ಎಸ್. ಪುರಸ್ಕೃತರಾದ ನರೇನ್ ಕಾರ್ಯಪ್ಪ ಅವರನ್ನು ಈ ಪ್ರಶಸ್ತಿಗೆ ಆಯ್ಕೆಗೊಳಿಸಲಾಗಿದೆ. ಪ್ರಶಸ್ತಿ ಸ್ವೀಕರಿಸಿದ ಸಂದರ್ಭದಲ್ಲಿ ಜೆ ಸಿ ಐ ಭಾರತದ ಸಂಚಿಕೆಯ ಸಂಪಾದಕ ಮಂಡಳಿ ಮುಖ್ಯಸ್ಥರಾದ ಭರತ್ ಎನ್. ಆಚಾರ್ಯ, ಪೂರ್ವ ರಾಷ್ಟ್ರೀಯ ನಿರ್ದೇಶಕರಾದ ಟಿ.ಎನ್. ದೇವರಾಜ್, ಎಸ್.ಎಂ.ಎ. ವಲಯ ಮುಖ್ಯಸ್ಥರಾಗಿದ್ದ ಮೈಸೂರಿನ ಕೆ.ಎಸ್. ಕುಮಾರ್, ನಿಯೋಜಿತ ವಲಯ ಮುಖ್ಯಸ್ಥರಾದ ಶಶಿಕಾಂತ್, ಕೊಡಗಿನ ಎಂ.ಡಿ. ರಂಗಸ್ವಾಮಿ, ಎಂ.ಟಿ. ನಂಜಪ್ಪ, ನಾಗೇಗೌಡ ಸೇರಿದಂತೆ ಕರ್ನಾಟಕದ ಪ್ರತಿನಿಧಿಗಳು ಹಾಜರಿದ್ದರು.

ಸಕ್ಕರೆ ನಾಡಲ್ಲಿ ಸಂಕ್ರಾಂತಿ ಸಂಭ್ರಮ



ಮಂಡ್ಯ, ಜ.16– ವರ್ಷದ ಮೊದಲ ಹಬ್ಬ ಸುಗ್ಗಿಯ ಸಂಕ್ರಾಂತಿ ಹಬ್ಬವನ್ನು ಸಕ್ಕರೆ ನಾಡು ಮಂಡ್ಯದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಮಹಿಳೆಯರು, ಮಕ್ಕಳು ಎಳ್ಳು–ಬೆಲ್ಲ ವಿನಿಮಯದೊಂದಿಗೆ ಹಬ್ಬ ಆಚರಿಸಿದರೆ, ಪುರುಷರು ಜಾನುವಾರುಗಳನ್ನು ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ಬರಮಾಡಿಕೊಂಡರು.

ನಗರಕ್ಕಿಂತ ಗ್ರಾಮೀಣ ಭಾಗದಲ್ಲಿ ಸಂಕ್ರಾಂತಿ ಹಬ್ಬ ಕಳೆಗಟ್ಟಿತ್ತು. ಕೃಷಿ ಪ್ರಧಾನ ಜಿಲ್ಲೆ ಮಂಡ್ಯದಲ್ಲಿ ಎಲ್ಲಾ ಹಬ್ಬಗಳಿಗಿಂತ ಸಂಕ್ರಾಂತಿ ಬಹಳ ವೈಶಿಷ್ಟಪೂರ್ಣ ಹಬ್ಬವಾಗಿರುವುದರಿಂದ ಮುಂಜಾನೆಯೇ ಜಾನುವಾರು ತೊಳೆಯುವುದು. ಅವುಗಳಿಗೆ ಅಲಂಕಾರ ಮಾಡುವುದು ಕಂಡು ಬಂದರೆ, ಕೆಲವೆಡೆ ಕಟಾವಾಗಿರುವ ರಾಶಿ ಭತ್ತ, ರಾಗಿಗೆ ಪೂಜೆ ಮಾಡುವ ದೃಶ್ಯಗಳು ಕಂಡು ಬಂತು. ಇನ್ನು ಮಕ್ಕಳು ಹಾಗೂ ಮಹಿಳೆಯರು ಹೊಸ ಬಟ್ಟೆ ಧರಿಸಿ, ಎಳ್ಳು–ಬೆಲ್ಲ ವಿನಿಮಯ ಮಾಡಿಕೊಳ್ಳುವುದು ಸಾಮಾನ್ಯವಾಗಿತ್ತು.


ಇನ್ನು ದೇವಾಲಯಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆ, ಪುನಸ್ಕಾರ ನಡೆದರೆ, ಸಂಜೆ ವೇಳೆಗೆ ಜಿಲ್ಲೆಯ ನೂರಾರು ದೇವಾಲಯಗಳಲ್ಲಿ ಲಕ್ಷ ದೀಪೋತ್ಸವ ನಡೆಯಿತು. ಇನ್ನು ಮನೆಗಳಲ್ಲಿ ಬಗೆಬಗೆಯ ತಿಂಡಿ, ತಿನಿಸುಗಳು, ಕಿಚಡಿ, ಪೊಂಗಲ್ ತಯಾರಿಸಿದ್ದು ಸಾಮಾನ್ಯವಾಗಿತ್ತು. ಸಂಜೆ ವೇಳೆಗಂತೂ ಜಾನುವಾರುಗಳನ್ನು ಆಕರ್ಷಕ ಬಣ್ಣಗಳು, ಟೇಪ್, ಥರ್ಮಕೋಲುಗಳಿಂದ ಶೃಂಗರಿಸಿ, ಮೈಮೇಲೆ ಬಣ್ಣ ಹಚ್ಚಿ, ಪುನೀತ್ ರಾಜ್‌ಕುಮಾರ್ ಸೇರಿದಂತೆ ಹಲವು ನಟರು ಹಾಗೂ ರಾಜಕೀಯ ನಾಯಕರ ಭಾವ ಚಿತ್ರಗಳನ್ನು ಬಿಡಿಸಿ, ಕಿಚ್ಚು ಹಾಯಿಸಿದರು.

ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ, ಗುತ್ತಲು ರಸ್ತೆ, ಕಲ್ಲಹಳ್ಳಿ, ಹೊಸಹಳ್ಳಿ, ಬನ್ನೂರು ರಸ್ತೆಯ ವಿವಿಧ ಗ್ರಾಮಗಳು, ಕೆರಗೋಡು, ಬಸರಾಳು ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕಿನಲ್ಲೂ ಅದ್ದೂರಿಯಾಗಿ ಕಿಚ್ಚು ಹಾಯಿಸಿದರು.

12 ಮಂದಿಗೆ ಗಾಯ: ಸಂಕ್ರಾಂತಿ ಸಂಭ್ರಮದಲ್ಲಿ ರಾಸುಗಳನ್ನು ಕಿಚ್ಚು ಹಾಯಿಸುವ ವೇಳೆ 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ತಾಲೂಕಿನ ಚೀರನಹಳ್ಳಿ, ಹೊಸಹಳ್ಳಿ, ಸ್ವರ್ಣಸಂದ್ರ ಬಡಾವಣೆಯಲ್ಲಿ ಕಿಚ್ಚು ಹಾಯಿಸುವಾಗ 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಕೆಲವರನ್ನು ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚೀರನಹಳ್ಳಿಯಲ್ಲಿ 5 ಮಂದಿ, ಹೊಸಹಳ್ಳಿಯಲ್ಲಿ ಐದಕ್ಕೂ ಹೆಚ್ಚು ಮಂದಿ, ಸ್ವರ್ಣಸಂದ್ರದಲ್ಲಿ ಇಬ್ಬರು ಗಾಯಗೊಂಡಿದ್ದು, ಜಿಲ್ಲೆಯ ಹಲವೆಡೆ ಕಿಚ್ಚು ಹಾಯಿಸುವಾಗ ಕೆಲವರು ಸಣ್ಣಪುಟ್ಟ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ.

ಚಿಕ್ಕಾಡೆ ಅಣ್ಣೇಗೌಡ ನಿಧನ



ಪಾಂಡವಪುರ, ಜ.16– ತಾಲೂಕಿನ ಹಿರಿಯ ರಾಜಕೀಯ ಮುತ್ಸದ್ದಿ, ಜಿಪಂ ಮಾಜಿ ಅಧ್ಯಕ್ಷ ಚಿಕ್ಕಾಡೆ ಅಣ್ಣೇಗೌಡ(85) ಭಾನುವಾರ ಬೆಳಗ್ಗೆ ನಿಧನರಾದರು.

ಹಲವು ವರ್ಷಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ತಾಲೂಕಿನ ಹಿರಿಯ ರಾಜಕಾರಣಿ ಚಿಕ್ಕಾಡೆ ಅಣ್ಣೇಗೌಡರು ಕಾವೇರಿ ಚಳವಳಿ ಸೇರಿದಂತೆ ಅನೇಕ ಹೋರಾಟದಲ್ಲಿ ಭಾಗವಹಿಸಿದ್ದರು.

ಮೃತರು ಪತ್ನಿ ಗೌರಮ್ಮ, ಪುತ್ರ ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಪಟ್ಟಣದ ಮೃತರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ಸಂದೇಶ್ ನಾಗರಾಜು, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಹೆಚ್.ತ್ಯಾಗರಾಜು, ಮುಖಂಡರಾದ ಎಸ್.ಎಲ್. ಲಿಂಗರಾಜು, ಚುಂಚನಗಿರಿ ಮಠದ ಕಾರ್ಯದರ್ಶಿ ರಾಮಕೃಷ್ಣೇಗೌಡ ಸೇರಿದಂತೆ ಹಲವರು ಮೃತರ ಅಂತಿಮ ದರ್ಶನ ಪಡೆದರು. ಚಿಕ್ಕಾಡೆ ಗ್ರಾಮದ ಹೊರವಲಯದ ತೋಟದಲ್ಲಿ ಭಾನುವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿತು.

ವರಿಷ್ಠರು ಜೆಡಿಎಸ್ ಅಭ್ಯರ್ಥಿ ವಿಚಾರವಾಗಿ ಮರು ಪರಿಶೀಲಿಸಿ

ವರಿಷ್ಠರಿಗೆ ಹಿರಿಯ ಮುಖಂಡ ಬಿ.ಎಲ್.ದೇವರಾಜು ಒತ್ತಾಯ



ಕೆ.ಆರ್.ಪೇಟೆ, ಜ.16– ಮುಂಬರುವ ಚುನಾವಣೆಗೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಹೆಚ್.ಟಿ.ಮಂಜು ಅವರ ಹೆಸರನ್ನು ಘೋಷಿಸಿರುವ ವರಿಷ್ಠರು ತಮ್ಮ ನಿರ್ಧಾರ ಮರು ಪರಿಶೀಲಿಸುವಂತೆ ಜೆಡಿಎಸ್ ಹಿರಿಯ ಮುಖಂಡ ಬಿ.ಎಲ್.ದೇವರಾಜು ಒತ್ತಾಯಿಸಿದರು.

ಪಟ್ಟಣದ ಸುಲೋಚನಮ್ಮ ರಾಮದಾಸ್ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಸೇರಿದಂತೆ ಮುಖಂಡರಾದ ಬಸ್ ಸಂತೋಷ್ ಹಾಗೂ ಬಸ್ ಕೃಷ್ಣೇಗೌಡ ಜೆಡಿಎಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಗಳಾಗಿದ್ದೇವೆ. ವರ್ಷದ ಹಿಂದೆ ಕೆ.ಆರ್.ಪೇಟೆ ಅಭ್ಯರ್ಥಿ ಆಯ್ಕೆ ಸಂಬಂಧ ವರಿಷ್ಠರು ನಮ್ಮ ಜೊತೆ ಸಮಾಲೋಚಿಸಿದ್ದರು. ಆನಂತರ ಯಾವುದೇ ಅಭಿಪ್ರಾಯ ಕೇಳದೆ ದಿಢೀರ್ ಹೆಚ್.ಟಿ.ಮಂಜು ಅವರನ್ನು ಅಭ್ಯರ್ಥಿಯಾಗಿ ಪ್ರಕಟಿಸಿದ್ದಾರೆ. ಎಲ್ಲರ ಸಹಮತ ಪಡೆದು ಅಭ್ಯರ್ಥಿ ಆಯ್ಕೆ ಮಾಡಬೇಕಾಗಿತ್ತು ಎಂದ ಅವರು, ಅಭ್ಯರ್ಥಿ ಘೋಷಣೆ ನಿರ್ಧಾರ ಮರು ಪರಿಶೀಲಿಸುವಂತೆ ಒತ್ತಾಯಿಸಲು ಜ.18ರಂದು ಪಟ್ಟಣದ ಟಿಎಪಿಸಿಎಂಎಸ್ ಸಮುದಾಯ ಭವನದಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಮತ್ತು ಅಭಿಮಾನಿಗಳ ಸಭೆ ಆಯೋಜಿಸಲಾಗಿದೆ ಎಂದರು.

ಈಗಾಗಲೇ ತಾಲೂಕಿನ ಹಳ್ಳಿ ಹಳ್ಳಿಗಳಿಗೆ ತೆರಳಿ ಪಕ್ಷದ ಕಾರ್ಯಕರ್ತರು ಮತ್ತು ಮತದಾರರಿಗೆ ಆಹ್ವಾನ ನೀಡುತ್ತಿದ್ದೇವೆ. ಎಲ್ಲಿಯೂ ನಾವು ಪಕ್ಷದ ವರಿಷ್ಠರು ಹಾಗೂ ಅಭ್ಯರ್ಥಿ ಆಯ್ಕೆ ಬಗ್ಗೆ ಟೀಕಿಸುತ್ತಿಲ್ಲ. ಬದಲಾಗಿ ನಮಗಾಗಿರುವ ಅನ್ಯಾಯ ಸರಿಪಡಿಸಲು ಕೋರುತ್ತಿದ್ದೇವೆ. ನಮ್ಮ ನೋವುಗಳನ್ನು ವರಿಷ್ಠರಿಗೆ ಮುಟ್ಟಿಸುವುದೇ ನಮ್ಮ ಸಭೆಯ ಮೂಲ ಉದ್ದೇಶ ಎಂದರು.

ಬಂಡಾಯದ ಪ್ರಶ್ನೆಯೇ ಇಲ್ಲ: ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. 1989ರಲ್ಲಿ ಕುರುಬ ಸಮುದಾಯದ ಹಿರಿಯ ನಾಯಕ ಕೆ.ಎನ್.ಕೆಂಗೇಗೌಡರಿಗೆ ಸಮಾಜವಾದಿ ಜನತಾ ಪಕ್ಷದಿಂದ ದೇವೇಗೌಡರು ಟಿಕೆಟ್ ನೀಡಿದಾಗಲೂ ನಾನು ದೇವೇಗೌಡರ ಪರ ಕೆಲಸ ಮಾಡಿದ್ದೇನೆ. ಮಾಜಿ ಸ್ಪೀಕರ್ ಕೃಷ್ಣ ದೇವೇಗೌಡರ ಪಾಳೇಯ ತ್ಯಜಿಸಿದಾಗಲೂ ನಾನು ಕ್ಷೇತ್ರದಲ್ಲಿ ದೇವೇಗೌಡರ ಪರ ಪಕ್ಷ ಸಂಘಟಿಸಿದ್ದೇನೆ. 2006ರ ಉಪ ಚುನಾವಣೆಯಲ್ಲಿ ಬೂಕನಕೆರೆ ಬಿ.ಜವರಾಯಿಗೌಡರಿಗೆ ಪಕ್ಷದ ಟಿಕೆಟ್ ನೀಡಿದಾಗಲೂ ನಾನು ದೇವೇಗೌಡರ ಅಣತಿ ಪಾಲಿಸಿದ್ದೇನೆ. 2013ರಲ್ಲಿ ಮುಂಬೈನಿಂದ ಕೆ.ಸಿ.ನಾರಾಯಣಗೌಡರನ್ನು ಕರೆತಂದು ಟಿಕೆಟ್ ನೀಡಿದಾಗಲೂ ನಾನು ಪಕ್ಷದ ಪರ ಕೆಲಸ ಮಾಡಿದ್ದೇನೆ. 2018ರಲ್ಲಿ ನನಗೆ ಬಿ.ಫಾರಂ ನೀಡಿ ನಾಮಿನೇಷನ್ ಸಲ್ಲಿಸುವ ವೇಳೆ ಟಿಕೆಟ್ ತಪ್ಪಿಸಿ ಕೆ.ಸಿ.ನಾರಾಯಣಗೌಡರಿಗೆ ಸಿ.ಫಾರಂ ನೀಡಿದಾಗಲೂ ನಾನು ಪಕ್ಷದ ವರಿಷ್ಠರ ವಿರುದ್ಧ ಅಪಸ್ವರ ಎತ್ತಿಲ್ಲ ಎಂದರು. ನನ್ನ ಜೀವನದಲ್ಲಿ ಎಂದೂ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಈಗಲೂ ಬಂಡಾಯದ ಪ್ರಶ್ನೆಯೇ ಇಲ್ಲ. ನಾನು ಪಕ್ಷದ ಹಿರಿಯ ಮುಖಂಡ. ನನಗೆ ವಯಸ್ಸಾಗಿದೆ. ಇದು ನನ್ನ ಕೊನೆ ಚುನಾವಣೆ. ಕಿರಿಯರಾದ ಹೆಚ್.ಟಿ.ಮಂಜು ಅವರನ್ನು ಟಿಕೆಟ್ ನೀಡಿಕೆಗೆ ಪರಿಗಣಿಸುವುದಾದರೆ ನಮ್ಮನ್ನೂ ಪರಿಗಣಿಸಿ ಎಂಬುದು ಬಸ್ ಕೃಷ್ಣೇಗೌಡ ಮತ್ತು ಬಸ್ ಸಂತೋಷ್ ನಿಲುವಾಗಿದೆ.

2018ರಲ್ಲಿ ಪಕ್ಷ ನನಗೆ ಬಿ.ಫಾರಂ ನೀಡಿದಾಗ ಅದನ್ನು ಗೌರವಿಸದೆ ಪಕ್ಷದ ವರಿಷ್ಠ ಹೆಚ್.ಡಿ.ದೇವೇಗೌಡರಿಗೆ ಧಿಕ್ಕಾರ ಕೂಗಿ ಪ್ರತಿಭಟಿಸಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ ಮತ್ತು ಹಾಲಿ ಅಭ್ಯರ್ಥಿ ಹೆಚ್.ಟಿ.ಮಂಜು ಕೆ.ಸಿ.ನಾರಾಯಣಗೌಡರ ಮನೆಯಿಂದ ಜನರನ್ನು ಸಂಘಟಿಸಿ ಕರೆದುಕೊಂಡು ಹೋದರು.

ನನಗೆ ಸಿಕ್ಕಿದ್ದ ಟಿಕೆಟ್ ತಪ್ಪಿಸಿ ನಾರಾಯಣಗೌಡರಿಗೆ ಸಿ.ಫಾರಂ ತರಲು ನೆರವಾದವರು ಇವರುಗಳೇ ಎಂಬುದು ಇತ್ತೀಚೆಗೆ ಸಚಿವ ಕೆ.ಸಿ.ನಾರಾಯಣಗೌಡರ ಮೊಮ್ಮಗ ಸಾರಂಗಿ ಮಂಜುನಾಥ್ ಮತ್ತು ಎಚ್.ಟಿ. ಮಂಜು ನಡುವಿನ ಮಾತುಕತೆಯ ಆಡಿಯೋ ವೈರಲ್ ಆಗಿದೆ. ಅದರಲ್ಲಿಯೇ ಎಲ್ಲ ಸತ್ಯ ಮಂಜು ಅವರ ಬಾಯಿಂದಲೇ ಹೊರಬಂದಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟಿಕೆಟ್ ಆಕಾಂಕ್ಷಿಗಳಾದ ಬಸ್ ಕೃಷ್ಣೇಗೌಡ, ಬಸ್ ಸಂತೋಷ್‌ಕುಮಾರ್, ಮುಖಂಡರಾದ ಬಿಸಿಎಂ ಈರಪ್ಪಗೌಡ, ಕುಮಾರ್ ಇದ್ದರು.

ಟೆನ್ನಿಸ್ ಬಾಲ್ ಕ್ರಿಕೆಟ್: ಟೀಮ್ ಈಗಲ್ಸ್ ಬಾಯ್ಸ್ ಚಾಂಪಿಯನ್



ಶ್ರೀರಂಗಪಟ್ಟಣ, ಜ.16– ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ 3 ದಿನ ನಡೆದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಗಮನ ಸೆಳೆಯಿತು.

ಗ್ರಾಮದ ಯುವಕರ ಸಂಘದಿಂದ ನಡೆದ ಪಂದ್ಯಾವಳಿಯಲ್ಲಿ ಮಂಡ್ಯ, ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳ ತಂಡಗಳು ಗೆಲುವಿಗಾಗಿ ಸೆಣಸಾಡಿದವು. ಅಂತಿಮವಾಗಿ ಟೀಮ್ ಈಗಲ್ಸ್ ಬಾಯ್ಸ್ ಹೊಸಹಳ್ಳಿ ತಂಡ ಪ್ರಥಮ, ಮೈಸೂರಿನ ಜೂಂ ತಂಡ ದ್ವಿತೀಯ ಹಾಗೂ ಲವೆನ್ ಸ್ಟಾರ್ ಹೊಸಹಳ್ಳಿ ತಂಡ ತೃತೀಯ ಬಹುಮಾನ ಹಾಗೂ ಟ್ರೋಫಿ ಪಡೆದರು. ಈ ವೇಳೆ ಗ್ರಾಮದ ಯಜಮಾನ ಪೈಪುಟ್ಟಿ ರಾಜಣ್ಣ, ಗ್ರಾಪಂ ಅಧ್ಯಕ್ಷೆ ಜಯಶೀಲ, ಉಪಾಧ್ಯಕ್ಷ ವಿಶ್ವನಾಥ್, ಸದಸ್ಯರಾದ ಕೃಷ್ಣಾನಂದ್, ಚಲುವರಾಜ್, ಸಾಗರ್, ಶ್ರೀಕಂಠ, ಗ್ರಾಪಂ ಮಾಜಿ ಅಧ್ಯಕ್ಷರಾದ ವಾಸು, ಸತೀಶ್, ಪಿಡಿಓ ಚೇಂದಿಲ್ ಇನ್ನಿತರರಿದ್ದರು.

ಸಮಸ್ಯೆಗಳನ್ನು ಮೆಟ್ಟಿ ನಿಂತರೆ ಮಾತ್ರ ಯಶಸ್ಸು ಸಾಧ್ಯ

ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್ ಅಭಿಮತ




ಚಾಮರಾಜನಗರ, ಜ.16– ಜೀವನದಲ್ಲಿ ಎದುರಾಗುವ ಸಣ್ಣಪುಟ್ಟ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸದೆ ಅವುಗಳನ್ನು ಮೆಟ್ಟಿ ನಿಂತು ಸಾಧನೆಯತ್ತ ಗಮನ ಹರಿಸಿದರೆ ಯಶಸ್ಸು ಖಂಡಿತ ನಮ್ಮದಾಗುತ್ತದೆ ಎಂದು ಜಿಪಂ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್ ಹೇಳಿದರು.

ತಾಲೂಕಿನ ವೆಂಕಟಯ್ಯನಛತ್ರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಫ್ರೆಂಡ್ಸ್ ಕ್ಲಬ್ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಕ್ರೀಡಾಪಟುಗಳಿಗೆ ಉಡುಗೊರೆ ವಿತರಿಸಿ ಮಾತನಾಡಿದರು. ಜಗತ್ತಿಗೆ ಬೆಳಕು ನೀಡುವ ಸೂರ್ಯ ಮೊದಲು ತನ್ನನ್ನು ತಾನು ಸುಟ್ಟುಕೊಳ್ಳುತ್ತಾನೆ ಎಂಬುದು ನೆನಪಿನಲ್ಲಿರಬೇಕು. ನಾವು ಸೂರ್ಯನಂತೆ ಬೆಳಗಬೇಕೆಂದರೆ ಮೊದಲು ಉರಿಯಬೇಕು. ಕ್ರೀಡೆಯಲ್ಲಿ ಚಾಂಪಿಯನ್ ಆಗಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಆದರೆ ಗೆಲುವಿನ ಪತಾಕೆ ಹಾರಿಸಬೇಕೆಂದರೆ ನಿರಂತರ ಶ್ರಮ ಬೇಕಾಗುತ್ತದೆ. ಕೇವಲ ಮಾತಿನಿಂದ ಸಾಧನೆ ಸಾಧ್ಯವಿಲ್ಲ. ಅದಕ್ಕೆ ತನ್ನದೇಯಾದ ಶ್ರಮ ಬೇಕು. ಅಂದುಕೊಂಡ ಗುರಿ ತಲುಪಲು ದೃಷ್ಟಿ ಅಲುಗಾಡಿಸದೆ ಗುರಿ ಕಡೆಗೆ ಗಮನ ಹರಿಸಬೇಕು. ಪ್ರತಿಭೆ ಯಾರ ಸೊತ್ತು ಅಲ್ಲ ಎಂಬುದು ನೆನಪಿರಬೇಕು. ಗ್ರಾಮೀಣ ಭಾಗದ ಮಕ್ಕಳು ಹುಟ್ಟಿನಿಂದಲೇ ಕಷ್ಟ ನೋಡಿ ಬೆಳೆದಿರುತ್ತಾರೆ. ಜೀವನದಲ್ಲಿ ಎದುರಾಗುವ ತೊಂದರೆಗಳನ್ನು ದೊಡ್ಡದು ಮಾಡಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಮುಖಂಡರಾದ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಮಿತ್ ಕುಮಾರ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗಿರಿಮಲ್ಲು, ಯುವ ರೈತ ಮುಖಂಡ ವಿವೇಕಾನಂದ ಚಕ್ರವರ್ತಿ, ಗ್ರಾಮ ಪಂಚಾಯಿತಿ ಸದಸ್ಯರಾದ ಕೃಷ್ಣಮೂರ್ತಿ, ಎಚ್.ಆರ್.ಸ್ವಾಮಿ, ದೈಹಿಕ ಶಿಕ್ಷಕ ನಟರಾಜ್, ಮುಖಂಡರಾದ ಪುಟ್ಟಂಕ, ಪ್ರತಾಪ್, ಲೋಕೇಶ್, ಸತೀಶ್, ಚಂದು, ಪ್ರಸಾದ್, ಮಹೇಶ್, ಮಣಿಕಂಠ, ನಿತಿನ್, ಮತ್ತಿತರರಿದ್ದರು.

ಬಿಳಿಗಿರಿರಂಗನ ಬೆಟ್ಟದಲ್ಲಿ ಅದ್ದೂರಿ ರಥೋತ್ಸವ





ಯಳಂದೂರು, ಜ.16– ತಾಲೂಕಿನ ಪ್ರಸಿದ್ಧ ಯಾತ್ರಾಸ್ಥಳ ಬಿಳಿಗಿರಿರಂಗನ ಬೆಟ್ಟದಲ್ಲಿ ಬಿಳಿಗಿರಿ ರಂಗನಾಥ ಸ್ವಾಮಿಯ ಚಿಕ್ಕಜಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು.

ರಥೋತ್ಸವದ ಹಿನ್ನೆಲೆಯಲ್ಲಿ ವಿವಿಧ ಬಗೆಯ ಹೂವುಗಳಿಂದ ರಥವನ್ನು ಅಲಂಕರಿಸಲಾಗಿತ್ತು. ರಥೋತ್ಸವದಲ್ಲಿ ನೆರೆದಿದ್ದ ಭಕ್ತರು ಗೋವಿಂದ... ಗೋವಿಂದ... ಎಂಬ ಜಯಘೋಷದೊಂದಿಗೆ ರಥ ಎಳೆದರು. ರಥೋತ್ಸವದಲ್ಲಿ ಜಾಗಟೆ, ಶಂಖ ನಿನಾದ ಮೊಳಗಿದವು.

ಸೋಮವಾರ ಬೆಳಗ್ಗೆ 10.50ಕ್ಕೆ ರಥಾರೋಹಣ ಮಾಡಲಾಯಿತು. 10.53ಕ್ಕೆ ಗರುಡ ಹಾರಾಡಿತು. ನಂತರ 11.25ಕ್ಕೆ ತೇರನ್ನು ಎಳೆಯಲಾಯಿತು. ದೇವಸ್ಥಾನಕ್ಕೆ ಸುತ್ತು ಹಾಕಿದ ತೇರು ಬಳಿಕ ಸ್ವಸ್ಥಾನದಲ್ಲಿ ಬಂದು ಸೇರಿತು. ರಥೋತ್ಸವಕ್ಕೆ ಬಂದಿದ್ದ ನವ ಜೋಡಿಗಳು ಹಾಗೂ ಭಕ್ತರು ತೇರಿಗೆ ಹಣ್ಣು–ದವನ ಎಸೆದು ಹರಕೆ ತೀರಿಸಿದರು. ಈ ವರ್ಷದ ಮೊದಲ ರಥೋತ್ಸವ ಎಂಬ ಹಿನ್ನೆಲೆಯಲ್ಲಿ ಈ ಭಾಗದ ರೈತರು ತಾವು ಬೆಳೆದ ದವಸ, ಧಾನ್ಯಗಳನ್ನು ತೇರಿಗೆ ಎಸೆದು ದೇವರಿಗೆ ಸಮರ್ಪಿಸಿದರು. ಆ ಮೂಲಕ ಇಳುವರಿ ಹೆಚ್ಚಾಗಲಿ ಎಂದು ದೇವರಲ್ಲಿ ಬೇಡಿಕೊಂಡರು.

ಸೋಲಿಗರ ಸಂಭ್ರಮ: ಬಿಳಿಗಿರಿ ರಂಗನಬೆಟ್ಟ ಸೇರಿದಂತೆ ಸುತ್ತಮುತ್ತಲಿನ ಅರಣ್ಯದ ಪೋಡುಗಳಲ್ಲಿ ವಾಸಿಸುವ ಸಾವಿರಾರು ಸೋಲಿಗರು ಕಾಲ್ನಡಿಗೆಯಲ್ಲಿಯೇ ಬೆಟ್ಟಕ್ಕೆ ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡರು.

ಸೋಲಿಗರೆ ತೇರು ಕಟ್ಟುವುದು ಇಲ್ಲಿನ ವಿಶೇಷ. ಬಿಳಿಗಿರಿರಂಗನಾಥ ಸ್ವಾಮಿ ಸೋಲಿಗರ ಕುಸುಮಬಾಲೆಯನ್ನು ವರಿಸಿದ ಹಿನ್ನೆಲೆಯಲ್ಲಿ ಸೋಲಿಗರು ಬಿಳಿಗಿರಂಗ ನಾಥ ಸ್ವಾಮಿಯನ್ನು ರಂಗಭಾವ ಎಂದೇ ಕರೆಯುತ್ತಾರೆ.

ಬ್ಯಾಟೆ ಮಣೆ: ವಿವಿಧ ಭಾಗಗಳಿಂದ ಆಗಮಿಸಿದ್ದ ರಂಗನಾಥ ಸ್ವಾಮಿ ಭಕ್ತರು ಅಕ್ಕಿ, ಬೆಲ್ಲ, ಕಾಯಿಯನ್ನು ನೀರಿನಲ್ಲಿ ನೆನೆಸಿ ಅದಕ್ಕೆ ಕಜ್ಜಾಯ ಬೆರಸಿ ಬ್ಯಾಟೆ ಮಣೆ ಹಾಕಿ ಅದನ್ನು ಪ್ರಸಾದ ಎಂದು ಸ್ವೀಕರಿಸುವರು.

ರಥೋತ್ಸವದಲ್ಲಿ ಭಕ್ತರಿಗೆ ಮಜ್ಜಿಗೆ, ಪಾನಕ, ಪುಳಿಯೋಗರೆ ವಿತರಿಸಲಾಯಿತು. ಬೆಟ್ಟಕ್ಕೆ ಬೆಳಗ್ಗೆ 7 ಗಂಟೆಯಿಂದ ಕೆಎಸ್‌ಆರ್‌ಟಿಸಿಯಿಂದ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು ಎರಡು ದಿನಗಳಿಂದ ಬಿಳಿಗಿರಂಗನ ಬೆಟ್ಟಕ್ಕೆ ದ್ವಿಚಕ್ರ ವಾಹನವನ್ನು ನಿಷೇಧಿಸಿದ್ದರಿಂದ ಭಕ್ತರು ಬಸ್, ಕಾರುಗಳಲ್ಲಿ ಬೆಟ್ಟಕ್ಕೆ ಆಗಮಿಸಿದ್ದರು. ಚೆಕ್‌ಪೋಸ್ಟ್ ಬಳಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು.

ಬೆಟ್ಟದಲ್ಲಿ ಪ್ರಾಣಿ ಬಲಿ ನಿಷೇಧ ಇರುವುದರಿಂದ ವಾಹನಗಳನ್ನು ತಪಾಸಣೆ ಮಾಡಿ ಬಿಡಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆಯಿಂದ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿತ್ತು.

ಶರಣ್ಯ ಋಗ್ವೇದಿಗೆ ರಾಜ್ಯ ಯುವ ಪ್ರಶಸ್ತಿ





ಚಾಮರಾಜನಗರ, ಜ.16– ಸ್ವಾಮಿ ವಿವೇಕಾನಂದ ರಾಜ್ಯ ಯುವ ಪ್ರಶಸ್ತಿಗೆ ಝಾನ್ಸಿ ಯೂತ್ ಕ್ಲಬ್ ಅಧ್ಯಕ್ಷೆ ಶರಣ್ಯ ಋಗ್ವೇದಿಯವರನ್ನು ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ. ಎಸ್ ಬಾಲಾಜಿ ತಿಳಿಸಿದ್ದಾರೆ. 2022–23ನೇ ಸಾಲಿನ ಸ್ವಾಮಿ ವಿವೇಕಾನಂದ ರಾಜ್ಯ ಯುವ ಪ್ರಶಸ್ತಿ ಯನ್ನು ಜ.18 ರಂದು ಬೆಳಗ್ಗೆ 9 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೇ ಸುಬ್ರಹ್ಮಣ್ಯದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಪ್ರಧಾನ ಮಾಡಲಿದ್ದಾರೆ. ಬಂದರು ಮತ್ತು ಮೀನುಗಾರಿಕಾ ಸಚಿವ ಅಂಗಾರ ಅಧ್ಯಕ್ಷತೆ ವಹಿಸುವರು. ಝಾನ್ಸಿ ಯೂತ್ ಕ್ಲಬ್, ಜೈಹಿಂದ್ ಪ್ರತಿಷ್ಠಾನ, ಋಗ್ವೇದಿ ಯೂತ್ ಕ್ಲಬ್ ಇನ್ನಿತರ ಸಂಘಟನೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶರಣ್ಯ, ಬಾಲ್ಯದಲ್ಲೇ ಜಿಲ್ಲಾ ಸೃಜನಶೀಲ ಮಕ್ಕಳ ಪ್ರಶಸ್ತಿ ಯನ್ನು ಪಡೆದಿದ್ದರು. ಇಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿರುವ ಶರಣ್ಯ ಋಗ್ವೇದಿ ಕ್ರಿಯಾಶೀಲ ಚಟುವಟಿಕೆಗಳ ಮೂಲಕ ಸೇವೆ ಸಲ್ಲಿಸುತ್ತಿದ್ದಾರೆ. ಈಕೆ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ, ಚಿಂತಕ ಸುರೇಶ್ ಎನ್ ಋಗ್ವೇದಿ ಹಾಗೂ ಕುಸುಮ ರವರ ಪುತ್ರಿ

ಮೈಸೂರು

ಸುತ್ತಮುತ್ತ ಸಂವೃದ್ಧಿ ಸಂಕೇತ ಸಂಕ್ರಾಂತಿ ಸಂಭ್ರಮ

ಎಳ್ಳು-ಬೆಲ್ಲ ಹಂಚಿ ರಾಸುಗಳಿಗೆ ಕಿಚ್ಚಾಯಿಸಿ ಗ್ರಾಮೀಣ ವೈಭವ ಮೆರೆಸಿದ ಜನತೆ





ಮೈಸೂರು,ಜ.16(ಎಂಟಿವೈ)– ಉತ್ತರಾಯಣ ಪುಣ್ಯಕಾಲದ ಮಕರ ಸಂಕ್ರಾಂತಿ ಹಬ್ಬವನ್ನು ಸಾಂಸ್ಕೃತಿಕ ನಗರಿ ಮೈಸೂರಿನೆಲ್ಲೆಡೆ ಭಾನುವಾರ ಸಂಭ್ರಮದಿಂದ ಆಚರಣೆ ಮಾಡಲಾಯಿತು. ಹೊಸ ವರ್ಷದ ಮೊದಲ ಹಬ್ಬವಾದ ಸಂಕ್ರಾಂತಿ ಸಂಭ್ರಮ ಎಲ್ಲೆಡೆ ಮನೆ ಮಾಡಿತ್ತು.

ಜೀವನಪಥ ಬದಲಾವಣೆ ಹಾಗೂ ಯಶಸ್ಸಿನ ನಿರೀಕ್ಷೆಯೊಂದಿಗೆ ಜನರು ಬೆಳಗ್ಗೆಯಿಂದಲೇ ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ವಿಶೇಷವಾಗಿ, ಸಂಕ್ರಾಂತಿಯನ್ನು ಹೆಣ್ಣು ಮಕ್ಕಳ ಹಬ್ಬವೆಂದೇ ಕರೆಯಲಾಗುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ ವಿವಿಧ ದೇಗುಲಗಳಲ್ಲಿ ನೀರೆಯರ ಸಂಖ್ಯೆಯೇ ಹೆಚ್ಚಾಗಿತ್ತು. ಹೊಸ ಬಟ್ಟೆ ತೊಟ್ಟು ಗುಡಿಗಳಿಗೆ ಆಗಮಿಸಿದ ಮಹಿಳೆಯರು, ಯುವತಿಯರು ಹಾಗೂ ಹೆಣ್ಣು ಮಕ್ಕಳು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಸುಗ್ಗಿ ಹಬ್ಬದ ಅಂಗವಾಗಿ ನಗರದ ಹಲವೆಡೆ ಗೋಪೂಜೆ ಮಾಡಿ, ಎಳ್ಳು-ಬೆಲ್ಲ, ಬಾಳೆಹಣ್ಣು ಇನ್ನಿತರ ತಿನಿಸನ್ನು ಇವುಗಳಿಗೆ ತಿನ್ನಿಸಿ ಭಕ್ತಿ ಭಾವ ಮೆರೆದರು. ಸಂಜೆಯಾಗುತ್ತಿದ್ದಂತೆ ಮಹಿಳೆಯರು, ಯುವತಿಯರು ಹಾಗೂ ಪುಟಾಣಿಗಳು ಸಂಬಂಧಿಕರು, ಬಂಧು–ಮಿತ್ರರು ಹಾಗೂ ನೆರೆಹೊರೆಯವರ ಮನೆಗಳಿಗೆ ತೆರಳಿ ಎಳ್ಳುಬೆಲ್ಲ ವಿನಿಮಯ ಮಾಡಿಕೊಂಡು, ಹಬ್ಬದ ಶುಭಾಶಯ ಕೋರಿದರು.

ನಗರ ಪ್ರದೇಶಗಳಲ್ಲಿ ಸಂಕ್ರಾಂತಿ ಆಚರಣೆ ಒಂದು ರೀತಿಯಾದರೆ, ಗ್ರಾಮೀಣ ಭಾಗಗಳಲ್ಲಿ ಮತ್ತಷ್ಟು ವಿಶೇಷತೆಯಿಂದ ಕೂಡಿತ್ತು. ರೈತರ ಪಾಲಿಗೆ ಸುಗ್ಗಿ ಹಬ್ಬವಾಗಿರುವ ಸಂಕ್ರಾಂತಿ ಪ್ರಯುಕ್ತ ದನಕರುಗಳ ಮೈತೊಳೆದು, ಅಲಂಕಾರ ಮಾಡಲಾಗಿತ್ತು. ನಗರ ಪ್ರದೇಶದಲ್ಲೂ ಗ್ರಾಮ್ಯ ಸೊಗಡು ಉಳಿಸಿಕೊಂಡಿರುವ ಕುರುಬಾರಹಳ್ಳಿ, ಕೆ.ಜಿ.ಕೊಪ್ಪಲು, ತೊಣಚಿಕೊಪ್ಪಲು, ಕುಂಬಾರಕೊಪ್ಪಲು, ಪಡುವಾರಹಳ್ಳಿ ಮುಂತಾದೆಡೆ ಹಬ್ಬ ಕಳೆಗಟ್ಟಿತ್ತು. ಈ ಪ್ರದೇಶಗಳಲ್ಲಿ ಜಾನುವಾರುಗಳನ್ನು ಬೆಳಗ್ಗೆಯೇ ಸ್ವಚ್ಛಗೊಳಿಸಿ, ಕೊಂಬು ಹಾಗೂ ಮೈಗೆ ಬಣ್ಣ ಬಳಿದು ಸಿಂಗರಿಸಿ ಪೂಜಿಸಿದರು.

ಚಾಮುಂಡಿಬೆಟ್ಟ, ಕೋಟೆ ಆಂಜನೇಯ ಸ್ವಾಮಿ, ನೂರೊಂದು ಗಣಪತಿ, ಯೋಗಾ ನರಸಿಂಹಸ್ವಾಮಿ ಒಂಟಿಕೊಪ್ಪಲಿನ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನ ಸೇರಿದಂತೆ ನಗರದ ಪ್ರಮುಖ ದೇಗುಲಗಳಲ್ಲಿ ವಿಶೇಷ ಪೂಜೆಗಳು ನಡೆದವು. ಹೀಗಾಗಿ, ದೇವಸ್ಥಾನಗಳ ಆವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕಂಡು ಬಂದರು.

ಶ್ರೀರಾಂಪುರದ ಶಿವನ ದೇವಾಲಯದಲ್ಲಿ ಭಕ್ತಾದಿಗಳಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಎಳ್ಳು-ಬೆಲ್ಲ ನೀಡಿ ಶುಭಾಶಯ ಕೋರಿದರು. ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಮುಖಂಡರಾದ ಪರಮೇಶ್, ಮೊಗಣ್ಣಾಚಾರ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು. ಮೇಯರ್ ಶಿವಕುಮಾರ್ ಅವರು ಪೌರಕಾರ್ಮಿಕರಿಗೆ ಸಮವಸ್ತ್ರ ಎಳ್ಳು-ಬೆಲ್ಲ ನೀಡಿ ಹಬ್ಬವನ್ನು ಆಚರಿಸಿದರು.

ಗೀತೆ ಗಾಯನ: ಹಬ್ಬದ ಪ್ರಯುಕ್ತ ಕಾಳಿಹುಂಡಿ ಶಿವಕುಮಾರ್ ಮತ್ತು ಗುಂಬಳ್ಳಿ ನಂದೀಶ್ ಗೆಳೆಯರ ಬಳಗದ ವತಿಯಿಂದ ಕನ್ನಡದ ಹಳೆಯ ಹಾಗೂ ಹೊಸ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಮಧುವನ ಬಡಾವಣೆಯ ಮಧುವನ ಉದ್ಯಾನದ ಆವರಣದಲ್ಲಿ ನಡೆಯಿತು. ಗಾಯಕ ಆರ್.ಟಿ. ರಮೇಶ್ ಕಾರ್ಯಕ್ರಮ ಉದ್ಘಾಟಿಸಿದರು.

ಜನ ಚೈತನ್ಯ ಫೌಂಡೇಷನ್ ವತಿಯಿಂದ 'ಸಂಕ್ರಾಂತಿ ಸಂಗೀತ ಸಂಭ್ರಮ' ಕಾರ್ಯಕ್ರಮ ವಿಶ್ವೇಶ್ವರನಗರ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಜರುಗಿತು. ಗಾಯಕರಾದ ರಾಮಣ್ಣ, ಶಾಂತಮ್ಮ, ಲಕ್ಷ್ಮಣ್, ಎನ್.ಲೋಕೇಶ್, ಮಹದೇವ್, ಶಿವಪ್ಪ, ಎಂ.ಪುಟ್ಟಸ್ವಾಮಿ, ಎನ್.ಬಸವರಾಜು, ಆರ್.ದಾಸು, ವೆಂಕಟೇಶ್ ಶಾದನಹಳ್ಳಿ ಅವರು ಭಕ್ತಿಗೀತೆ, ಕನ್ನಡಗೀತೆಗಳನ್ನು ಹಾಡಿ ಸಭಿಕರನ್ನು ರಂಜಿಸಿದರು. ಪಕ್ಕವಾದ್ಯದಲ್ಲಿ ಎನ್.ಲೋಕೇಶ್, ಶಿವಪ್ಪ, ಪಿ.ಗುರುಸ್ವಾಮಿ ಸಾಥ್ ನೀಡಿದರು.

ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ವತಿಯಿಂದ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಯಿತು. ಹಬ್ಬ ಮಹತ್ವನ್ನು ಜನರಿಗೆ, ಮಕ್ಕಳಿಗೆ ತಿಳಿಸಿಕೊಡುವ ಕಾರ್ಯವೂ ನಡೆಯಿತು. ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು.

ಸಿದ್ಧಲಿಂಗಪುರದಲ್ಲಿ ಕಿಚ್ಚು: ಪ್ರತಿ ವರ್ಷದಂತೆ ಮೈಸೂರು–ಬೆಂಗಳೂರು ಮುಖ್ಯ ರಸ್ತೆಯ ಸಿದ್ಧಲಿಂಗಪುರದಲ್ಲಿ ಈ ಬಾರಿಯೂ ಸಂಭ್ರಮದಿಂದ ರಾಸುಗಳಿಗೆ ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು.

ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ರಸ್ತೆಯಲ್ಲೇ ರಾಶಿ ಹುಲ್ಲನ್ನು ರಸ್ತೆಗೆ ಅಡ್ಡಲಾಗಿ ಇಟ್ಟು ಬೆಂಕಿ ಹಾಕಿ ಅಲಂಕೃತ ರಾಸುಗಳ ಕಿಚ್ಚು ಹಾಯಿಸಿ ರೈತರು ಸಂಭ್ರಮಿಸಿದರು. ಲಕ್ಷ ಲಕ್ಷ ಬೆಲೆಬಾಳುವ ರಾಸುಗಳಿಗೆ ಬೃಹತ್ ಗಾತ್ರದ ಹೂವಿನ ಹಾರ ಹಾಕಿ, ಕಣ್ಣಿಗೆ ಕಪ್ಪು ಇಟ್ಟು ಕರೆತಂದು ರೈತರು ಕಿಚ್ಚು ಹಾಯಿಸಿದರು. ಇದೇ ವೇಳೆ ಜೋಡಿ ಎತ್ತಿನ ಕೊಂಬಿಗೆ ನಟ ಪುನೀತ್ ರಾಜ್‌ಕುಮಾರ್ ಭಾವಚಿತ್ರ ಅಳವಡಿಸಿ ಕಿಚ್ಚು ಹಾಯಿಸಿದ್ದು ವಿಶೇಷವಾಗಿತ್ತು. ಕುರಿ, ಟಗರುಗಳಿಗೂ ಅಲಂಕಾರ ಮಾಡಿ ಕಿಚ್ಚು ಹಾಯಿಸಲಾಯಿತು.

ಶಿವದತ್ತ ಸಾಯಿ ಮಂದಿರಲ್ಲೂ ಹಬ್ಬ: ಮೈಸೂರು–ಕೆಆರ್‌ಎಸ್ ಮುಖ್ಯ ರಸ್ತೆ ಮಂಟಿಯಲ್ಲಿ ಉರಗ ತಜ್ಞ ಸ್ನೇಕ್ ಶ್ಯಾಮ್ ಅವರು ನಿರ್ಮಿಸಿರುವ ಶಿವದತ್ತ ಸಾಯಿ ಮಂದಿರದಲ್ಲಿ ಸಂಕ್ರಾಂತಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಲಾಯಿತು. ದೇವಾಲಯದಲ್ಲಿ ದೇಸಿ ತಳಿಯ ಗೋವುಗಳಿಗೆ ಪೂಜೆ ಸಲ್ಲಿಸಿ, ಕಿಚ್ಚು ಹಾಯಿಸಲಾಯಿತು.

ಮೂಡಲಹುಂಡಿಯಲ್ಲಿ: ಮೈಸೂರು ತಾಲೂಕಿನ ಮೂಡಲಹುಂಡಿಯಲ್ಲಿ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಬೀರೇಶ್ವರ, ಬಸವೇಶ್ವರ ಹಾಗೂ ಬನ್ನಿಮಹಾಕಾಳೇಶ್ವರಿ(ಬನ್ನಮ್ಮ) ದೇವರ ಉತ್ಸವ ಏರ್ಪಡಿಸಲಾಗಿತ್ತು. ಸಂಪ್ರದಾಯದಂತೆ ಬನ್ನೂರಿನ ಹೊಳೆಯಲ್ಲಿ ದೇವರ ಉತ್ಸವಮೂರ್ತಿಗೆ ಮಜ್ಜನ ಮಾಡಿ, ಸಂಜೆ ವೇಳೆಗೆ ಮೂಡಲಹುಂಡಿ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ದೇವರ ಉತ್ಸವ ಮೂರ್ತಿಯನ್ನು ವರಕೋಡು ಗ್ರಾಮದಲ್ಲಿರುವ ದೇವಾಲಯಕ್ಕೆ ಕೊಂಡೊಯ್ಯಲಾಯಿತು.

ಜ.20ರಂದು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಸಮಾವೇಶ ; ಹಲವು ಮುಖಂಡರ ಪಕ್ಷ ಸೇರ್ಪಡೆ ಸಮಾರಂಭದಲ್ಲಿ

25 ಸಾವಿರಕ್ಕೂ ಅಧಿಕ ಮಂದಿ ಭಾಗಿ: ಸಿದ್ದರಾಮಯ್ಯ ಶಕ್ತಿ ಪ್ರದರ್ಶನ

ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ವಿವರಣೆ



ಮೈಸೂರು,ಜ.16(ಪಿಎಂ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜ.20ರಂದು ಹಮ್ಮಿಕೊಂಡಿರುವ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಹಾಗೂ ಸೇರ್ಪಡೆ ಸಮಾರಂಭದಲ್ಲಿ 25 ಸಾವಿರ ಜನರನ್ನು ಸೇರಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಶಕ್ತಿಪ್ರದರ್ಶನ ನಡೆಸಲಾಗುವುದು ಎಂದು ಜಿಪಂ ಮಾಜಿ ಅಧ್ಯಕ್ಷರೂ ಆದ ಕೆಪಿಸಿಸಿ ಮುಖಂಡ ಕೆಮರೀಗೌಡ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದ್ದು, ಅಂದಿನ ಸಮಾವೇಶದಲ್ಲಿ ಜೆಡಿಎಸ್ ತೊರೆದು ಹಲವು ಮುಖಂಡರು ಯಾವುದೇ ಷರತ್ತಿಲ್ಲದೆ ಪಕ್ಷವನ್ನು ಸೇರುತ್ತಿದ್ದಾರೆ. ಆದ್ದರಿಂದ ಇತರೆ ಕಾಂಗ್ರೆಸ್ ಮುಖಂಡರು ಆತಂಕಪಡಬೇಕಾಗಿಲ್ಲ ಎಂದರು.

ಸಿದ್ದರಾಮಯ್ಯ ಅವರಿಗೆ ಕಳೆದ ಬಾರಿಯ ಕ್ಷೇತ್ರದಲ್ಲಿನ ಸೋಲು ಅತೀವ ನೋವುಂಟು ಮಾಡಿದೆ. ಆ ನೋವನ್ನು ಮರೆಸಬೇಕಾದರೆ 2023ರ ಚುನಾವಣೆಯಲ್ಲಿ ಅಭ್ಯರ್ಥಿ ಯಾರೇ ಆಗಲಿ 50 ಸಾವಿರ ಮತಗಳ ಅಂತರದಿಂದ ಗೆದ್ದು ತೋರಿಸಬೇಕು. ಆದ್ದರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್ ಮತ್ತು ಸಿದ್ದರಾಮಯ್ಯನವರು ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆ ಮಾಡುವವರನ್ನು ಗೆಲ್ಲಿಸುವ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಲಿಂಗದೇವರಕೊಪ್ಪಲು ಬಳಿ ಸಮಾವೇಶ ನಡೆಯಲಿದ್ದು, ಹಿನಕಲ್‌ನ ಗಣಪತಿ ದೇವಸ್ಥಾನದಿಂದ ಇಲ್ಲಿವರೆಗೆ ಪಕ್ಷದ ಕಾರ್ಯಕರ್ತರು, ಮುಖಂಡರ ಮೆರವಣಿಗೆ ನಡೆಯಲಿದೆ. 2 ಸಾವಿರ ಬೈಕ್‌ಗಳಲ್ಲಿ ಕಾರ್ಯಕರ್ತರು ರ್‍ಯಾಲಿ ಮುಖಾಂತರ ತೆರಳಲಿದ್ದು, ಸಾವಿರದ ಒಂದು ಕಳಸ ಹೊತ್ತು ಮಹಿಳೆಯರು ಹಾಗೂ ವಿವಿಧ ಕಲಾತಂಡಗಳ 180 ಕಲಾವಿದರು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಮಾತನಾಡಿ, 2023ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಪಂ ಮಾಜಿ ಸದಸ್ಯರಾದ ಪಟೇಲ್ ಜವರೇಗೌಡ, ಕೂರ್ಗಳ್ಳಿ ಮಹದೇವ್, ಅರುಣ್‌ಕುಮಾರ್, ಕೃಷ್ಣಕುಮಾರ್ ಸಾಗರ್, ಜೆ.ಜೆ.ಆನಂದ್, ಕೆಂಚಪ್ಪ, ಕೋಟೆಹುಂಡಿ ಮಹದೇವ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಮುಖಂಡರಾದ ಶ್ರೀಕಂಠ ತೊಂಡೇಗೌಡ, ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಹೊಸಹುಂಡಿ ರಘು, ಮೆಲ್ಲಹಳ್ಳಿ ಮಹದೇವ ಸ್ವಾಮಿ, ನಾರಾಯಣ, ಬೆಳವಾಡಿ ಲಕ್ಷ್ಮಣ್, ಲೋಕೇಶ್, ಧನಗಳ್ಳಿ ಬಸವರಾಜು, ಹಿನಕಲ್ ಪ್ರಕಾಶ್, ಉಮಾಶಂಕರ್, ಸಿದ್ದರಾಜು, ಹಂಚ್ಯಾ ಸಣ್ಣಸ್ವಾಮಿ, ರವಿಗೌಡ, ಜಿ.ಕೆ.ಬಸವಣ್ಣ, ನಾಡನಹಳ್ಳಿ ರವಿ, ರಫಿಕ್‌ಪಾಷ, ವಿಜಯಲಕ್ಷ್ಮಿ, ಬಿ.ಗುರುಸ್ವಾಮಿ, ಸತೀಶ್ ಕುಮಾರ್ ಮತ್ತಿತರರು ಹಾಜರಿದ್ದರು.

ಸಚಿನ್ ತೆಂಡೂಲ್ಕರ್ ದಾಖಲೆ ಧೂಳಿಪಟ ಮಾಡಿದ ಕಿಂಗ್ ಕೊಹ್ಲಿ



ತಿರುವಂತಪುರಂ: ಶ್ರೀಲಂಕಾ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಟೀಂ ಇಂಡಿಯಾದ ಸ್ಫೋಟಕ ಬ್ಯಾಟರ್ ವಿರಾಟ್ ಕೊಹ್ಲಿ ಭರ್ಜರಿ ಬ್ಯಾಟಿಂಗ್ ಮಾಡಿದ್ದು 46ನೇ ಶತಕ ಸಿಡಿಸಿದ್ದಾರೆ.

ತಿರುವನಂತಪುರಂನ ಗ್ರೀನ್ ಫೀಲ್ಡ್ ಸ್ಟೇಡಿಯಂನಲ್ಲಿ ಕೊಹ್ಲಿ ಶ್ರೀಲಂಕಾ ಬೌಲರ್‌ಗಳನ್ನು ದಂಡಿಸಿದರು. 110 ಎಸೆತಗಳನ್ನು ಎದುರಿಸಿದ ಕೊಹ್ಲಿ ಅಜೇಯ 166 ರನ್ ಗಳಿಸಿ ದರು. ಈ ವೇಳೆ ಇನ್ನಿಂಗ್ಸ್‌ನಲ್ಲಿ ಕೊಹ್ಲಿ 13 ಬೌಂಡರಿ ಮತ್ತು 8 ಸಿಕ್ಸರ್ ಸಿಡಿಸಿದರು. ಇದು ಕೊಹ್ಲಿ ಅವರ ಏಕದಿನ ವೃತ್ತಿ ಬದುಕಿನ 46ನೇ ಶತಕವಾಗಿದೆ. ಇನ್ನು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ 49 ಏಕದಿನ ಶತಕಗಳ ದಾಖಲೆಯನ್ನು ಮುರಿಯಲು ಅವರು ಕೇವಲ ನಾಲ್ಕು ಹೆಜ್ಜೆ ದೂರದಲ್ಲಿದ್ದಾರೆ.

ವಿರಾಟ್ ವರ್ಸಸ್ ಸಚಿನ್: ವಿರಾಟ್ ತಮ್ಮ 46ನೇ ಶತಕದಿಂದಾಗಿ ಸಚಿನ್ ಅವರ ಎರಡು ದೊಡ್ಡ ದಾಖಲೆಗಳನ್ನು ನಾಶಪಡಿಸಿದ್ದಾರೆ. ಒಂದು ತಂಡದ ವಿರುದ್ಧ ಅತಿ ಹೆಚ್ಚು ಏಕದಿನ ಶತಕಗಳನ್ನು(10) ಮತ್ತು ತವರಿನಲ್ಲಿ(21) ಅತೀ ಹೆಚ್ಚು ಶತಕಗಳನ್ನು ಗಳಿಸಿದ ವಿಷಯದಲ್ಲಿ ಕೊಹ್ಲಿ ಸಚಿನ್ ಅವರನ್ನು ಮೀರಿಸಿದ್ದಾರೆ.

ಕೊಹ್ಲಿ ಮತ್ತು ಸಚಿನ್ ತಮ್ಮ 46ನೇ ಏಕದಿನ ಶತಕದ ಇನ್ನಿಂಗ್ಸ್‌ನಲ್ಲಿ 150ಕ್ಕಿಂತ ಹೆಚ್ಚು ವೈಯಕ್ತಿಕ ರನ್ ಗಳಿಸಿದ್ದಾರೆ. ಅಲ್ಲದೆ ಇಬ್ಬರೂ ಬ್ಯಾಟ್ಸ್‌ಮನ್‌ಗಳು ಅಜೇಯವಾಗಿ ಪೆವಿಲಿಯನ್‌ಗೆ ಮರಳಿರುವುದು ವಿಶೇಷ. ಫೆಬ್ರವರಿ 2010ರ ಫೆಬ್ರವರಿಯಲ್ಲಿ ಸಚಿನ್ ದಕ್ಷಿಣ ಆಫ್ರಿಕಾ ವಿರುದ್ಧ ಗ್ವಾಲಿಯರ್ ಮೈದಾನದಲ್ಲಿ ತಮ್ಮ 46ನೇ ಶತಕವನ್ನು ಗಳಿಸಿದರು. ಸಚಿನ್ 147 ಎಸೆತಗಳಲ್ಲಿ 25 ಬೌಂಡರಿ ಮತ್ತು 4 ಸಿಕ್ಸರ್‌ಗಳ ಸಹಾಯದಿಂದ ಅಜೇಯ 200 ರನ್ ಪೇರಿಸಿದ್ದರು. ಇನ್ನು ಪುರುಷರ ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಸಿಡಿಸಿದ ಮೊದಲ ಆಟಗಾರ ಎಂಬ ಖ್ಯಾತಿಗೆ ಸಚಿನ್ ಪಾತ್ರರಾಗಿದ್ದಾರೆ.

ಪೋಕ್ಸೋ ಆರೋಪಿ ಬಂಧನ

ಮೈಸೂರು, ಜ.16(ಎಂಕೆ)– ಪೋಕ್ಸೋ ಕಾಯ್ದೆ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗದೆ ಸುಮಾರು 8 ವರ್ಷಗಳಿಂದ ನಾಪತ್ತೆಯಾಗಿದ್ದ ಆರೋಪಿಯನ್ನು ಮಂಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಬನ್ನಿಮಂಟಪ ಸಮೀಪದ ವಂದೇಮಾತರಂ ನಗರದ ನಿವಾಸಿ ಕೃಷ್ಣಪ್ಪ ಬಾಬುಲಾಲ್(58) ಬಂಧಿತ ಆರೋಪಿ. 2013ರಲ್ಲಿ ಪೋಕ್ಸೋ ಕಾಯ್ದೆ ಮತ್ತು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿತ್ತು ಆದರೆ, ಆರೋಪಿ 2015ರ ಮಾ.9ರಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡ ಹಿನ್ನೆಲೆ ಪ್ರಕರಣವನ್ನು ಎಲ್‌ಪಿಸಿ ಪ್ರಕರಣವೆಂದು ನ್ಯಾಯಾಲಯ ಆದೇಶ ಹೊರಡಿಸಿತ್ತು

ಈ ಸಂಬಂಧ ಆರೋಪಿ ಪತ್ತೆ ಕಾರ್ಯಾಚರಣೆ ನಡೆಸಿದ ಮಂಡಿ ಠಾಣೆ ಪೊಲೀಸರು, ಖಚಿತ ಮಾಹಿತಿ ಮೇರೆಗೆ ಬೆಂಗಳೂರಿನ ಶಿವಾಜಿನಗರದ ಪ್ರಿನ್ಸ್ ರಸ್ತೆಯ ದರ್ಗಾದ ಬಳಿ ಜ.10 ರಂದು ಆರೋಪಿಯನ್ನು ಬಂಧಿಸಿ, ಜ.11 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಜ.19ರಂದು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಮಾರೋಪ



ಎಂ.ಆರ್.ರವಿ



ವೆಂಕಟರಾಜು

ಮೈಸೂರು,ಜ.16(ಪಿಎಂ)– ಮುಕ್ತ ವಿವಿಯ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ವತಿಯಿಂದ ಕೆಎಎಸ್ ಮತ್ತು ಇತರೆ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಜ.19ರಂದು ನಡೆಯಲಿದೆ.

ವಿವಿಯ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ನಡೆಯುವ ಸಮಾರಂಭದಲ್ಲಿ ಹಿರಿಯ ಐಎಎಸ್ ಅಧಿಕಾರಿ ಡಾ.ಎಂ.ಆರ್.ರವಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತಂತೆ ಮುಖ್ಯ ಭಾಷಣ ಮಾಡಲಿದ್ದಾರೆ. ಇದೇ ವೇಳೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ, ಕೆಎಎಸ್ ಅಧಿಕಾರಿ ಡಾ.ಎನ್.ಸಿ.ವೆಂಕಟರಾಜು ಮುಕ್ತ ಭಂಡಾರ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ, ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿ, ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ. ವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರಲಿದ್ದಾರೆ. 2022ರ ನ.29ರಂದು ಪ್ರಾರಂಭವಾದ ಸದರಿ ಶಿಬಿರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 190 ಅಭ್ಯರ್ಥಿಗಳು ಭಾಗವಹಿಸಿದ್ದರು. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕುರಿತಂತೆ ಮಾಹಿತಿಗೆ ದೂ.ಸಂ. 0821–2515944 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಡಾ.ಎಸ್.ಕೃಷ್ಣಪ್ಪ ಕಿತ್ತೂರ್‌ಗೆ ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನ ಪ್ರಶಸ್ತಿ



ಮೈಸೂರು, ಜ.16(ಎಂಕೆ)– ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದಿಂದ ನೀಡುವ 2022–23ನೇ ಸಾಲಿನ 'ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನಾ ಪ್ರಶಸ್ತಿ'ಗೆ ಮೈಸೂರು ಮಹಾರಾಜ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಸ್. ಕೃಷ್ಣಪ್ಪ ಕಿತ್ತೂರ್ ಆಯ್ಕೆಯಾಗಿದ್ದಾರೆ. ಜ.29ರಂದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ನಗರದಲ್ಲಿ ನಡೆಯುವ ಸ್ವಾಮಿ ವಿವೇಕಾನಂದರ ಜಯಂತೋತ್ಸವ, ರಾಜ್ಯಮಟ್ಟದ ಸದ್ಭಾವನಾ ರಾಜ್ಯ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ಸಾಂಸ್ಕೃತಿಕ ಯುವ ವೈಭವ ಕಾರ್ಯಕ್ರಮ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಶನಿ ಮಹಾಶಾಂತಿ

ಮೈಸೂರು,ಜ.16(ಪಿಎಂ)– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜ.17ರಂದು ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ಧನಸ್ಸು, ಮಕರ, ಕುಂಭ ಮತ್ತು ಮೀನ ರಾಶಿಯವರಿಗೆ ಶನಿ ಮಹಾಶಾಂತಿ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 95354 13361, 98866 78091 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದಟ್ಟ ಮಂಜಿನ ನಡುವೆಯೂ ಮೈಸೂರಲ್ಲಿ ಯಶಸ್ವಿಯಾದ ಯೋಗಥಾನ್

● ಸಾವಿರಾರು ಯೋಗಪಟುಗಳಿಂದ ಯೋಗ ಪ್ರದರ್ಶನ ● ರಾಷ್ಟ್ರೀಯ ಯುವ ದಿನದ ಅಂಗವಾಗಿ ಆರೋಗ್ಯ ಆಯಾಮ





ಮೈಸೂರು,ಜ.15(ಎಂಟಿವೈ)– ದಟ್ಟವಾಗಿ ಆವರಿಸಿದ್ದ ಇಬ್ಬನಿ, ಕೊರೆಯುವ ಚಳಿಯ ನಡುವೆಯೂ ಮೈಸೂರಿನ ರೇಸ್‌ಕೋರ್ಸ್ ಮೈದಾನದಲ್ಲಿ ಭಾನುವಾರ ಬೆಳಗ್ಗೆ ಯೋಗಥಾನ್ ಯಶಸ್ವಿಯಾಗಿ ನಡೆಯಿತು. ವಿವಿಧ ವಯೋಮಾನದ ಸಾವಿರಾರು ಯೋಗಪಟುಗಳು ಸಾಮೂಹಿಕ ಯೋಗ ಪ್ರದರ್ಶನ ನೀಡಿ ಗಮನ ಸೆಳೆದರು.

ರಾಷ್ಟ್ರೀಯ ಯುವ ದಿನದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಆಯುಷ್ ಇಲಾಖೆ, ನೆಹರು ಯುವ ಕೇಂದ್ರ, ಎನ್‌ಎಸ್‌ಎಸ್ ಘಟಕ ವತಿಯಿಂದ ಆಯೋಜಿಸಿದ್ದ ಯೋಗಥಾನ್‌ಗೆ ಮಂಜು ಆವರಿಸಿತ್ತು ಅಕ್ಕ-ಪಕ್ಕದಲ್ಲಿ ನಿಂತವರು ಗುರುತು ಸಿಗಲು ಸಾಧ್ಯವಾಗದಂತೆ ಆವರಿಸಿದ್ದ ದಟ್ಟ ಮಂಜಿನ ನಡುವೆಯೂ 'ಯೋಗಥಾನ್' ಕಳೆಕಟ್ಟಿತ್ತು. ಬೆಳಗ್ಗೆ 7 ಗಂಟೆಗೆ ಯೋಗಥಾನ್ ಆರಂಭವಾದರೂ ಮುಂಜಾನೆ 5 ಗಂಟೆಯಿಂದಲೇ ಯೋಗಪಟುಗಳು ರೇಸ್‌ಕೋರ್ಸ್ ಮೈದಾನಕ್ಕೆ ಆಗಮಿಸಿ, ತಮಗೆ ಮೀಸಲಿರಿಸಿದ ಸ್ಥಳದಲ್ಲಿ ಯೋಗ ಮ್ಯಾಟ್ ಹಾಸಿಕೊಂಡು ಯೋಗ ಪ್ರದರ್ಶನಕ್ಕೆ ಸಜ್ಜಾದರು. ಕೊರೆಯುವ ಚಳಿ, ಇಬ್ಬನಿ ಹನಿ, ತೇವಾಂಶ ಮಿಶ್ರಿತ ಗಾಳಿ ನಡುವೆಯೂ ಯೋಗಪಟುಗಳು ಉತ್ಸಾಹದಿಂದ ಯೋಗ ಪ್ರದರ್ಶನದ ಉತ್ಸಾಹದಲ್ಲಿದ್ದರು.

ವಿಶ್ವ ದಾಖಲೆ ಬರೆಯೋಣ: ರೇಸ್‌ಕೋರ್ಸ್ ಮೈದಾನ ದಲ್ಲಿ ಆಯೋಜಿಸಿದ್ದ ಯೋಗಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಈಗಾಗಲೇ ಯೋಗ ಹಬ್ ಎಂದು ಹೆಸರು ಪಡೆದಿರುವ ಮೈಸೂರಿನಲ್ಲಿ 1.5 ಲಕ್ಷ ಯೋಗ ಪಟುಗಳನ್ನು ಸೇರಿಸಿ ಯೋಗ ಪ್ರದರ್ಶನ ಆಯೋಜಿಸಿ ವಿಶ್ವ ದಾಖಲೆ ನಿರ್ಮಾಣ ಮಾಡಲು ಪಣ ತೊಡಬೇಕು. ಈಗಾಗಲೇ ಬಾಬಾ ರಾಮದೇವ್ ನೇತೃತ್ವದಲ್ಲಿ ಹರಿದ್ವಾರದಲ್ಲಿ 1 ಲಕ್ಷ ಯೋಗಪಟುಗಳು ಯೋಗ ಮಾಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಮೈಸೂರಿನ ಯೋಗಪಟುಗಳು 2023ರ ಜೂನ್ 21ರ ವಿಶ್ವ ಯೋಗ ದಿನದಂದು ಬಾಬಾ ರಾಮದೇವ್ ಅವರನ್ನು ಮೈಸೂರಿಗೆ ಆಹ್ವಾನಿಸಿ 1.5 ಲಕ್ಷ ಜನರನ್ನು ಸೇರಿಸಿ ವಿಶ್ವದಾಖಲೆ ಬರೆಯೋಣ. 2022ರ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನಗರದಲ್ಲಿ 35 ಸಾವಿರ ಜನರೊಂದಿಗೆ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಎಂದರು.

ದಟ್ಟ ಮಂಜಿನ ನಡುವೆಯೂ ಉತ್ಸಾಹದಿಂದ ಯೋಗಪಟುಗಳು ಪಾಲ್ಗೊಂಡಿರುವುದು ನಮಗೆ ಪ್ರೇರಣಾದಾಯಕ ಎನಿಸಿದೆ. ಸೂರ್ಯ ಉತ್ತರ ದಿಕ್ಕಿನಿಂದ ದಕ್ಷಿಣದ ಕಡೆಗೆ ಸಂಚರಿಸುವ ಮಕರ ಸಂಕ್ರಾಂತಿಯ ಈ ದಿನ ಬಹಳ ಪ್ರಶಸ್ತವಾದ ದಿನ. ಇಂತಹ ಸುದಿನದಲ್ಲಿ ನಾವೆಲ್ಲರು ಸೇರಿ ಯೋಗ ಮಾಡುತ್ತಿರುವುದು ನಮ್ಮ ಸುಯೋಗ. ವಿಶಿಷ್ಟ ಘಟನೆಗಳು ಜರುಗಿದ ದಿನವೂ ಆಗಿದೆ. ಕುರುಕ್ಷೇತ್ರ ಯುದ್ಧದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಾಚಾರ್ಯರು ಇಚ್ಛಾಮರಣ ಹೊಂದಿದ ದಿನ ಹಾಗೂ ಭಗೀರಥ ಮುನಿಗಳು ಗಂಗೆಯನ್ನು ಭೂಲೋಕಕ್ಕೆ ತಂದ ದಿನ ಎಂದು ಹೇಳಿದರು.

ಇದೇ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಇಬ್ಬನಿ ಸುರಿಯುತ್ತಿರುವ ಪ್ರತಿಕೂಲ ಹವಾಮಾನದ ನಡುವೆ ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಪಟುಗಳು ಆಗಮಿಸಿರುವುದು ನಿಮ್ಮಲ್ಲಿರುವ ಆಸಕ್ತಿ ತೋರುತ್ತದೆ ಹಿರಿಯರು, ಕಿರಿಯರೆಲ್ಲ ಯೋಗದಲ್ಲಿ ಭಾಗವಹಿಸಿದ್ದಾರೆ. ಯೋಗಥಾನ್ ಈ ಹಿಂದೆಯೇ ಆಗಬೇಕಿತ್ತು ತಡವಾದರೂ ಯಶಸ್ವಿಯಾಗಿದೆ ಪ್ರಧಾನ ಮಂತ್ರಿ ಮೈಸೂರಿನ ಯೋಗ ಕಾರ್ಯಕ್ರಮಕ್ಕೆ ಬಂದು ಹೋದ ನಂತರ ಪ್ರವಾಸೋದ್ಯಮ ಸಾಕಷ್ಟು ಉತ್ತೇಜನಕಾರಿಯಾಗಿದೆ. ಯೋಗ ನಮ್ಮನ್ನು ಬಹಳಷ್ಟು ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಯೋಗ ಪಟುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಉಪ ಮೇಯರ್ ಡಾ.ಜಿ. ರೂಪಾ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಲೋಕನಾಥ್, ಮೈಸೂರು ಯೋಗ ಫೆಡರೇಷನ್ ಅಧ್ಯಕ್ಷ ಯೋಗೀಶ್, ಯೋಗಗುರು ಶ್ರೀಹರಿ ಹಾಗೂ ಇತರರು ಪಾಲ್ಗೊಂಡಿದ್ದರು.

ಅನಾರೋಗ್ಯಕ್ಕೀಡಾದ ಯುವತಿಯರು

ಭಾರೀ ಪ್ರಮಾಣದಲ್ಲಿ ಇಬ್ಬನಿ ಬಿದ್ದಿದ್ದರಿಂದ ರೇಸ್‌ಕೋರ್ಸ್ ಮೈದಾನವೆಲ್ಲಾ ತೇವಗೊಂಡಿತ್ತು ಯೋಗಪಟುಗಳು ಹಾಸಿದ ಯೋಗ ಮ್ಯಾಟ್‌ಗಳೂ ತೇವಗೊಂಡವು. ಆ ನಂತರವೂ ಸುರಿಯುತ್ತಿದ್ದ ಇಬ್ಬನಿ, ಬೀಸುತ್ತಿದ್ದ ಗಾಳಿ ಯೋಗಪಟುಗಳನ್ನು ಮತ್ತಷ್ಟು ಸಂಕಷ್ಟಕ್ಕೀಡಾಗಿಸಿತು. ಇದರಿಂದ ಕಿರಿಯ ಯೋಗಪಟುಗಳು ಹಾಗೂ ಕೆಲವು ಯುವತಿಯರು ನಿತ್ರಾಣಗೊಂಡರು. ಸತತ 2–3 ಗಂಟೆ ಇಬ್ಬನಿಯಲ್ಲೇ ನಿಂತಿದ್ದ ಕೆಲ ಯುವತಿಯರು ಕುಸಿದು ಬಿದ್ದರು. ಆರೋಗ್ಯದಲ್ಲಿ ಏರುಪೇರಾಗಿದ್ದನ್ನು ಗಮನಿಸಿದ ಸಹಪಾಠಿಗಳು ಉಪಚರಿಸಿದರು. ಕೆಲವರು ಯೋಗ ಮಾಡದೇ ಹೊರನಡೆದರು. ಮತ್ತೆ ಕೆಲವರಿಗೆ ಸ್ಥಳದಲ್ಲೇ ವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡಿದರು.

ಗಿನ್ನಿಸ್ ದಾಖಲೆ ಸೇರಿದ ಕರ್ನಾಟಕದ ಯೋಗಥಾನ್–2023

ಬೆಂಗಳೂರು: ರಾಷ್ಟ್ರೀಯ ಯುವ ದಿನದ ಅಂಗವಾಗಿ ರಾಜ್ಯಾದ್ಯಂತ ನಡೆದ ಯೋಗಥಾನ್ ಗಿನ್ನಿಸ್ ದಾಖಲೆ ಸೇರುವಲ್ಲಿ ಯಶಸ್ವಿಯಾಗಿದೆ. ಯೋಗಥಾನ್ 2023 ಕರ್ನಾಟಕದ ಹೆಸರಿನಲ್ಲಿ ಗಿನ್ನಿಸ್ ದಾಖಲೆ ಸೇರಿದ್ದು, ಧಾರವಾಡ ಸೇರಿದಂತೆ ರಾಜ್ಯಾದ್ಯಂತ ಏಕಕಾಲಕ್ಕೆ 4,05,255ಕ್ಕೂ ಮಂದಿ ಸೇರಿ ಯೋಗ ಮಾಡಿರುವುದು ಈ ಹಿಂದೆ ರಾಜಸ್ಥಾನದ ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದಿದೆ.

2018 ರಲ್ಲಿ ರಾಜಸ್ಥಾನದಲ್ಲಿ ಏಕಕಾಲಕ್ಕೆ 1.60 ಲಕ್ಷ ಜನರು ಯೋಗ ಮಾಡಿದ್ದು ದಾಖಲೆಯಾಗಿತ್ತು. ಇಂದು ಬೆಳಗ್ಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಅವರು ಯೋಗಥಾನ್ ಉದ್ಘಾಟಿಸಿದ್ದರು. ಈ ಕಾರ್ಯಕ್ರಮ ಯಶಸ್ವಿಗೊಳಿಸಿದ ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು, ಸ್ವಯಂ ಸೇವಕರು, ಸರ್ಕಾರಿ ನೌಕರರು, ಅಧಿಕಾರಿಗಳು, ಯೋಗಪಟುಗಳು ಸೇರಿದಂತೆ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದು ಸಚಿವ ಡಾ.ನಾರಾಯಣಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಗೃಹಲಕ್ಷ್ಮಿ

ಘೋಷಣೆ ಮಾಡಿದ್ದ ಕಾಂಗ್ರೆಸ್ ಇದೀಗ ಮಹಿಳೆಯರಿಗೆ ಆರ್ಥಿಕ ನೆರವು ಕಲ್ಪಿಸುವ ಭರವಸೆ ನೀಡಿದೆ. ಅರಮನೆ ಆವರಣದಲ್ಲಿ ನಡೆದ 'ನಾ ನಾಯಕಿ' ಸಮಾ ವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಿಯಾಂಕಾ, ಕರ್ನಾಟಕದ ಬಿಜೆಪಿ ಸರ್ಕಾರದಲ್ಲಿನ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟು, ನಮ್ಮ ಸರ್ಕಾರ ಬಂದರೆ ಮಹಿಳೆಯರ ಏಳ್ಗೆಗೆ ಮೊದಲ ಆದ್ಯತೆ ನೀಡುವುದಾಗಿ ತಿಳಿಸಿದರು. 'ಗೃಹ ಲಕ್ಷ್ಮಿ' ಯೋಜನೆಯಡಿ ಪ್ರತಿ ತಿಂಗಳು ಮಹಿಳೆಯರಿಗೆ ಎರಡು ಸಾವಿರದಂತೆ ವರ್ಷಕ್ಕೆ 24 ಸಾವಿರ ಆರ್ಥಿಕ ನೆರವು ದೊರೆಯಲಿದೆ. ಇದು ರಾಜ್ಯದ 1.5 ಕೋಟಿ ಗೃಹಿಣಿಯರಿಗೆ ನೆರವಾಗಲಿದೆ ಎಂದರು. ನಿಮ್ಮ ಜೀವನದಲ್ಲಿ ಬದಲಾವಣೆ ತರುವ ಸಮಯ ಒದಗಿ ಬಂದಿದೆ. ನಿಮಗೆ ಶಿಕ್ಷಣ, ಉದ್ಯೋಗ, ಮಕ್ಕಳಿಗೆ ಭವ್ಯ ಭವಿಷ್ಯ ನಿರ್ಮಾಣ ಮಾಡಬೇಕಲ್ಲವೆ, ಇವೆಲ್ಲವನ್ನೂ ನಿಮಗೆ ಈ ಸರ್ಕಾರ ಕಲ್ಪಿಸುವಲ್ಲಿ ವಿಫಲವಾಗಿದೆ.

ಗೃಹಿಣಿಯರ ಸಾಮರ್ಥ್ಯದ ಅರಿವು ಇವರಿಗಿಲ್ಲ. ನಿಮ್ಮ ಧೈರ್ಯ ಮತ್ತು ಶಕ್ತಿ ಅರಿಯಲು ಕಾಂಗ್ರೆಸ್‌ಗೆ ಮತ ನೀಡಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ನಿಮ್ಮ ಏಳ್ಗೆಗಾಗಿ ದುಡಿಯುವುದಾಗಿ ತಿಳಿಸಿದರು. ಮುಂದಿನ ಕೆಲ ದಿನಗಳಲ್ಲಿ ಚುನಾವಣೆ ಬರುತ್ತಿದೆ. ನೀವು ಕಳೆದ ಕೆಲ ವರ್ಷಗಳ ಆಡಳಿತ ನೋಡಿ, ಯಾರು ಉತ್ತಮರು ಎಂದು ನೀವೇ ತುಲನೆ ಮಾಡಿ. ಯಾರು ನಿಮಗೆ ಅಗತ್ಯ ನೆರವು ನೀಡಿದ್ದಾರೆ ಎಂಬುದನ್ನು ತೀರ್ಮಾನಿಸಿ. ಕರ್ನಾಟಕದಲ್ಲಿ ಮಹಿಳೆಯರ ಪರಿಸ್ಥಿತಿ ನಿಜಕ್ಕೂ ನಾಚಿಕೆಗೇಡಿನ ವಿಚಾರ. ನಿಮ್ಮ ಸಚಿವರು, ಉದ್ಯೋಗ ನೀಡಲು ಶೇಕಡ 40 ರಷ್ಟು ಲಂಚ ಪಡೆಯುತ್ತಿದ್ದಾರೆ ಎಂದು ಕೇಳಿದೆ. 1.50 ಲಕ್ಷ ಕೋಟಿ ನಿಮ್ಮ ಹಣವನ್ನು ಭ್ರಷ್ಟಾಚಾರದ ಮೂಲಕ ಈ ಸರ್ಕಾರ ಲೂಟಿ ಮಾಡಿದೆ. ಬೆಂಗಳೂರಿನಲ್ಲಿ 8 ಸಾವಿರ ಕೋಟಿ ಬಜೆಟ್ ಇದ್ದರೆ, ಅದರಲ್ಲಿ 3200 ಕೋಟಿ ಇವರ ಜೇಬಿಗೆ ಹೋಗುತ್ತದೆ.

ಪಿ.ಎಸ್‌ಐ. ಹಗರಣದಂತೆ ಹಲವು ನೇಮಕಾತಿ ಅಕ್ರಮಗಳಿವೆ. ಪಿಎಸ್‌ಐ ಹುದ್ದೆ ಮಾರಿಕೊಂಡಿದ್ದಾರೆ. ನೀವು ನಿಮ್ಮ ಮಕ್ಕಳು ಉತ್ತಮ ಕೆಲಸ ಪಡೆಯಲಿ ಎಂದು ಶಿಕ್ಷಣ ಕೊಟ್ಟು ಬೆಳೆಸುತ್ತೀರಾ. ಈ ರೀತಿ ಹಗರಣವಾದರೆ, ನೀವು ಪ್ರತಿಯೊಂದಕ್ಕೂ ಲಂಚ ಕೊಡಬೇಕಾಗುತ್ತದೆ. ಈ ಸರ್ಕಾರದಲ್ಲಿ ಚಾಲನಾ ಪರವಾನಗಿ, ಪಡಿತರ ಪಡೆಯಲು ಸಹ ಲಂಚ ನೀಡಬೇಕು. ಕೋವಿಡ್ ಸಮಯದಲ್ಲಿ ಮಹಿಳೆಯರಿಗೆ ಯಾವುದೇ ನೆರವು ನೀಡಲಿಲ್ಲ. ರಾಜ್ಯದಲ್ಲಿ 2.50 ಲಕ್ಷ ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಿಲ್ಲ ಎಂದರು.ಕಾಂಗ್ರೆಸ್ ಅವಧಿಯಲ್ಲಿ ಅಡುಗೆ ಅನಿಲ ಸಿಲಿಂಡರ್ ಎಷ್ಟಕ್ಕೆ ಪಡೆಯುತ್ತಿದ್ದೀರಿ. ಈಗ ಅದು ಎಷ್ಟಾಗಿದೆ ಎಂದು ನಿಮಗೆ ಗೊತ್ತಿದೆ. ಜೀವನ ಸಾಗಿಸುವುದು ದುಬಾರಿಯಾಗಿದ್ದು, ಅತ್ಯಂತ ಕಷ್ಟವಾಗಿದೆ. ಮಕ್ಕಳ ಶುಲ್ಕವಾಗಲಿ, ಮದುವೆ ಸಮಾರಂಭವಾಗಲಿ ಎಲ್ಲವೂ ಆರ್ಥಿಕ ಹೊರೆಯಾಗಿವೆ.

ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುತ್ತಿದ್ದಾರೆ. ಕೃಷಿಗೆ ಆರ್ಥಿಕ ನೆರವು ನೀಡದೇ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಸರ್ಕಾರದ ಜಿಎಸ್‌ಟಿ, ನೋಟು ರದ್ದತಿಗಳಂತಹ ಕೆಟ್ಟ ನಿರ್ಧಾರಗಳಿಂದ ನರಳುವಂತಾಗಿವೆ. ನೀವು ಬಲಿಷ್ಠ ಕರ್ನಾಟಕದ ಮೇಲೆ ನಂಬಿಕೆ ಇಟ್ಟಿದ್ದೀರಿ ಅಲ್ಲವೇ, ಇದಕ್ಕಾಗಿ ನೀವು ಬದಲಾವಣೆ ತರುತ್ತೀರಾ ಅಲ್ಲವೇ, ಇದು ನಿಮ್ಮ ಕೈಯಲ್ಲಿದೆ. ನಿಮ್ಮ ಸಮಾಜ, ರಾಜ್ಯದ ಬದಲಾವಣೆ ತರುವ ಶಕ್ತಿ ನಿಮ್ಮಲ್ಲಿದೆ. ಮುಂದಿನ ದಿನಗಳಲ್ಲಿ ಚುನಾವಣೆಗಾಗಿ ನಿಮ್ಮ ನಾಯಕರು ನಿಮ್ಮ ಬಳಿಗೆ ಬಂದಾಗ ನಿಮ್ಮ ಜೀವನದಲ್ಲಿ ಬದಲಾವಣೆಯನ್ನು ಕೇಳುವುದಾಗಿ ನನಗೆ ಮಾತು ಕೊಡಿ ಎಂದರು.

ಬಜೆಟ್‌ನಲ್ಲಿ ಸೇರಿಸಲು ಬಿಜೆಪಿ ಹುನ್ನಾರ

ಅವರು ಪಾಲ್ಗೊಂಡು ಕೆಲವು ಯೋಜನೆಗಳನ್ನು ಪ್ರಕಟಿಸುತ್ತಿದ್ದಾರೆ ಎನ್ನುತ್ತಿದ್ದಂತೆ ಬಿಜೆಪಿ ಸರ್ಕಾರ ದೊಡ್ಡ ಜಾಹೀರಾತನ್ನು ನೀಡಿ ತಾವು ಮುಂದೆ ಮಂಡಿಸುವ ಬಜೆಟ್‌ನಲ್ಲಿ ಮಹಿಳಾ ಪರವಾದ ಕಾರ್ಯಕ್ರಮಗಳನ್ನು ನೀಡುತ್ತೇವೆ ಎಂದು ಹೇಳಿದ್ದಾರೆ.

ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದು ಮೂರೂವರೆ ವರ್ಷಗಳಾಯಿತು, ಆದರೆ ಇಂದಿನವರೆಗೆ ಮಹಿಳೆಯರಿಗಾಗಿ ಒಂದೇ ಒಂದು ಕಾರ್ಯಕ್ರಮ ರೂಪಿಸಿ ಜಾರಿ ಮಾಡಿಲ್ಲ. 2018ರ ಚುನಾವಣೆ ವೇಳೆಗೆ ಮಹಿಳೆಯರಿಗಾಗಿ 21 ಭರವಸೆಗಳನ್ನು ನೀಡಿದ್ದರು ಅದನ್ನು ಕೂಡ ಈಡೇರಿಸಿಲ್ಲ. ಈವರೆಗೆ ಮಲಗಿದ್ದ ರಾಜ್ಯ ಸರ್ಕಾರ ನಾವು ರಾಜ್ಯದ ಪ್ರತಿ ಮನೆಗೆ ಉಚಿತವಾಗಿ 200 ಯುನಿಟ್ ನೀಡುತ್ತೇವೆ ಎಂದು ಘೋಷಿಸಿದ ಮೇಲೆ ಮಹಿಳೆಯರಿಗೆ ಪುಂಖಾನುಪುಂಖವಾಗಿ ಭರವಸೆಗಳನ್ನು ನೀಡಲು ಆರಂಭ ಮಾಡಿದೆ. ಬಿಜೆಪಿ 2018ರ ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ 600 ಭರವಸೆಗಳನ್ನು ನೀಡಿತ್ತು, ಅದರಲ್ಲಿ ಶೇ.10 ಅನ್ನು ಕೂಡ ಈಡೇರಿಸಿಲ್ಲ. ಬಿಜೆಪಿಯಂಥಾ ವಚನಭ್ರಷ್ಟ ಸರ್ಕಾರ ಯಾವುದೂ ಇಲ್ಲ. ಬಿಜೆಪಿ ಸಂವಿಧಾನ ಜಾರಿಯಾಗುವ ಮೊದಲಿನಿಂದಲೂ ಮಹಿಳೆಯರ ಪರವಾಗಿ ಇಲ್ಲ. ಇದೇ ಜನ ಮನುಸ್ಮೃತಿಯ ಮೂಲಕ ಮಹಿಳೆಯರನ್ನು ದಮನ ಮಾಡಿದ್ದರು. ಬಾಬಾ ಸಾಹೇಬರು ಸಂವಿಧಾನ ರಚಿಸಿದ ಕಾರಣಕ್ಕೆ ಇಂದು ಈ ದೇಶದ ಮಹಿಳೆಯರಿಗೆ ಎಲ್ಲಾ ಹಕ್ಕುಗಳು ಸಿಗುತ್ತಿವೆ.

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು "ಈ ದೇಶದ ಅಭಿವೃದ್ಧಿ ಆಗಬೇಕಾದರೆ ದೇಶದ ಅರ್ಧದಷ್ಟಿರುವ ಮಹಿಳಾ ಸಮುದಾಯ ಅಭಿವೃದ್ಧಿಯಾಗಬೇಕು" ಎಂದು ಹೇಳಿದ್ದರು. ನೆಹರು ಅವರ ಆಡಳಿತದಲ್ಲಿ ಬಾಲ್ಯ ವಿವಾಹ, ಸತಿ ಪದ್ಧತಿಗಳಂಥ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಹಿಂದೂ ವಿವಾಹ ಕಾಯ್ದೆ ಜಾರಿಗೆ ತಂದರು. ಹಿಂದೂ ಉತ್ತರಾಧಿಕಾರಿ ಕಾಯ್ದೆ, 1950ರಲ್ಲಿ ದತ್ತು ಸ್ವೀಕರಿಸುವ ಕಾಯ್ದೆ, 1961ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು. ಇದನ್ನು ಮಾಡಿದ್ದು ಕಾಂಗ್ರೆಸ್ ಪಕ್ಷ. 1951ರ ಜನಗಣತಿ ಪ್ರಕಾರ ದೇಶದ ಮಹಿಳಾ ಸಾಕ್ಷರತೆ ಪ್ರಮಾಣ 8.86% ಇದ್ದದ್ದು 2011ರ ಜನಗಣತಿಯ ಪ್ರಕಾರ 65.45% ಗೆ ಹೆಚ್ಚಳವಾಗಲು ಕಾಂಗ್ರೆಸ್ ಸರ್ಕಾರ ಕಾರಣ. ನಾವು ಅಧಿಕಾರದಲ್ಲಿದ್ದಾಗ ಮಹಿಳೆಯರಿಗೆ ಉದ್ಯೋಗದಲ್ಲಿ ಸಿಗುತ್ತಿದ್ದ 30% ಮೀಸಲಾತಿ ಪ್ರಮಾಣವನ್ನು 33%ಕ್ಕೆ ಹೆಚ್ಚಿಸಿದ್ದೇವೆ. ರಾಜೀವ್‌ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಸಂವಿಧಾನ ತಿದ್ದುಪಡಿ ಮಾಡಿ ಮಹಿಳೆಯರಿಗೆ, ಹಿಂದುಳಿದವರಿಗೆ ಮೀಸಲಾತಿ ನೀಡಿದ್ದು ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸಿದ್ದಾರೆ. ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮೀಸಲಾತಿ ಸಿಗಬೇಕು. ಮಹಿಳೆಯರಿಗೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ 33% ಮೀಸಲಾತಿ ನೀಡಬೇಕು ಎಂಬ ಬಿಲ್ ಅನ್ನು 1995ರಲ್ಲಿ ಲೋಕಸಭೆ ಮುಂದೆ ತರಲಾಗಿದೆ. ಈ ಬಿಲ್ ಇನ್ನು ಹಾಗೆ ಇದೆ. ಒಂದು ವೇಳೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ಮೀಸಲಾತಿ ನೀಡುವ ಈ ಬಿಲ್ ಅನ್ನು ಪಾಸ್ ಮಾಡಿ ಜಾರಿ ಮಾಡುವ ಕೆಲಸ ಮಾಡಬೇಕು ಎಂಬ ನಿರ್ಣಯವನ್ನು ಇಂದಿನ ಸಭೆಯಲ್ಲಿ ಕೈಗೊಳ್ಳಬೇಕು. ಇದು ನನ್ನ ಒತ್ತಾಯ ಎಂದರು.

ಎಲೆಕ್ಟ್ರಿಕ್ ಬಸ್ ಸೇವೆ ಆರಂಭ

ಬಸ್ ಡಿಪೋ ಆವರಣದಲ್ಲಿರುವ ವರ್ಕ್‌ಶಾಪ್‌ನಲ್ಲಿ 45 ನಿಮಿಷಗಳ ಕಾಲ ಚಾರ್ಜ್ ಮಾಡಿಕೊಂಡು ಮತ್ತೆ ಸಬರ್ಬನ್ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಮಧ್ಯಾಹ್ನ 12.15 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿತು. ಶೇ. 80 ರಷ್ಟು ಬ್ಯಾಟರಿ ಚಾರ್ಜ್ ಮಾಡಿದರೆ 330 ಕಿ.ಮೀ. ಸಂಚರಿಸಲಿರುವ ಬಸ್‌ನಲ್ಲಿ ಶೇ.20ರಷ್ಟು ಚಾರ್ಜ್ ಮೀಸಲಿರಿಸಲಾಗುವುದು. ಹೈದರಾಬಾದ್ ಮೂಲದ ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಪ್ರೊಟೋಟೈಪ್ ಮಾದರಿಯ ಇ-ಬಸ್ ಅನ್ನು ತಯಾರಿಸಿದೆ. ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ ಮೈಸೂರು-ಬೆಂಗಳೂರು ನಡುವೆ ಎಲೆಕ್ಟ್ರಿಕ್ ಬಸ್ ಸೇವೆಯನ್ನು ಒದಗಿಸಲಾಗುವುದು ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ.

ಅದೇ ರೀತಿ ಬೆಂಗಳೂರಿನಿಂದ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ವಿರಾಜಪೇಟೆ, ಮಡಿಕೇರಿಗಳಂತಹ ಸಣ್ಣ ನಗರಗಳಿಗೂ ವಿದ್ಯುತ್ ಚಾಲಿತ ಬಸ್ಸುಗಳನ್ನು ಒದಗಿಸಲಾಗುವುದು. ಬೆಂಗಳೂರು-ಮೈಸೂರು ನಡುವೆ ದಶಪಥ ರಸ್ತೆ ನಿರ್ಮಾಣವಾಗಿರುವುದರಿಂದ ಯಾವುದೇ ಅಡೆತಡೆಗಳಿಲ್ಲದೆ ಅತೀ ಕಡಿಮೆ ಅವಧಿಯಲ್ಲಿ ತಲುಪಲಿದೆ ಎಂದು ಸಾರಿಗೆ ಸಂಸ್ಥೆ ಅಧಿಕಾರಿಗಳು ತಿಳಿಸಿದ್ದಾರೆ. ಸಾರಿಗೆ ಸಂಸ್ಥೆಯು ಕಿ.ಮೀ.ಗೆ ಇಂತಿಷ್ಟು ದರ ನಿಗದಿ ಮಾಡಿ ಈ ಬಸ್ ಅನ್ನು ಪಡೆದಿದೆ. ಸಂಸ್ಥೆಯೇ ಚಾಲಕನನ್ನು ಒದಗಿಸಲಿದ್ದು, ಸಾರಿಗೆ ಸಂಸ್ಥೆಯು ಕಂಡಕ್ಟರ್ ಮಾತ್ರ ನಿಯೋಜಿಸಲಿದೆ. ಒಲೆಕ್ಟ್ರಾ ಕಂಪನಿಯೇ ಅಗತ್ಯವಿರುವೆಡೆ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಿ ವಿದ್ಯುತ್ ಬಿಲ್ ಪಾವತಿಸಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ದೇಶದ ಬದಲಾವಣೆ ಸಾಧ್ಯ

ಮಹಿಳೆಯರು ಹಾಗೂ ಯುವ ಸಮುದಾಯಕ್ಕೆ ಶಕ್ತಿ ತುಂಬಿದರೆ ದೇಶದಲ್ಲಿ ಬದಲಾವಣೆ ಖಂಡಿತವಾಗಿ ಆಗುತ್ತದೆ. ಇಂತಹ ಸತ್ಕಾರ್ಯ ಈ ಭೂಮಿಯಿಂದಲೇ ಆಗಲಿ. ಪುರುಷರ ಬೆಲ್ಲೆಲುಬಾಗಿರುವ ಮಹಿಳೆಯರಿಗೆ ಪೂರ್ಣ ಪ್ರಮಾಣದ ಸಾಮರ್ಥ್ಯ ಬೆಳೆಸಿಕೊಳ್ಳಲು ಮೊದಲು ಅನುವು ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಬೆಲೆ ಏರಿಕೆಯಿಂದ ನೊಂದಿರುವ ಮಹಿಳೆಯರಿಗೆ ನೆರವಾಗಲು ರಾಜ್ಯದ ಪ್ರತಿ ಮನೆಯ ಓರ್ವ ಗೃಹಿಣಿಗೆ ಮಾಸಿಕ 2 ಸಾವಿರ ರೂ. ಸಹಾಯ ಧನ ನೀಡಲು ನಿರ್ಧರಿಸಲಾಗಿದೆ ಎಂದರು. ರಾಜೀವ್ ಗಾಂಧಿ ಅವರು ಇದೇ ಸ್ಥಳದಿಂದ ದೇಶದ ನಾಯಕತ್ವ ವಹಿಸಿದ್ದರು. ಅವರ ಪುತ್ರಿ ಪ್ರಿಯಾಂಕಾ ಗಾಂಧಿ ಅವರು 'ನಾ ನಾಯಕಿ' ಕಾರ್ಯಕ್ರಮದ ಮೂಲಕ ರಾಜಕೀಯವಾಗಿ ಕರ್ನಾಟಕಕ್ಕೆ ಮೊದಲ ಬಾರಿಗೆ ಆಗಮಿಸಿದ್ದು, ಅವರಿಗೆ ಹೃತ್ಪೂರ್ವಕ ಸ್ವಾಗತ. ದೇಶದ ಮಹಿಳೆಯರಿಗೆ ಶಕ್ತಿ ತುಂಬಲು, ಅವರ ಧ್ವನಿಯಾಗಲು ಶ್ರೀಮತಿ ಪ್ರಿಯಾಂಕಾ ಗಾಂಧಿ ಅವರು ಇಲ್ಲಿಗೆ ಬಂದಿದ್ದಾರೆ. ಇವರು ನವ ಭಾರತದ ನಿರ್ಮಾತೃ ನೆಹರೂ ಅವರ ಮುಮ್ಮೊಗಳು ಹಾಗೂ ದೇಶದ ಉಕ್ಕಿನ ಮಹಿಳೆ ಇಂದಿರಾ ಗಾಂಧಿ ಅವರ ಮೊಮ್ಮಗಳು ಮಾತ್ರವಲ್ಲ, ದೇಶದ ಹಿತಕ್ಕಾಗಿ ಎರಡು ಬಾರಿ ಪ್ರಧಾನಮಂತ್ರಿ ಹುದ್ದೆ ತ್ಯಾಗ ಮಾಡಿದ ಸೋನಿಯಾ ಗಾಂಧಿ ಅವರ ಪುತ್ರಿಯೂ ಹೌದು. ನಾವೆಲ್ಲರೂ ಸೇರಿ ಅವರನ್ನು ಹೃದಯಪೂರ್ವಕವಾಗಿ ಅಭಿನಂದಿಸೋಣ ಎಂದು ಹೇಳಿದರು. ಕಾಂಗ್ರೆಸ್ ಒಂದು ವಿಶೇಷವಾದ ಸಂಸ್ಥೆ. ಆರಂಭದಿಂದಲೂ ನಮ್ಮ ಜನರ ಮೂಲಭೂತ ಸಮಸ್ಯೆ ಗುರುತಿಸಿ, ಅವರಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕಾಗಿ ಜಾತ್ಯಾತೀತತೆ, ಪ್ರಜಾಪ್ರಭುತ್ವದ ಕಡೆ ನಿಂತಿದೆ ಎಂಬ ಇಂದಿರಾ ಗಾಂಧಿ ಅವರ ಮಾತನ್ನು ಸೋನಿಯಾ ಗಾಂಧಿ ಒಂದು ಪುಸ್ತಕದಲ್ಲಿ ಉಲ್ಲೇಖಿಸಿದ್ದು, ಅದು ನಮಗೆಲ್ಲಾ ಮಾರ್ಗದರ್ಶಿ ಎಂದರು.

ಮೈಸೂರು ಮೃಗಾಲಯಕ್ಕೆ 9 ತಿಂಗಳಲ್ಲಿ 25 ಲಕ್ಷಕ್ಕೂ ಅಧಿಕ ಮಂದಿ ಭೇಟಿ: 24.76 ಕೋಟಿ ಆದಾಯ

● ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮಾಹಿತಿ ● ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಕಡಿಮೆ ಪ್ರವಾಸಿಗರು ಭೇಟಿ ನೀಡಿದ್ದರೂ ಆದಾಯದಲ್ಲಿ ಹೆಚ್ಚಳ ● ರಾಜ್ಯದ 9 ಪ್ರಾಣಿ-ಪಕ್ಷಿ ಸಂಗ್ರಹಾಲಯಗಳ ಆದಾಯದಲ್ಲಿ ಗಣನೀಯ ಏರಿಕೆ



ಮೈಸೂರುಜ.16(ಎಂಟಿವೈ)- ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿರುವ 9 ಮೃಗಾಲಯಗಳಿಗೆ 2022ರ ಏ.1ರಿಂದ ಡಿ.31ರವರೆಗೆ (9 ತಿಂಗಳಲ್ಲಿ) 52,77,013 ಪ್ರವಾಸಿಗರು ಭೇಟಿ ನೀಡಿದ್ದು, 75.72 ಕೋಟಿ ರೂ. ಆದಾಯ ಸಂಗ್ರಹವಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮೃಗಾಲಯದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ನಂತರ ಮೃಗಾಲಯಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರಿಂದ ಮೃಗಾಲಯಗಳ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದೆ. ರಾಜ್ಯದ 9 ಮೃಗಾಲಯಗಳಲ್ಲಿ ಮೈಸೂರಿನ ಚಾಮರಾಜೇಂದ್ರ ಮೃಗಾಲಯಕ್ಕೆ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡಿದ್ದಾರೆ. 9 ತಿಂಗಳಲ್ಲಿ 25,05,514 ಮಂದಿ ಭೇಟಿ ನೀಡಿದ್ದಾರೆ. ಇದರಿಂದ 24,76,91,747 ರೂ. ಆದಾಯ ಸಂಗ್ರಹವಾಗಿದೆ. ಬನ್ನೇರುಘಟ್ಟಕ್ಕೆ 16.12 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು, ಇದರಿಂದ 42.68 ಕೋಟಿ ಆದಾಯ ಸಂಗ್ರಹವಾಗಿದೆ. ಪ್ರವಾಸಿಗರ ಭೇಟಿಯಲ್ಲಿ ಮೈಸೂರು ಮೃಗಾಲಯ ನಂ.1 ಸ್ಥಾನದಲ್ಲಿದ್ದರೆ, ಆದಾಯದಲ್ಲಿ ಬನ್ನೇರುಘಟ್ಟ ಮೊದಲ ಸ್ಥಾನ ಪಡೆದುಕೊಂಡಿದೆ ಮೈಸೂರು ಮೃಗಾಲಯಕ್ಕೆ ಡಿಸೆಂಬರ್ ತಿಂಗಳಲ್ಲೇ 5.24 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು ವಿಶೇಷ. ಇದು ಇತ್ತೀಚಿನ ವರ್ಷಗಳಲ್ಲಿ ದಾಖಲೆಯಾಗಿದೆ ಎಂದರು.

ಆರ್ಥಿಕವಾಗಿ ಹೊರೆ: ಕೋವಿಡ್-19 ಹಾವಳಿಯಿಂದಾಗಿ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ದೇಶದ ಎಲ್ಲಾ ಮೃಗಾಲಯಗಳನ್ನು ಬಂದ್ ಮಾಡಲಾಗಿತ್ತು. ಪ್ರವಾಸಿಗರ ಭೇಟಿಯಿಂದ ಸೋಂಕು ಹರಡಬಹುದೆಂಬ ಮುನ್ನೆಚ್ಚರಿಕೆಯಾಗಿ ಮೃಗಾಲಯ ಮುಚ್ಚಲಾಗಿತ್ತು. ಲಾಕ್‌ಡೌನ್ ತೆರವಾದ ಬಳಿಕವೂ ಆರಂಭದಲ್ಲಿ ಮೃಗಾಲಯಕ್ಕೆ ಭೇಟಿ ನೀಡುವ ಪ್ರವಾಸಿಗರು ಸಂಖ್ಯೆ ಕಡಿಮೆಯಾಗಿತ್ತು. ಮೈಸೂರು ಹಾಗೂ ಬನ್ನೇರುಘಟ್ಟ ಮೃಗಾಲಯಗಳ ಆಂತರಿಕ ಸಂಪನ್ಮೂಲದಿಂದ ಇತರ ಮೃಗಾಲಯಗಳಿಗೆ (ಕಿರು) ಪ್ರಾಣಿಗಳ ಆಹಾರ, ಮೇವು, ಪಶುವೈದ್ಯಕೀಯ ವೆಚ್ಚ, ಸಿಬ್ಬಂದಿ ನೌಕರರ ವೇತನ ಹಾಗೂ ನಿರ್ವಹಣೆ ವೆಚ್ಚವನ್ನು ಭರಿಸಲಾಗಿತ್ತು. ಇದರಿಂದ ಬಹುತೇಕ ಎಲ್ಲಾ ಮೃಗಾಲಯಗಳಿಗೂ ಆರ್ಥಿಕ ಸಂಕಷ್ಟವುಂಟಾಗಿತ್ತು ಎಂದು ತಿಳಿಸಿದರು.

ರಾಜ್ಯದ ವಿವಿಧೆಡೆ ಇತ್ತೀಚಿನ ದಿನಗಳಲ್ಲಿ ಮಾನವ-ಪ್ರಾಣಿ ಸಂಘರ್ಷದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ರಕ್ಷಿಸಲಾಗುತ್ತಿದೆ. ಇದರಿಂದ ಪ್ರಾಧಿಕಾರದ ಮೇಲೆ ಆರ್ಥಿಕವಾಗಿ ಹೊರೆ ಬೀಳುತ್ತಿದೆ. ಮೈಸೂರು ಮೃಗಾಲಯ, ಬನ್ನೇರುಘಟ್ಟ ಜೈವಿಕ ಉದ್ಯಾನ, ಹುಲಿ, ಸಿಂಹ ಸಫಾರಿ, ಶಿವಮೊಗ್ಗ ಮತ್ತು ಅಟಲ್ ಬಿಹಾರಿ ವಾಜಪೇಯಿ ಮೃಗಾಲಯ ಹಾಗೂ ಗದಗ ಮೃಗಾಲಯದಲ್ಲಿ ರಕ್ಷಿಸಲಾದ ಪ್ರಾಣಿಗಳ ನಿರ್ವಹಣೆ, ಪೋಷಣೆ, ಆಹಾರ, ಮೇವು, ಪಶುವೈದ್ಯಕೀಯ ವೆಚ್ಚ, ಪ್ರಾಣಿ ಪಾಲಕರ ವೇತನಕ್ಕಾಗಿ ಪ್ರತಿ ವರ್ಷ 7ರಿಂದ 8 ಕೋಟಿ ರೂ. ಪ್ರಾಧಿಕಾರದ ಆಂತರಿಕ ಸಂಪನ್ಮೂಲದಿಂದ ಖರ್ಚು ಮಾಡುತ್ತಿದ್ದೇವೆ. ಹೀಗಾಗಿ, ರಕ್ಷಿಸಿದ ಪ್ರಾಣಿಗಳ ಪಾಲನೆ, ಪೋಷಣೆಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವಿವರಿಸಿದರು.

115.31 ಕೋಟಿ ಬಜೆಟ್‌ಗೆ ಅನುಮೋದನೆ: 2022-23ನೇ ಸಾಲಿನಲ್ಲಿ 115.31 ಕೋಟಿ ಬಜೆಟ್‌ಗೆ ಅನುಮೋದನೆ ನೀಡಲಾಗಿದೆ. ಈ ವರ್ಷದ ಮಾರ್ಚ್ ವರೆಗೆ ಮೃಗಾಲಯಗಳ ನಿರ್ವಹಣೆ, ಅಭಿವೃದ್ಧಿ, ಆಡಳಿತಾತ್ಮಕ ವೆಚ್ಚ, ಪ್ರಾಣಿಗಳ ಆಹಾರ ಸೇರಿದಂತೆ ಇನ್ನಿತರ ಕಾರಣಗಳಿಂದ 30 ಕೋಟಿ ಬೇಕಾಗುತ್ತದೆ. ಈ ಮೊತ್ತವನ್ನು ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ದೇಣಿಗೆ ಹಾಗೂ ದತ್ತು ಯೋಜನೆಯಡಿ 2022ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 5,557 ಪ್ರಾಣಿ-ಪಕ್ಷಿಗಳನ್ನು ಸಾರ್ವಜನಿಕರು ದತ್ತು ಪಡೆದಿದ್ದು, ಇದರಿಂದ 1.62 ಕೋಟಿ ಸಂಗ್ರಹವಾಗಿದೆ. ಬೆಳಗಾವಿ ಸೇರಿದಂತೆ ಎಲ್ಲ ಮೃಗಾಲಯಗಳಲ್ಲೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದರು.

ಎಂಟ್ರೆನ್ಸ್ ಪ್ಲಾಜಾ: ವಿಜಯನಗರ ಜಿಲ್ಲೆಯ ಕಮಲಾಪುರದ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯದಲ್ಲಿ ನೂತನವಾಗಿ 9.34 ಕೋಟಿ ವೆಚ್ಚದಲ್ಲಿ ಮೊದಲ ಎಂಟ್ರೆನ್ಸ್ ಪ್ಲಾಜಾ ನಿರ್ಮಿಸಲಾಗುತ್ತಿದೆ. ಮೊದಲನೇ ಹಂತದ ಕಾಮಗಾರಿ ಈ ತಿಂಗಳ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಎಂದು ಹೇಳಿದರು.



ಚಾಮರಾಜೇಂದ್ರ ಮೃಗಾಲಯ ಮತ್ತು ಕೇಂದ್ರ ಮೃಗಾಲಯ ಪ್ರಾಧಿಕಾರದ ಸಹಯೋಗದಲ್ಲಿ ದೇಶದ ಎಲ್ಲ ಮೃಗಾಲಯಗಳ ನಿರ್ದೇಶಕರ ರಾಷ್ಟ್ರೀಯ ಸಮ್ಮೇಳನವನ್ನು ಜ.18 ಹಾಗೂ 19ರಂದು ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ತಿಳಿಸಿದ್ದಾರೆ.

ಮೃಗಾಲಯಗಳ ನಿರ್ದೇಶಕರುಗಳ ರಾಷ್ಟ್ರೀಯ ಸಮ್ಮೇಳನವನ್ನು ಜ.18ರಂದು ಬೆಳಗ್ಗೆ 9ಕ್ಕೆ ಅರಣ್ಯ, ಪರಿಸರ ಮತ್ತು ಜೀವವಿಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಉದ್ಘಾಟಿಸಲಿದ್ದಾರೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥ) ರಾಜ್ ಕಿಶೋರ್ ಸಿಂಗ್ ಮತ್ತು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಡಾ.ಸಂಜಯ್‌ಕುಮಾರ್ ಶುಕ್ಲ ಮತ್ತು ಬಿ.ಪಿ.ರವಿ ಮುಖ್ಯ ಅತಿಥಿಗಳಾಗಿರುವರು, ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋರ್ವರ್ಧನ್ ಹಾಗೂ ಜ್ಯೋತಿ ರೇಚಣ್ಣ ವಿಶೇಷ ಆಹ್ವಾನಿತರಾಗಿರುವರು. ದೇಶದಲ್ಲಿ 62 ಮೃಗಾಲಯಗಳಿದ್ದು, ಎಲ್ಲಾ ನಿರ್ದೇಶಕರಿಗೆ ಆಹ್ವಾನ ನೀಡಲಾಗಿದೆ. ಮೃಗಾಲಯಗಳ ಮಾಸ್ಟರ್ ಪ್ಲಾನ್, ರಾಷ್ಟ್ರೀಯ ಮಟ್ಟದಲ್ಲಿ ಪ್ರಾಣಿಗಳ ನಿರ್ವಹಣೆ ಮತ್ತು ಸಂರಕ್ಷಣೆ ಹಾಗೂ ಸಂತಾನಾಭಿವೃದ್ಧಿ ಸಾಧಿಸುವುದು ಸೇರಿದಂತೆ ಇನ್ನಿತರ ವಿಷಯಗಳನ್ನು ಚರ್ಚಿಸಲಾಗುವುದು. ವಿವಿಧ ಮೃಗಾಲಯಗಳ ಉತ್ತಮ ಅಭ್ಯಾಸಗಳ ವಿನಿಮಯವೂ ಇರಲಿದೆ.

ಮೃಗಾಲಯಗಳ ವರಮಾನ ವಿವರ (2022ರ ಏ.1ರಿಂದ ಡಿ.31ರವರೆಗೆ)

ಹೆಸರು	ಪ್ರವಾಸಿಗರ ಸಂಖ್ಯೆ	ವರಮಾನ
ಮೈಸೂರು	25,05,514	24,76,91,745
ಕಾರಂಜಿಕೆರೆ	2,57,218	1,45,68,300
ಬನ್ನೇರುಘಟ್ಟ	16,12,721	42,68,86,415
ಹಂಪಿ	1,24,100	1,70,75,220
ಚಿತ್ರದುರ್ಗ	1,17,761	34,17,370
ಗದಗ	1,24,696	67,62,532
ಕಲಬುರಗಿ	74,473	13,11,250
ಬೆಳಗಾವಿ	1,82,718	66,20,415
ದಾವಣಗೆರೆ	35,877	7,37,890
ಶಿವಮೊಗ್ಗ	2,41,935	3,22,54,445
ಒಟ್ಟು	52,77,013	75,72,85,582

ಪಾರ್ಕಿಂಗ್‌ಗಾಗಿ ಜಾಗ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ

ಇತ್ತೀಚಿನ ದಿನಗಳಲ್ಲಿ ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗೆಂದು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಿದೆ. ಮೈಸೂರಿಗೆ ಬಂದವರಲ್ಲಿ ಬಹುತೇಕ ಮಂದಿ ಮೃಗಾಲಯಕ್ಕೆ ಭೇಟಿ ನೀಡಲು ಬಯಸುತ್ತಾರೆ. ಆದರೆ, ಇಲ್ಲಿ ವಾಹನಗಳ ನಿಲುಗಡೆಗೆ ಸಮಸ್ಯೆ ಉಂಟಾಗಿದೆ. ಹಾಗಾಗಿ ಮೃಗಾಲಯಕ್ಕೆ ಬರುವ ಪ್ರವಾಸಿಗರ ವಾಹನಗಳ ನಿಲುಗಡೆಗಾಗಿ ರೇಸ್ ಕೋರ್ಸ್ ಆವರಣದಲ್ಲಿ ಸ್ಥಳಾವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.

- ಎಂ.ಶಿವಕುಮಾರ್, ಅಧ್ಯಕ್ಷ, ಕರ್ನಾಟಕ ಮೃಗಾಲಯ ಪ್ರಾಧಿಕಾರ

ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಮಾತನಾಡಿ, ಮೈಸೂರು ಮೃಗಾಲಯದ ಮಾಸ್ಟರ್ ಪ್ಲಾನ್‌ನಂತೆ ಮಾಹಿತಿ ಕೇಂದ್ರ ಸ್ಥಾಪನೆಗೆ ಕ್ರಮ ವಹಿಸಲಾಗಿದೆ. ಪ್ರಾಣಿ ಸಂಗ್ರಹಣಾ ಮಿತಿಯನ್ನು ಅನುಸರಿಸುವುದು ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಮೈಸೂರಿನ ಜಿಂಕೆಗಳನ್ನು ಅರಣ್ಯ ಇಲಾಖೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ ಎಂದರು.

ಪ್ರಾಧಿಕಾರದ ಸದಸ್ಯರಾದ ಜ್ಯೋತಿ ರೇಚಣ್ಣ ಹಾಗೂ ಗೋಕುಲ್, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಉಪಸ್ಥಿತರಿದ್ದರು.

ಜ.29ಕ್ಕೆ ನಂಜನಗೂಡಿಗೆ ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ

ಪೂರ್ವಭಾವಿ ಸಭೆಯಲ್ಲಿ ಸಂಸದ ಶ್ರೀನಿವಾಸ್ ಪ್ರಸಾದ್ ಹೇಳಿಕೆ



ಮೈಸೂರು, ಜ.16- ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ವತಿಯಿಂದ ಆಯೋಜಿಸಿರುವ ವಿಕಲಚೇತನರಿಗೆ ಸಾಧನ ಸಲಕರಣೆ ವಿತರಣಾ ಸಮಾರಂಭದ ಉದ್ಘಾಟನೆಗೆ ಜ.29ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸುತ್ತಿದ್ದಾರೆ ಎಂದು ಚಾಮರಾಜ ನಗರ ಲೋಕಸಭಾ ಕ್ಷೇತ್ರದ ಸಂಸದ ಶ್ರೀನಿವಾಸ್ ಪ್ರಸಾದ್ ತಿಳಿಸಿದರು.

ಇಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ನಂಜನಗೂಡು ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಅಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ನಾಲ್ಕು ವಿಧಾನಸಭಾ ಕ್ಷೇತ್ರಗಳಾದ ವರುಣಾ, ಟಿ.ನರಸೀಪುರ, ನಂಜನಗೂಡು ಹಾಗೂ ಹೆಚ್.ಡಿ.ಕೋಟೆ ವ್ಯಾಪ್ತಿಯ ವಿಕಲ ಚೇತನರಿಗೆ ಅಗತ್ಯ ಸಾಧನ ಸಲಕರಣೆ ಗಳನ್ನು ವಿತರಣೆ ಮಾಡಲಾಗುವುದು. ಈಗಾಗಲೇ ಇದೇ ರೀತಿಯ ಒಂದು ಕಾರ್ಯಕ್ರಮವನ್ನು ಚಾಮರಾಜನಗರ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚಾಮರಾಜನಗರದಲ್ಲಿ ಯಶಸ್ವಿಯಾಗಿ ನಿರ್ವಹಿಸಿ 1693 ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ ಎಂದರು.

ದೇಶದಲ್ಲಿ 68 ಲೋಕಸಭಾ ಕ್ಷೇತ್ರಗಳನ್ನು ಈ ವಿಶೇಷ ಸೌಲಭ್ಯಕ್ಕೆ ಆಯ್ಕೆ ಮಾಡಲಾಗಿದೆ. ಕರ್ನಾಟಕದಿಂದ ಆಯ್ಕೆಯಾಗಿರುವ ಏಕೈಕ ಲೋಕಸಭಾ ಕ್ಷೇತ್ರ ಚಾಮರಾಜನಗರ. ಈಗಾಗಲೇ ಫಲಾನುಭವಿಗಳನ್ನು ಗುರುತಿಸಲಾಗಿದೆ. 1499 ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು, ಫಲಾನುಭವಿಗಳನ್ನು ಕರೆತರುವ ಹಾಗೂ ಕರೆದುಕೊಂಡು ಹೋಗುವ ಜವಾಬ್ದಾರಿಯನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತೆಗೆದುಕೊಳ್ಳಬೇಕು. ಈ ಮೂಲಕ ಅಧಿಕಾರಿಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಇದು ವಿಶೇಷವಾದ ಕಾರ್ಯಕ್ರಮ. ವಿಕಲಚೇತನರನ್ನು ಕಾರ್ಯಕ್ರಮಕ್ಕೆ ಕರೆದುಕೊಂಡು ಬಂದು ಕಾರ್ಯಕ್ರಮದ ನಂತರ ಅವರನ್ನು ಕರೆದುಕೊಂಡು ಹೋಗಿ ಬಿಡುವ ಕಾರ್ಯವನ್ನು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ವಹಿಸಬೇಕು. ಇದಕ್ಕಾಗಿ ಜಿಲ್ಲಾ ಪಂಚಾಯತ್‌ನಲ್ಲಿ ವಿಕಲಚೇತನರಿಗೆ ಮೀಸಲಿರುವ ಶೇ.5 ಅನುದಾನವನ್ನು ಬಳಸಿಕೊಳ್ಳಿ. ಕಾರ್ಯಕ್ರಮದಲ್ಲಿ ವಿಕಲಚೇತನರ ಸಾಧನ ಸಲಕರಣೆಗಳ ಯಶಸ್ವಿ ವಿತರಣೆಗೆ ವಿವಿಧ ಕೌಂಟರ್‌ಗಳನ್ನು ತೆರೆದು ಮಾಹಿತಿಯನ್ನು ಪ್ರದರ್ಶಿಸುವುದು ಹಾಗೂ ವಿವಿಧ ಇಲಾಖೆಗಳು ತಮ್ಮ ಇಲಾಖೆಗಳಲ್ಲಿ ಲಭ್ಯವಿರುವ ಯೋಜನೆಗಳ ಸ್ಟಾಲ್‌ಗಳನ್ನು ತೆರೆಯಿರಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಪೂರ್ಣಿಮಾ. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಾದ ಪ್ರೇಮ್ ಕುಮಾರ್, ಕೃಷ್ಣಂರಾಜು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವೈದ್ಯಕೀಯ ನಿರ್ಲಕ್ಷತೆ, ಸೇವಾ ನ್ಯೂನ್ಯತೆ ಆರೋಪ

ಇಬ್ಬರು ವೈದ್ಯರಿಗೆ 8 ಲಕ್ಷ ದಂಡ

ಮೈಸೂರು, ಜ. 16- ವೈದ್ಯಕೀಯ ನಿರ್ಲಕ್ಷ್ಯ ಹಾಗೂ ಸೇವಾ ನ್ಯೂನ್ಯತೆ ಎಸಗಿದ ಆರೋಪದ ಮೇರೆಗೆ ಮೈಸೂರಿನ ವಿಕ್ರಂ ಜ್ಯೋತ್ ಆಸ್ಪತ್ರೆಯ ವೈದ್ಯರಾದ ಡಾ. ರಾಜ್‌ಕುಮಾರ್ ವಾದ್ವಾ ಮತ್ತು ಡಾ. ಎನ್. ರಾಘವೇಂದ್ರ ಅವರಿಗೆ 8 ಲಕ್ಷ ರೂ. ದಂಡ ವಿಧಿಸಿ ಮೈಸೂರು ಜಿಲ್ಲಾ ಗ್ರಾಹಕರ ಆಯೋಗ ಆದೇಶ ನೀಡಿದೆ.

ವಿವರ: ಮೈಸೂರಿನ ಕುವೆಂಪುನಗರ ನಿವಾಸಿ ಕೆ. ಶಂಕರನಾರಾಯಣ ಎಂಬುವರು 2015ರಲ್ಲಿ ಅನಾರೋಗ್ಯದ ಕಾರಣ ಯಾದವಗಿರಿಯಲಿದ್ದ ವಿಕ್ರಂ ಜ್ಯೋತ್ ಆಸ್ಪತ್ರೆಗೆ ದಾಖಲಾಗಿದ್ದರು. ಆ ವೇಳೆ ಅವರ ಆಸ್ಪತ್ರೆಯ ವೆಚ್ಚ 32 ಸಾವಿರ ರೂ. ಆಗಬಹುದೆಂದು ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದರು. ಜುಲೈ 30ರಂದು ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಯಾವುದೇ ಸಮಸ್ಯೆ ಕಂಡುಬಂದಿರಲಿಲ್ಲ. ನಂತರ ವಿಕ್ರಂ ಜ್ಯೋತ್ ಆಸ್ಪತ್ರೆ ವೈದ್ಯರು, ಶಂಕರನಾರಾಯಣ ಅವರಿಗೆ ಚಿಕಿತ್ಸೆ ನೀಡುವಂತೆ ಡಾ. ಎನ್. ರಾಘವೇಂದ್ರ ಅವರಿಗೆ ತಿಳಿಸಿದ್ದರು.

ಶಂಕರನಾರಾಯಣ ಅವರ ಪತ್ನಿ ವನಜಾಕ್ಷಿಯವರ ಗಮನಕ್ಕೆ ತಾರದೇ 2015ರ ಆಗಸ್ಟ್ 1ರಂದು ಶಂಕರನಾರಾಯಣ ಅವರಿಗೆ ಲ್ಯಾಪ್ರಾಸ್ಕೋಪಿಕ್ ಶಸ್ತ್ರಚಿಕಿತ್ಸೆ ನಡೆಸಿದ್ದು, ಈ ವೇಳೆ ವೈದ್ಯರ ನಿರ್ಲಕ್ಷ್ಯದಿಂದ ಅವರು ಪ್ರಜ್ಞಾಹೀನ ಸ್ಥಿತಿ ತಲುಪಿ ವಿವಿಧ ಅಂಗಾಂಗಗಳ ವೈಫಲ್ಯಕ್ಕೆ ಒಳಗಾದರು. ಆಗಸ್ಟ್ 8ರಂದು ಡಾ. ರಾಘವೇಂದ್ರ 2ನೇ ಬಾರಿಗೆ ಶಸ್ತ್ರಚಿಕಿತ್ಸೆ ನಡೆಸಿದರೂ ಚಿಕಿತ್ಸೆ ಫಲಕಾರಿಯಾಗಲಿಲ್ಲ. ಶಂಕರನಾರಾಯಣ ಅವರು 3 ತಿಂಗಳ ಕಾಲ ತೀವ್ರ ನಿಗಾ ಘಟಕದಲ್ಲಿದ್ದರು. ವಿಮಾ ಕಂಪನಿಯಿಂದ 6 ಲಕ್ಷ ಸೇರಿ ಶಂಕರನಾರಾಯಣರ ಪತ್ನಿಯಿಂದ ಆಸ್ಪತ್ರೆಯವರು ಒಟ್ಟು 25 ಲಕ್ಷ ರೂ. ಪಡೆದಿದ್ದರು. ಇನ್ನೂ ಹೆಚ್ಚಿನ ಮೊತ್ತ ಪಾವತಿಸಲು ಸಾಧ್ಯವಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದಾಗ ರೋಗಿಯನ್ನು 2015ರ ನವೆಂಬರ್ 26ರಂದು ಡಿಸ್ಚಾರ್ಜ್ ಮಾಡಲಾಯಿತು. ನಂತರ ಡಿಸೆಂಬರ್ 12ರಂದು ಶಂಕರನಾರಾಯಣ ಮೃತಪಟ್ಟರು.

ಶಂಕರನಾರಾಯಣರ ಸಾವಿಗೆ ವೈದ್ಯಕೀಯ ನಿರ್ಲಕ್ಷ್ಯ ಹಾಗೂ ವೈದ್ಯಕೀಯ ನ್ಯೂನ್ಯತೆ ಕಾರಣ ಎಂದು ಅವರ ಪತ್ನಿ ವನಜಾಕ್ಷಿ ಮತ್ತು ಮಗಳು ಶಿವಾನಿ ಶಂಕರ್ 2017ರ ಡಿಸೆಂಬರ್ 14ರಂದು ಮೈಸೂರು ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದೂರು ದಾಖಲಿಸಿದ್ದರು. ಈ ಮಧ್ಯೆ 2021ರ ಮೇ 21ರಂದು ವನಜಾಕ್ಷಿ ಮೃತಪಟ್ಟಿದ್ದು, ವೈದ್ಯರಾದ ಡಾ. ರಾಜ್‌ಕುಮಾರ್ ವಾದ್ವಾ ಮತ್ತು ಡಾ. ಎನ್. ರಾಘವೇಂದ್ರ ಅವರು ಶಂಕರನಾರಾಯಣರ ಪುತ್ರಿ ಶಿವಾನಿ ಶಂಕರ್ ಅವರಿಗೆ ವಾರ್ಷಿಕ ಶೇ. 6ರಷ್ಟು ಬಡ್ಡಿಯೊಂದಿಗೆ 8 ಲಕ್ಷ ರೂ.ಗಳನ್ನು ಹಾಗೂ ಪ್ರಕರಣದ ಖರ್ಚಿನ ಬಾಬ್ತು 5 ಸಾವಿರ ರೂ.ಗಳನ್ನು 2 ತಿಂಗಳೊಳಗಾಗಿ ಪಾವತಿಸಬೇಕೆಂದು ಜಿಲ್ಲಾ ಗ್ರಾಹಕರ ಆಯೋಗವು ಇದೇ ಜನವರಿ 11ರಂದು ಆದೇಶಿಸಿದೆ. ಶಿವಾನಿ ಶಂಕರ್ ಪರ ವಕೀಲ ಕೆ. ಈಶ್ವರ ಭಟ್ ವಕಾಲತ್ತು ವಹಿಸಿದ್ದರು.

ಜ.20ರಿಂದ ಕಾವಾ ಮೇಳ ; ನಾನಾ ಕಲಾಕೌಶಲ್ಯ ಅನಾವರಣಕ್ಕೆ ವೇದಿಕೆ ಸಜ್ಜು

ಮೈಸೂರು,ಜ.16(ಪಿಎಂ)- ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ (ಕಾವಾ) ವಿದ್ಯಾರ್ಥಿಗಳ ಕಲಾಕೌಶಲ್ಯದ ಪ್ರತಿಭೆ ಅನಾವರಣಗೊಳಿಸುವ ಪ್ರಸಕ್ತ ಸಾಲಿನ 'ಕಾವಾ ಮೇಳ-2023' ಜ.20ರಿಂದ 22ರವರೆಗೆ ನಡೆಯಲಿದ್ದು, ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ ಸೇರಿದಂತೆ ನಾನಾ ಕಲಾ ಪ್ರಕಾರಗಳ ಪ್ರದರ್ಶನಕ್ಕೆ ವಿದ್ಯಾರ್ಥಿ ಸಮೂಹ ಸಿದ್ಧತೆ ನಡೆಸುತ್ತಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾವಾ ಪ್ರಭಾರ ಡೀನ್ ಎ.ದೇವರಾಜ್, ಪ್ರತಿವರ್ಷ ಕಾಲೇಜಿನಲ್ಲಿ ಡಿಸೆಂಬರ್-ಜನವರಿಯಲ್ಲಿ ಕಾವಾ ಮೇಳ ಆಚರಿಸುವುದು ರೂಢಿಯಲ್ಲಿದೆ. ಆದರೆ ಕೋವಿಡ್ ಕಾರಣಕ್ಕೆ ಕಳೆದ ಎರಡು ವರ್ಷಗಳಿಂದ ಮೇಳ ಆಯೋಜನೆ ಸಾಧ್ಯವಾಗಿರಲಿಲ್ಲ. ಹಾಗಾಗಿ ಈ ಬಾರಿ ವಿಶೇಷ ಮತ್ತು ವಿಭಿನ್ನವಾಗಿ ಮೇಳ ಆಯೋಜನೆಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಪ್ರತಿಭೆಗೆ ಉತ್ತೇಜನ ನೀಡುವ ಜೊತೆಗೆ ಕಲೆ ಮತ್ತು ಸಮಾಜದೊಂದಿಗೆ ಬಾಂಧವ್ಯ ಬೆಸೆಯುವ ಸಲುವಾಗಿ 2004-05ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಡೀನ್ ಆಗಿದ್ದ ರಾಮದಾಸ್ ಅಡ್ಯಂತಾಯ ಅವರು ಕಾವಾ ಮೇಳ ಆರಂಭಿಸಿದರು. ಕಾಲೇಜು ಸಿದ್ಧಾರ್ಥನಗರದ ಜರ್ಮನ್ ಪ್ರೆಸ್ ಆವರಣಕ್ಕೆ ಸ್ಥಳಾಂತರಗೊಂಡ ಬಳಿಕ ನಡೆಯುತ್ತಿರುವ 3ನೇ ಕಾವಾ ಮೇಳ ಇದಾಗಿದೆ. ಕಾಲೇಜು ಆವರಣದಲ್ಲಿ ತಮ್ಮ ಕಲಾ ಪ್ರದರ್ಶನಕ್ಕೆ ವಿದ್ಯಾರ್ಥಿಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಬಹುತೇಕ ಪೂರ್ಣಗೊಳಿಸಿದ್ದಾರೆ ಎಂದರು.

ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ, ಅನ್ವಯ ಕಲೆ, ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿದ್ಯಾರ್ಥಿಗಳು ತಮ್ಮ ಕಲಾ ನೈಪುಣ್ಯತೆ ಪ್ರದರ್ಶಿಸಲಿದ್ದಾರೆ. ಕಲೆಯ ಇತಿಹಾಸ ಕುರಿತು ವಿಡಿಯೋ ಪ್ರದರ್ಶನ, ಸ್ಥಳದಲ್ಲೇ ದೃಶ್ಯಕಲಾ ಚಟುವಟಿಕೆಗಳಾದ ಭಾವಚಿತ್ರ ರಚನೆ, ವ್ಯಂಗ್ಯಚಿತ್ರ ರಚನೆ, ಕುಂಭ ಕಲಾಕೃತಿ ರಚನೆ, ಮುಖವಾಡ ರಚನೆ ಮತ್ತು ಹಚ್ಚೆ ಕಲೆ (ಟ್ಯಾಟು) ಮೂಲಕ ಕಾಲೇಜಿನ ವಿದ್ಯಾರ್ಥಿಗಳು ಕಲಿಕಾ ಕೌಶಲ್ಯದಿಂದ ಗಮನ ಸೆಳೆಯಲಿದ್ದಾರೆ ಎಂದು ತಿಳಿಸಿದರು.

ಅಲ್ಲದೆ, ವಿವಿಧ ಅನುಸ್ಥಾಪನಾ ಕಲಾಕೃತಿಗಳ ಪ್ರದರ್ಶನ, ಡಿಜಿಟಲ್ ಮತ್ತು ಪ್ರೊಡಕ್ಟ್ ಕ್ಯಾಂಪೇನ್ ಸ್ಟುಡಿಯೋ, ಅನಿಮೇಷನ್ ಕುರಿತ ಮ್ಯಿಟೋ ಸ್ಕೋಪ್ ಮತ್ತು ಫೆನಕಿಸ್ಟೋ ಸ್ಕೋಪ್, ಫೋಟೋ ಬೂತ್ ಸಹ ಇರಲಿದೆ. ಕಾವಾ ಮೇಳ 2023ರ ಕ್ಯಾಲೆಂಡರ್ ಮತ್ತು ಗ್ರೀಟಿಂಗ್ ಪ್ರದರ್ಶನವೂ ಇರಲಿದೆ ಎಂದರು.

ಮಕ್ಕಳಿಗೆ ಕಲಾ ಸ್ಪರ್ಧೆ: ಜ.22ರಂದು 1ರಿಂದ 12ನೇ ತರಗತಿ ಮಕ್ಕಳಿಗೆ ಸ್ಥಳದಲ್ಲೇ ಚಿತ್ರರಚನೆ ಮತ್ತು ಮಣ್ಣಿನ ಶಿಲ್ಪ ರಚನಾ ಸ್ಪರ್ಧೆ ಆಯೋಜಿಸಲಾಗಿದೆ. 1ರಿಂದ 4ನೇ ತರಗತಿ, 5ರಿಂದ 8 ಮತ್ತು 9ರಿಂದ 12ನೇ ತರಗತಿವರೆಗೆ ಮೂರು ವಿಭಾಗಗಳಲ್ಲಿ ಈ ಎರಡು ಪ್ರಕಾರದ ಸ್ಪರ್ಧೆಗಳು ನಡೆಯಲಿವೆ. ಮೂರು ವಿಭಾಗಗಳಲ್ಲಿಯೂ ಸಮಾನವಾಗಿ ಐದು ಬಹುಮಾನ ನೀಡಲಾಗುವುದು. ಅಲ್ಲದೆ, ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಮಾಣ ಪತ್ರ ನೀಡಲಾಗುವುದು. ಸ್ಪರ್ಧೆಗಳು ಅಂದು ಬೆಳಗ್ಗೆ 10ರಿಂದ ನಡೆಯಲಿದ್ದು, ಅದಕ್ಕೂ ಮುನ್ನ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದು ಎಂದು ಹೇಳಿದರು.

ಸಾರ್ವಜನಿಕರು ಪ್ರದರ್ಶನ ವೀಕ್ಷಣೆಗೆ ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತವಾಗಿ ಭೇಟಿ ನೀಡಬಹುದು. 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಕಲಾಕೌಶಲ್ಯ ಪ್ರದರ್ಶಿಸಲಿದ್ದಾರೆ. ಕಾವಾ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಾಲೇಜಿನ ಎರಡು ಕಟ್ಟಡಗಳನ್ನೂ ಉದ್ಘಾಟಿಸಲಾಗುವುದು ಎಂದರು.

ಮೇಳಕ್ಕೆ ಚಾಲನೆ: ಜ.20ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್‌ಕುಮಾರ್ ಕಾಲೇಜಿನ ನೂತನ ಕಟ್ಟಡಗಳನ್ನು ಉದ್ಘಾಟಿಸಲಿದ್ದಾರೆ. ಶಾಸಕ ತನ್ವೀರ್‌ಸೇಠ್ ಸಮಾರಂಭ ಅಧ್ಯಕ್ಷತೆ ವಹಿಸಲಿದ್ದು, ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಪ್ರತಾಪ್ ಸಿಂಹ ಸೇರಿದಂತೆ ಮೊದಲಾದ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಕಾಲೇಜಿನ ಕುಂಚ ಕಾವ್ಯ ಸಾಂಸ್ಕೃತಿಕ ಸಮಿತಿ ಕಾರ್ಯದರ್ಶಿ ಹಾಗೂ ವಿದ್ಯಾರ್ಥಿ ಪ್ರಣವ್ ಬೆಳ್ಳಾರೆ ಮಾತನಾಡಿ, ನಮ್ಮ ಕಲಿಕೆ ವ್ಯಾಪ್ತಿಯ ವೃದ್ಧಿಗೆ ಈ ಮೇಳ ಸಹಕಾರಿಯಾಗಲಿದೆ. ವಿದ್ಯಾರ್ಥಿಗಳ ಕಲಾಕೃತಿ, ಪೇಂಟಿಂಗ್ ಸೇರಿದಂತೆ ಮೊದಲಾದವುಗಳ ಮಾರಾಟಕ್ಕಾಗಿ ನಾಲ್ಕು ಮಳಿಗೆಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಕಾವಾದ ಅನ್ವಯಕಲೆ ವಿಭಾಗದ ಮುಖ್ಯಸ್ಥ ಬಿಂದುರಾಯ ಆರ್.ಬಿರಾದಾರ್, ಉಪನ್ಯಾಸಕ ಚಂದ್ರಶೇಖರ್, ಕುಂಚ ಕಾವ್ಯ ಸಾಂಸ್ಕೃತಿಕ ಸಮಿತಿ ಸಹಕಾರ್ಯದರ್ಶಿ ಧ್ರುವರಾಜ್ ಗೋಷ್ಠಿಯಲ್ಲಿದ್ದರು.

ಇಂದು ಕಾವಾ ಕಹಳೆ

ಕಾವಾ ಮೇಳದ ಪ್ರಚಾರಕ್ಕಾಗಿ ಕಾಲೇಜಿನ ವಿದ್ಯಾರ್ಥಿಗಳು ಜ.17ರಂದು ಸಂಜೆ 4ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಕಾವಾ ಕಹಳೆ ಶೀರ್ಷಿಕೆಯಡಿ ಮೆರವಣಿಗೆ ನಡೆಸಲಿದ್ದಾರೆ. ವಿದ್ಯಾರ್ಥಿಗಳು ವಿವಿಧ ವೇಷಭೂಷಣ ಧರಿಸಿ, ಕೆಆರ್ ವೃತ್ತ, ಚಿಕ್ಕಗಡಿಯಾರ ವೃತ್ತ ಇನ್ನಿತರೆ ರಸ್ತೆಗಳನ್ನು ಹಾದು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮುಕ್ತಾಯಗೊಳಿಸಲಿದ್ದಾರೆ.

-ಎ.ದೇವರಾಜ್, ಪ್ರಭಾರ ಡೀನ್, ಕಾವಾ

ವಿಜೃಂಭಣೆಯ ಶ್ರೀರಾಮದೇವರ ಬ್ರಹ್ಮ ರಥೋತ್ಸವ

ಚುಂಚನಕಟ್ಟೆ, ಜ.16– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮದೇವರ ಬ್ರಹ್ಮ ರಥೋತ್ಸವ ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ದೇವಾಲಯದ ಆವರಣದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜಶ್ರೀಗಳು, ಬೆಟ್ಟದಪುರ ಸಲಿಲಾಖ್ಯ ಮಠದ ಚನ್ನಬಸವ ದೇಶಿ ಕೇಂದ್ರಶ್ರೀ, ಶಾಸಕ ಸಾ.ರಾ.ಮಹೇಶ್, ಕುಪ್ಪೆ ಗ್ರಾಪಂ ಅಧ್ಯಕ್ಷ ಗೌರಮ್ಮ ರಥೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಭಕ್ತರು ಜೈ ಶ್ರೀರಾಮ್ ಎಂದು ಜಯಘೋಷ ಕೂಗುತ್ತಾ ದೇವಾಲಯದ ಸುತ್ತ ಸೀತಾ ಸಮೇತ ಶ್ರೀರಾಮದೇವರ ಉತ್ಸವಮೂರ್ತಿ ಪ್ರತಿಷ್ಠಾಪಿಸಿದ್ದ ಬ್ರಹ್ಮರಥವನ್ನು ಒಂದು ಸುತ್ತು ಎಳೆದು ಹಣ್ಣು-ಜವನ ಎಸೆದು ಭಕ್ತಿ ಪೂರ್ವಕವಾಗಿ ನಮಿಸಿದರು.

ಇದಕ್ಕೂ ಮೊದಲು ದೇವಾಲಯದ ಗರ್ಭಗುಡಿಯಿಂದ ಉತ್ಸವಮೂರ್ತಿಗಳನ್ನು ಮಂಗಳ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ಹೊತ್ತು ತಂದು ರಥದಲ್ಲಿ ಪ್ರತಿಷ್ಠಾಪಿಸಲಾಯಿತು.



ಬ್ರಹ್ಮ ರಥೋತ್ಸವ ಹಿನ್ನೆಲೆಯಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಿ ಮುಂಜಾನೆಯಿಂದಲೇ ಹೋಮ ಹವನ ನಡೆಸಿ ಮಹಾ ಮಂಗಳಾರತಿ ನೆರವೇರಿಸಲಾಯಿತು. ಈ ಸಂದರ್ಭ ಭಕ್ತರು ಕಾವೇರಿ ನದಿಯಲ್ಲಿ ಪುಣ್ಯಸ್ನಾನ ಮಾಡಿ ಸರತಿ ಸಾಲಿನಲ್ಲಿ ನಿಂತು ಭಗವಂತನ ದರ್ಶನ ಪಡೆದರು.

ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಶಾಸಕ ಸಾ.ರಾ.ಮಹೇಶ್ ಇಲ್ಲಿನ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಪ್ರಸಾದದ ವ್ಯವಸ್ಥೆ ಮಾಡಿದ್ದರಲ್ಲದೆ ಅವರ ಸಹೋದರ ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ದೇವಾಲಯಕ್ಕೆ ಬಂದ ಭಕ್ತರಿಗೆ ಲಾಡು ವಿತರಿಸಿದರು.

ಕಳೆದ 3 ವರ್ಷಗಳಿಂದ ರಥೋತ್ಸವ ನಡೆಯದಿದ್ದರಿಂದ ಈ ಬಾರಿ ಆ ಅಪರೂಪದ ಕ್ಷಣ ಕಣ್ತುಂಬಿಕೊಳ್ಳಲು ಜಿಲ್ಲೆ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ 50 ಸಾವಿರಕ್ಕೂ ಅಧಿಕ ಮಂದಿ ರಥೋತ್ಸವದಲ್ಲಿ ಭಾಗವಹಿಸಿದ್ದರು.

ಜಾತ್ರೆಯಲ್ಲಿ ಹಾಕಲಾಗಿದ್ದ ಸಿಹಿ ತಿಂಡಿ, ಆಟಿಕೆ, ಮಹಿಳೆಯರ ಅಲಂಕಾರಿಕ ಮತ್ತು ಇತರ ಅಂಗಡಿಗಳ ವ್ಯಾಪಾರಿಗಳು ಭರ್ಜರಿ ವ್ಯಾಪಾರ ನಡೆಸಿದರು. ಡಿವೈಎಸ್ಪಿ ಪೂರ್ಣಚಂದ್ರ ತೇಜಸ್ವಿ ಮತ್ತು ಸಾಲಿಗ್ರಾಮ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಶ್ರೀಕಾಂತ್, ಎಸ್ಐ ಚುಂಚನಕಟ್ಟೆ ಪೊಲೀಸ್ ಠಾಣೆ ಪ್ರವೀಣ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ರಥೋತ್ಸವದಲ್ಲಿ ಶಾಸಕ ಸಾ.ರಾ.ಮಹೇಶ್ ಪುತ್ರ ಸಾ.ರಾ.ಜಯಂತ್, ಮೈಮುಲ್ ಅಧ್ಯಕ್ಷ ಪ್ರಸನ್ನ, ಮಾಜಿ ಮೈಮುಲ್ ನಿರ್ದೇಶಕ, ಸೋಮಶೇಖರ್, ಕುಪ್ಪಳ್ಳಿ ಸೋಮು, ಸಿ.ಜಿ.ಬಾಬು, ಕೀರ್ತಿ, ಪರಶುರಾಮ್, ಅಣ್ಣೇಗೌಡ ಸೇರಿದಂತೆ ಇನ್ನಿತರರಿದ್ದರು.

ದೊಡ್ಡಹೆಜ್ಜೂರಲ್ಲಿ ಶ್ರೀರಾಮಾಂಜನೇಯ ರಥೋತ್ಸವ

ಹುಣಸೂರು, ಜ.16– ತಾಲೂಕಿನ ದೊಡ್ಡಹೆಜ್ಜೂರು ಇತಿಹಾಸ ಪ್ರಸಿದ್ಧ ಶ್ರೀರಾಮಾಂಜನೇಯ ರಥೋತ್ಸವ ಸಾವಿರಾರು ಭಕ್ತರ ಹರ್ಷೋದ್ಗಾರದ ನಡುವೆ ಸೋಮವಾರ ವಿಜೃಂಭಣೆಯಿಂದ ನಡೆಯಿತು.



ತಾಲೂಕು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮಡಿ ಸ್ನಾನಮಾಡಿ ದೇವರಿಗೆ ಪೂಜೆ ಸಲ್ಲಿಸಿದರು. ನಂತರ ನಡೆದ ರಥೋತ್ಸವದಲ್ಲಿ ನವ ದಂಪತಿ, ಯುವಕರು, ಯುವತಿಯರು ರಥಕ್ಕೆ ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಅಲ್ಲದೇ ರಥೋತ್ಸವದ ವೇಳೆ ಭಕ್ತರು ಜೈ ಶ್ರೀರಾಂ, ಗೋವಿಂದ, ಹರೆ ಗೋವಿಂದ ಎಂಬ ಜಯಘೋಷ ಕೂಗುತ್ತಾ ಭಕ್ತಿ ಭಾವದಿಂದ ರಥ ಎಳೆದು ಪುನೀತರಾದರು.

ಇದಕ್ಕೂ ಮುನ್ನಾ ರಥೋತ್ಸವಕ್ಕೆ ಶಾಸಕ ಹೆಚ್.ಪಿ.ಮಂಜುನಾಥ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಕಟ್ಟನಾಯಕ, ಗ್ರಾಪಂ ಅಧ್ಯಕ್ಷ ಸುಭಾಷ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಪಿಎಸಿಎಸ್ ಅಧ್ಯಕ್ಷ ಚಂದ್ರಶೇಖರ್, ಹನುಮ ರವಿಕುಮಾರ್, ವೆಂಕಟೇಶ್, ಸಮಿತಿ ಅಧ್ಯಕ್ಷ ಶೇಖರೇಗೌಡ, ಕಾರ್ಯದರ್ಶಿ ನಟರಾಜ್, ಉಪಾಧ್ಯಕ್ಷ ರಾಮಚಂದ್ರ, ಮಹದೇವ್, ಪಾಪಣ್ಣ, ರಾಜೇಗೌಡ ಮತ್ತಿತರರಿದ್ದರು.

ವಿವಿಧ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಹುಣಸೂರು, ಜ.16– ಸರ್ಕಾರದ ಎಂಎಡಿಸಿ ವಿಶೇಷ ಅನುದಾನದ 1.50 ಕೋಟಿ ರೂ. ವೆಚ್ಚದ ತಾಲೂಕಿನ 6 ವಿವಿಧ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು.



ತಾಲೂಕಿನ ಗಾವಡಗೆರೆ ಯೋಬಳಿ ಹಿರಿಕ್ಯಾತನಹಳ್ಳಿ ಗ್ರಾಮದ ಬಾವಿಕೆರೆ ರಸ್ತೆ ಮತ್ತು ದೇವಸ್ಥಾನ ರಸ್ತೆಗೆ 20 ಲಕ್ಷ ರೂ. ವೆಚ್ಚದಡಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮುಖಂಡರ ಬೇಡಿಕೆಯಂತೆ ಪ್ರಮುಖ ರಸ್ತೆಗಳಿಗೆ ಆದ್ಯತೆ ನೀಡಲಾಗಿದೆ.

ಮಲ್ನಾಡ್ ಅಭಿವೃದ್ಧಿ (ಎಂಐಡಿಪಿ) ಯೋಜನೆಯಡಿ ಹಿರೀಕ್ಯಾತನಹಳ್ಳಿ, ಶಿರೇನಹಳ್ಳಿ, ಹರವೆ, ರಾಮೇನಹಳ್ಳಿ, ಕೆರೆಮೇಗಲಕೊಪ್ಪಲು ಗ್ರಾಮಗಳಲ್ಲಿ ರಸ್ತೆಗಳನ್ನು 1.5 ಕೋಟಿ ರೂ., ಜೊತೆಗೆ ಹಿರೀಕ್ಯಾತನಹಳ್ಳಿ ಹಳೆ ಮುಖ್ಯರಸ್ತೆಯನ್ನು ಹಾರಂಗಿ ನೀರಾವರಿ ಇಲಾಖೆ(ಟಿಎಸ್‌ಪಿ) ಯೋಜನೆಯ 15 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ರಾಜ್ಯದ ಬಿಜೆಪಿ ಸರ್ಕಾರ ಹುಣಸೂರು ತಾಲೂಕಿಗೆ ಕಡಿಮೆ ಅನುದಾನ ನೀಡುವ ಮೂಲಕ ತಾರತಮ್ಯ ಮಾಡಿದೆ. ಬಂದ ಅನುದಾನದಲ್ಲೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಕಳೆದ 4 ವರ್ಷಗಳಿಂದ ಸರ್ಕಾರ ಅನುದಾನ ನೀಡಿಲ್ಲ. ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಜವರೇಗೌಡ, ಉಪಾಧ್ಯಕ್ಷೆ ವತ್ಸಲ, ಸದಸ್ಯರಾದ ಸುಜಾತ, ಸತೀಶ್, ಸಣ್ಣಶೆಟ್ಟಿ, ಸೂರನಾಯಕ, ಅಭಿ, ಮಣಿ, ಮುಖಂಡ ಜಗದೀಶ್, ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ್, ನಾರಾಯಣ್, ಸೋಮಶೇಖರ್, ಪುರಸಭಾ ಮಾಜಿ ಅಧ್ಯಕ್ಷ ರಮೇಶ್, ಮುಖಂಡರಾದ ಸುರೇಶ್, ಉದಯಕುಮಾರ್, ಶಿವಪ್ಪ, ಹರೀಶ್, ಪುಟ್ಟರಾಜ್, ಮಹೇಶ್, ವಿಶ್ವೇಶ್ವರಯ್ಯ, ಕೆಆರ್ ಐಡಿಎಲ್ ಸಹಾಯಕ ಇಂಜಿನಿಯರ್ ವಿಜಯ ಕುಮಾರ್, ಹಾರಂಗಿ–ಕಿತ್ತೂರು ಉಪ ವಿಭಾಗದ ಎಇಇ ರಂಗಯ್ಯ, ಸಹಾಯಕ ಇಂಜಿನಿಯರ್ ಚಂದ್ರಶೇಖರ್, ಚೆಸ್ಕಾಂನ ಎಇಇ ಸಿದ್ದಪ್ಪ ಪಿಡಿಓ ಶ್ರೀನಿವಾಸ್ ಹಾಗೂ ಹಲವು ಮುಖಂಡರು ಅಧಿಕಾರಿಗಳು ಹಾಜರಿದ್ದರು.

ಬಾಲರಾಜ್‌ಗೆ ಟಿಕೆಟ್ ನೀಡಲು ಒತ್ತಾಯ



ತಿ.ನರಸೀಪುರ, ಜ.16– ಮುಂಬರುವ ಚುನಾವಣೆಯಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಮಾದಿಗ ಸಮಾಜದ ಬಾಲರಾಜ್ ಅವರಿಗೆ ಟಿಕೆಟ್ ನೀಡುವಂತೆ ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಮಾದಿಗ ಸಮುದಾಯದ ಮುಖಂಡರ ಸಭೆಯಲ್ಲಿ ಜಮಾಯಿಸಿದ್ದ ಸಮುದಾಯದ ಮುಖಂಡರು, ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿರುವ ಬಾಲರಾಜ್ ಅವರಿಗೆ ಪಕ್ಷ ಟಿಕೆಟ್ ನೀಡಿದ್ದೆ ಆದರೆ ಸಮುದಾಯದ ಮುಖಂಡರು ಪಕ್ಷದಿಂದ ಯಾವುದೇ ವಂತಿಗೆ ಬಯಸದೇ ನಾವೇ ಪ್ರತಿ ಮನೆ ಮನೆಯಿಂದ ವಂತಿಗೆ ಸಂಗ್ರಹಿಸಿ ಗೆಲ್ಲಿಸುತ್ತೇವೆ. ಪಕ್ಷ ಬರೀ ಟಿಕೆಟ್ ನೀಡಿದರೆ ಸಾಕು ಎಂದರು.

ಸಭೆಯಲ್ಲಿ ಮುಖಂಡರಾದ ಎಂ.ಎಲ್.ಅನಿಲ್ ಕುಮಾರ್, ಎಸ್.ನಾರಾಯಣ್ ಮಾತನಾಡಿದರು. ನಾರಾಯಣಸ್ವಾಮಿ, ಸಿ.ಚಂದ್ರು, ಡಿ.ಶಿವು, ರಂಗಸ್ವಾಮಿ, ಮದನ್, ಕುಮಾರ್, ರಾಜು, ಮಲ್ಲೇಶ್, ಗೋಪಿ, ಕೆಂಪರಾಜು, ರಂಗಸ್ವಾಮಿ, ಗವಿಸಿದ್ದು, ಶ್ರೀನಿವಾಸ್, ಚಿನ್ನಸ್ವಾಮಿ, ಮಂಜು, ಶ್ರೀನಿವಾಸ್, ಆನಂದ್, ಸೂರ್ಯ, ಸುರೇಶ್ ಮತ್ತಿತರರಿದ್ದರು.

ಕಳಲೆಯಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

ನಂಜನಗೂಡು, ಜ.16– ಗ್ರಾಮೀಣ ಭಾಗದಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸುವುದರಿಂದ ಯುವ ಪ್ರತಿಭೆಗಳಿಗೆ ಅವಕಾಶ ದೊರೆತು ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಲು ಸಾಧ್ಯವಾಗಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಪ್ರಾಯಪಟ್ಟರು.



ತಾಲೂಕಿನ ಕಳಲೆ ಗ್ರಾಮದಲ್ಲಿ ಭಾನುವಾರ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ. ಕ್ರೀಡಾ ಮನೋಭಾವ ಎಲ್ಲರಲ್ಲೂ ಮೂಡಬೇಕು. ಆಗ ಮಾತ್ರ ವ್ಯಕ್ತಿ ತನ್ನ ಬದುಕಿನಲ್ಲೂ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವಂತಹ ಗುಣ ಬೆಳಸಿಕೊಳ್ಳಲು ಸಾಧ್ಯ. ವಾಲಿಬಾಲ್ ದೇಶಿ ಕ್ರೀಡೆಯಾಗಿದ್ದು, ಈ ಕ್ರೀಡೆಗೆ ಗ್ರಾಮೀಣ ಯುವಕರು ಹೆಚ್ಚಾಗಿ ಆಕರ್ಷಿತರಾಗುತ್ತಾರೆ. ಅಲ್ಲದೇ ನಂಜನಗೂಡು ತಾಲೂಕು ಕ್ರೀಡೆಗಳಿಗೆ ಪ್ರಸಿದ್ಧಿ ಪಡೆದಿದೆ. ಗ್ರಾಮೀಣ ಭಾಗದಲ್ಲಿ ದೇಶಿ ಕ್ರೀಡೆಗಳಿಗೆ ಉತ್ತೇಜನ ದೊರಕಬೇಕು. ಆ ದೆಸೆಯಲ್ಲಿ ಕಳಲೆ ಗ್ರಾಮದಲ್ಲಿ ರಾಜ್ಯಮಟ್ಟದ ಪಂದ್ಯಾವಳಿ ಆಯೋಜಿಸುವುದು ಸಂತಸ ತಂದಿದೆ. ಈ ಪಂದ್ಯಾವಳಿಯಲ್ಲಿ ಮಂಡ್ಯ, ಚಾಮರಾಜನಗರ, ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ 20ಕ್ಕೂ ಹೆಚ್ಚಿನ ಯುವಕರ ತಂಡಗಳು ಭಾಗವಹಿಸಿರುವುದು ಉತ್ತಮ ಬೆಳವಣಿಗೆ. ಇಂತಹ ಪಂದ್ಯಾವಳಿಗಳ ಮೂಲಕ ಪ್ರತಿಭಾವಂತ ಕ್ರೀಡಾಪಟುವಿಗೆ ಅವಕಾಶ ದೊರಕಿ ಉತ್ತಮ ಕ್ರೀಡಾಪಟುವಾಗಿ ಹೊರಹೊಮ್ಮುವಂತಾಗಲಿ ಎಂದು ಶುಭ ಹಾರೈಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕಳಲೆ ಗ್ರಾಮ ಕ್ರೀಡೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸಿಕೊಂಡಿದೆ. ಕುಸ್ತಿ, ಖೋ ಖೋ, ಚೆಸ್ ಕ್ರೀಡೆಗಳಲ್ಲಿ ಇಲ್ಲಿನ ಪ್ರತಿಭಾವಂತ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶನ ಮಾಡಿದ್ದಾರೆ. ಅಂತಹ ಯುವ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಸಿಗುವಂತಾಗಲು ಸರ್ಕಾರ ಕೂಡ ದೇಶಿಯ ಕ್ರೀಡೆಗಳಿಗೆ, ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಉತ್ತೇಜನ ನೀಡಬೇಕು ಎಂದರು.

ಸಮಾರಂಭದಲ್ಲಿ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಶ್ರೀಕಂಠನಾಯಕ, ರಂಗಸ್ವಾಮಿ, ಜಿಪಂ ಮಾಜಿ ಸದಸ್ಯೆ ಲತಾ, ಮುಖಂಡರಾದ ಎನ್.ಎಂ.ಮಂಜುನಾಥ್, ಕುಳ್ಳಯ್ಯ, ಶಿವಣ್ಣ, ಶಿವಪ್ಪ ದೇವರು, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ರಾಜೇಶ್, ಮಧುರಾಜ್, ಗ್ರಾಪಂ ಅಧ್ಯಕ್ಷೆ ರಾಜಮ್ಮ ಸೇರಿದಂತೆ ಹಲವರಿದ್ದರು.

ಸಿಸಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ



ಬೈಲಕುಪ್ಪೆ, ಜ.16– ಕಳೆದ ಚುನಾವಣೆಯಲ್ಲಿ ಮತಯಾಚನೆಗೆ ಆಗಮಿಸಿದ್ದ ವೇಳೆ ಗ್ರಾಮದ ಅಭಿವೃದ್ಧಿಗೆ ಮುಂದಾಗುತ್ತೇನೆ ಎಂದು ಹೇಳಿದ್ದೆ. ಅದರಂತೆ ನಡೆದಿದ್ದೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಪಂ ವ್ಯಾಪ್ತಿಯ ಕಾವೇರಿ ಬಡಾವಣೆ, ಆವರ್ತಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈ ವೇಳೆ ಕೊಪ್ಪ ಗ್ರಾಪಂ ಅಧ್ಯಕ್ಷ ಸಿ.ಎಸ್.ರೇಣುಕಾಸ್ವಾಮಿ, ಬೆಣಗಾಲು ಗ್ರಾಪಂ ಅಧ್ಯಕ್ಷ ರಾಜು, ಕೊಪ್ಪ ಗ್ರಾಪಂ ಸದಸ್ಯರಾದ ರಾಮಚಂದ್ರ, ಸುರೇಶ್, ದಿಲೀಪ್, ಸಿಂಧು, ಮಂಜು, ಕೃಷ್ಣ, ಮುಖಂಡರಾದ ಚಂದ್ರಶೇಖರ್, ರಂಗಸ್ವಾಮಿ, ಸೋಮಶೇಖರ್, ಅಣ್ಣಯ್ಯ, ರಂಗನಾಥ, ಗುರುಪಾದಸ್ವಾಮಿ, ಬಸವೇಗೌಡ, ದೇವರಾಜು, ರವಿ, ದಿನೇಶ್, ಪಿಡಿಓ ಅಭಿ, ಮಹಮ್ಮದ್, ನವೀನ್, ಎಇಇ ಸುನೀಲ್ ಸೇರಿದಂತೆ ಇನ್ನಿತರರಿದ್ದರು.

ಶಿರಮಳ್ಳಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ

ಹೆಚ್.ಡಿ.ಕೋಟೆ, ಜ.16– ಪೋಲಿಯೋ ನಿರ್ಮೂಲನೆಗೆ ರೋಟರಿ ಸಂಸ್ಥೆ ನಿರಂತರವಾಗಿ ಶ್ರಮಿಸುತ್ತಿದೆ ಎಂದು ರೋಟರಿ ಕ್ಲಬ್ ಜಿಲ್ಲಾ ಗವರ್ನರ್ ಪ್ರಕಾಶ್ ಕಾರಂತ್ ತಿಳಿಸಿದರು.



ತಾಲೂಕಿನ ಶಿರಮಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಲಸಿರಿ ಯೋಜನೆಯಡಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಲ್ಲಿನ ಸರ್ಕಾರಿ ಶಾಲೆಯನ್ನು ಗುರುತಿಸಿ ಶಾಲೆ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಘಟಕ, ಕೈ ತೊಳೆಯುವ ಘಟಕ, ನೋಟ್ ಪುಸ್ತಕ ವಿತರಿಸುವ ಮೂಲಕ ಶಾಲೆ ಆವರಣದಲ್ಲಿ ಸಸಿಗಳನ್ನು ನೆಡಲಾಗಿದೆ ಎಂದರು.

ರೋಟರಿ ಕ್ಲಬ್ ವಿದ್ಯಾಸಿರಿ, ಜಲಸಿರಿ, ವನಸಿರಿ ಹಾಗೂ ಆರೋಗ್ಯ ಸಿರಿ ಸೇರಿದಂತೆ 7 ಕೇಂದ್ರಬಿಂದುಗಳಲ್ಲಿ ಕೆಲಸ ಮಾಡುತ್ತದೆ. ಅದರಲ್ಲೂ ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ರೋಟರಿ ಪ್ರಯತ್ನಿಸುತ್ತಿದೆ. ಆರೋಗ್ಯಸಿರಿ ಯೋಜನೆಯಡಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಕೆಲಸ ಮಾಡುತ್ತಿದೆ. ಹಾಗಾಗಿ ಭಾರತದಲ್ಲಿ ಪೋಲಿಯೋ ಮುಕ್ತ ಆಗಿದೆ. ಎಲ್ಲಾ ರೀತಿಯ ರೋಗಗಳ ಶಮನಕ್ಕೆ ರೋಟರಿ ಕೈ ಜೋಡಿಸಿದೆ. ನೀರು ಮತ್ತು ನೈರ್ಮಲ್ಯಕ್ಕೆ ಒತ್ತುಕೊಟ್ಟಿದೆ. ಅದೇ ರೀತಿ ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ಪೌಷ್ಟಿಕಾಹಾರ ವ್ಯವಸ್ಥೆಗೆ ಕೈ ಜೋಡಿಸಿದೆ. ಸಂಸ್ಥೆಯಿಂದ ವಿದ್ಯಾಸಿರಿ ಯೋಜನೆ, ಸಮುದಾಯ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದ್ದು, ಗ್ರಾಮಗಳನ್ನು ಸ್ವಚ್ಛವಾಗಿಡಲು ಸಾಕಷ್ಟು ಶ್ರಮಿಸಲಾಗುತ್ತಿದೆ. ಹುಟ್ಟಿನಿಂದ ಸಾಯುವವರೆಗೂ ನಮಗೆ ಮರಗಿಡಗಳ ಅವಶ್ಯಕತೆ ಇದೆ. ಹೀಗಾಗಿ ಪ್ರತಿಯೊಬ್ಬರೂ 4 ಗಿಡಗಳನ್ನು ನೆಡುವ ಮೂಲಕ ಪರಿಸರ ಉಳಿಸಬೇಕು ಎಂದರು.

ನಮ್ಮಲ್ಲಿರುವ ಅಜ್ಞಾನ ತೊಲಗಿಸಿ ಜ್ಞಾನ ಪಡೆಯಲು ಶಿಕ್ಷಣ ಬಹುಮುಖ್ಯ. ಪ್ರತಿಯೊಂದಕ್ಕೂ ಸರ್ಕಾರವನ್ನು ಕಾಯ್ದುಕೊಳ್ಳದೆ, ನಮ್ಮ ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕು ಎಂದರು. ಹೆಚ್.ಡಿ.ಕೋಟೆ ರೋಟರಿ ಕ್ಲಬ್ ಅಧ್ಯಕ್ಷ ಗಣೇಶ್ ಲಾಡ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನಾರಾಯಣ್ ಲಾಲ್, ನಿರಂಜನ್, ಮಹೇಶ್, ಗಂಗಾಧರ್, ಹರೀಶ್, ಮುಖ್ಯಶಿಕ್ಷಕ ಪುಟ್ಟರಾಜು, ಎಸ್‌ಡಿಎಂಸಿ ಅಧ್ಯಕ್ಷ ನಂಜಯ್ಯ, ಶಿಕ್ಷಕರಾದ ನಂದನ್, ಆಶಾ ಇನ್ನಿತರರಿದ್ದರು.

ತಿ.ನರಸೀಪುರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ತಿ.ನರಸೀಪುರ, ಜ.16– ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ವಿವೇಚನಾ ನಿಧಿ ಅನುದಾನ, ಇನ್ನಿತರ ಅನುದಾನ 5.8 ಕೋಟಿ ಹಾಗೂ ನಗರೋತ್ಥಾನ ಯೋಜನೆಯ 3.79 ಕೋಟಿ ಅನುದಾನ ಸೇರಿದಂತೆ 9 ಕೋಟಿ ರೂ. ವೆಚ್ಚದಲ್ಲಿ ಪಟ್ಟಣದ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ಪಟ್ಟಣದ ಪುರಸಭಾ ವ್ಯಾಪ್ತಿಯ ವರುಣಾ ಕ್ಷೇತ್ರಕ್ಕೆ ಸೇರಿದ ಖಾಸಗಿ ಬಸ್ ನಿಲ್ದಾಣದಿಂದ ಭಗವಾನ್ ವೃತ್ತದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಭಗವಾನ್ ವೃತ್ತ ಸೇರಿದಂತೆ ರಾಷ್ಟ್ರೀಯ ಹೆದ್ದಾರಿವರೆಗೆ ಹಾಗೂ ಭಗವಾನ್ ವೃತ್ತದಿಂದ ಮಾರುಕಟ್ಟೆ ರಸ್ತೆ ಹಾಗೂ ಸಾರಿಗೆ ಬಸ್ ನಿಲ್ದಾಣದವರೆಗೂ ರಸ್ತೆ ಅಭಿವೃದ್ಧಿಯಾಗಲಿದೆ ಎಂದರು.

2019–20ರಲ್ಲಿ ಸರ್ಕಾರ ಅನುದಾನ ವಾಪಸ್ ಪಡೆದಿತ್ತು. ಬಳಿಕ ಮುಖ್ಯಮಂತ್ರಿಗಳಿಗೆ ಮನವಿ ಮಾಡಿ 3 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿದೆ. ಈ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದರು.

ಪುರಸಭಾ ಸದಸ್ಯರು ಬೀದಿದೀಪಗಳ ನಿರ್ವಹಣೆ, ದುರಸ್ತಿಗೆ ಮುಂದಾಗಿರುವುದು ಸ್ವಾಗತಾರ್ಹ. ಈ ಹಿಂದೆ ಪುರಸಭಾ ಕೌನ್ಸಿಲ್ ಸಮಿತಿ ಆಯ್ಕೆ ವಿಳಂಬವಾದ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ಹಿನ್ನಡೆಯಾಗಿತ್ತು ಪುರಸಭೆ ಚುನಾವಣೆ ನಂತರ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರುವುದು ವಿಳಂಬವಾಗಿ ಸಾರ್ವಜನಿಕ ಕೆಲಸ ಹಾಗೂ ಅಭಿವೃದ್ಧಿ ಕಾರ್ಯಗಳು ಅಸ್ತವ್ಯಸ್ತವಾಗಿದ್ದವು. ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಆಯ್ಕೆಯಾದ ಬಳಿಕ ವ್ಯವಸ್ಥಿತವಾಗಿ ಪುರಸಭಾ ಕಾರ್ಯಗಳು ನಡೆಯುತ್ತಿವೆ ಎಂದರು.

> 6 ಪಟ್ಟಣದ ರಸ್ತೆಗಳ ದುಸ್ಥಿತಿ ಕಂಡು ನಮ್ಮ ಪುರಸಭಾ ಸದಸ್ಯರು ಪಕ್ಷಾತೀತವಾಗಿ ಅನುದಾನವನ್ನು ರಸ್ತೆ ಅಭಿವೃದ್ಧಿಗೆ ಬಳಸಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಎಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
> –ಟಿ.ಎಂ.ನಂಜುಂಡಸ್ವಾಮಿ, ಪುರಸಭಾಧ್ಯಕ್ಷ.

ನನ್ನ ತಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಕ್ಷೇತ್ರಕ್ಕೆ ನೂರಾರು ಕೋಟಿ ರೂ. ಅನುದಾನ ಬಿಡುಗೊಳಿಸಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಮಹಿಳಾ ಪದವಿ ಕಾಲೇಜು, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಮಿನಿ ವಿಧಾನಸೌಧ 24X7 ಕುಡಿಯುವ ನೀರು, ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಮದನ್‌ರಾಜ್, ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಪುರಸಭಾ ಮುಖ್ಯಾಧಿಕಾರಿ ಬಸವರಾಜು, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಕೆಆರ್.ನಗರ ಮಾಜಿ ಜಿಪಂ ಸದಸ್ಯ ಡಿ.ರವಿಶಂಕರ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಅಹ್ಮದ್, ಸದಸ್ಯರಾದ ಎಸ್.ಸೋಮು, ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ತೇಜಸ್ವಿನಿ ರಾಜು, ತುಂಬಲ ಪ್ರಕಾಶ್, ಎಲ್.ಮಂಜುನಾಥ್, ತಾಪಂ ಮಾಜಿ ಉಪಾಧ್ಯಕ್ಷ ಮರಯ್ಯ, ಮುಖಂಡರಾದ ಹೇಮಂತ್, ಸ್ವಾಮಿಗೌಡ, ಶ್ರೀಕಂಠ, ರಾಘವೇಂದ್ರ ಅರುಣ್‌ಗೌಡ, ಬ್ಲಾಕ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಎಂ.ಮಲ್ಲಿಕಾರ್ಜುನಸ್ವಾಮಿ, ವಾಟಾಳ್ ನಾಗೇಶ್ ಮತ್ತಿತರರಿದ್ದರು.

ದಸಂಸ ಆಟೋ ಮಾಲೀಕರು, ಚಾಲಕರ ಸಂಘ ಉದ್ಘಾಟನೆ



ತಿ.ನರಸೀಪುರ, ಜ.16– ಪಟ್ಟಣದ ಭಗವಾನ್ ವೃತ್ತದಲ್ಲಿ ದಲಿತ ಸಂಘರ್ಷ ಸಮಿತಿ ಆಟೋ ಮಾಲೀಕರು ಮತ್ತು ಚಾಲಕರ ಸಂಘವನ್ನು ಜಿಲ್ಲಾ ದಲಿತ ಸಂಘರ್ಷ ಸಮಿತಿ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರಾತ್ರಿ, ಹಗಲು, ಬಿಸಿಲು–ಮಳೆ ಲೆಕ್ಕಿಸದೆ ಸಾರ್ವಜನಿಕರ ಸೇವೆ ಮಾಡುತ್ತಿರುವ ಆಟೋ ಚಾಲಕರ ಕಾರ್ಯ ಶ್ಲಾಘನೀಯ. ಹೀಗಾಗಿ ಅವರಿಗೂ ಗೌರವಯುತ ಹಾಗೂ ಜೀವನ ಭದ್ರತೆ ಕಲ್ಪಿಸಬೇಕು ಎಂದರು.


ತಿ.ನರಸೀಪುರ ಠಾಣೆ ಎಸ್‌ಐ ತಿರುಮಲ್ಲೇಶ್ ಮಾತನಾಡಿ, ವಾಹನ ಚಾಲಕರು ಪರವಾನಗಿ, ವಾಹನ ವಿಮೆ ಮತ್ತು ವಾಹನ ದಾಖಲಾತಿ ಇಟ್ಟುಕೊಂಡು ವಾಹನ ಚಾಲನೆ ಮಾಡಬೇಕು. ಅಲ್ಲದೆ ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು. ಸಂಚಾರಿ ಕಾನೂನುಗಳು ಕ್ರಿಮಿನಲ್ ಕಾನೂನುಗಳಷ್ಟೇ ಬಲಿಷ್ಠವಾಗಿದ್ದು, ಸಂಚಾರಿ ಕಾನೂನುಗಳ ಉಲ್ಲಂಘನೆ ಶಿಕ್ಷಾರ್ಹ ಅಪರಾಧ. ವಾಹನಗಳಲ್ಲಿ ಸಂಚರಿಸುವಾಗ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಸಂಚಾರಿ ನಿಯಮಗಳಾಗಿದ್ದು, ಪ್ರತಿಯೊಬ್ಬರೂ ಅವುಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್‌ಗೌಡ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಸ್ವಾಮಿನಾಥ್, ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ತಾಲೂಕು ಬಾಬುಜೀವನ್‌ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಕೆಂಪಯ್ಯನಹುಂಡಿ ರಾಜು, ಸಂಘದ ಅಧ್ಯಕ್ಷ ನಿಲಸೋಗೆ ಕುಮಾರ್, ಹಿರಿಯೂರು ಶಿವಪ್ರಸಾದ್, ಲಕ್ಷ್ಮಿ, ರಮೇಶ್, ಸಿದ್ದರಾಜು ಇತರರಿದ್ದರು.



ಬನ್ನೂರಿನ ಶ್ರೀ ಕೋದಂಡರಾಮ ದೇವಾಲಯದಲ್ಲಿ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಭಾನುವಾರ ಮನಮೋಹನ ರಂಗನಾಥನಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಅರ್ಚಕರಾದ ಶ್ರೀನಿವಾಸ್, ಮುರಳೀಧರ ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನ



ಮಂಡ್ಯ, ಜ.16– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ 'ಟಿಪ್ಪುವಿನ ನಿಜ ಕನಸುಗಳು' ನಾಟಕ ಪ್ರದರ್ಶನವನ್ನು ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶನಿವಾರ ಹಾಗೂ ಭಾನುವಾರ ಸಂಜೆ 2 ಪ್ರದರ್ಶನ ಯಶಸ್ವಿಯಾಗಿ ನಡೆಯಿತು. ನಾಟಕವನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ ನಾರಾಯಣ್ ಸೇರಿದಂತೆ ಅನೇಕ ಬಿಜೆಪಿ ನಾಯಕರು ವೀಕ್ಷಿಸಿದರು.

ನಾಟಕ ಪ್ರದರ್ಶನದ ಬಳಿಕ ಮಾತನಾಡಿದ ಸಚಿವ ಸಿ.ಎನ್. ಅಶ್ವತ್ ನಾರಾಯಣ್, ಟಿಪ್ಪು ಸುಲ್ತಾನ್ ನನ್ನು ನಾನು ಸಹ ನಿಜವಾದ ಹೀರೋ ಎಂದು ಪಠ್ಯ ಪುಸ್ತಕದಲ್ಲಿ ಓದಿ ತಿಳಿದುಕೊಂಡಿದ್ದೆ. ಆದರೆ ಕಾಲ ಕ್ರಮೇಣ ಟಿಪ್ಪುವಿನ ಮತಾಂತರ ಸೇರಿದಂತೆ ಆತನ ಕ್ರೌರ್ಯ ಹಾಗೂ ಹಿಂದೂ ವಿರೋಧಿ ನಡೆಗಳು ತಿಳಿಯುತ್ತಾ ಬಂದವು. ನಾಟಕದಲ್ಲಿ ಎಲ್ಲವನ್ನು ತೋರಿಸಿದ್ದಾರೆ. ಮಂಡ್ಯದಲ್ಲಿ ನಾಟಕ ಯಶಸ್ವಿಯಾಗಿದ್ದು, ಸಂಪೂರ್ಣ ನಾಟಕ ವೀಕ್ಷಣೆ ಮಾಡಿದ್ದೇನೆ ಎಂದರು.

ಈಗಾಗಲೇ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಕಲಾವಿದರಿಗೆ ವೇತನದ ಸಮಸ್ಯೆ ಇದ್ದು, ರಂಗಾಯಣ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಡುವಂತೆ ಮನವಿ ಮಾಡಿದ್ದಾರೆ. ಈ ಬಗ್ಗೆ ನಾನು ಸಿಎಂ ಹಾಗೂ ಸಂಬಂಧಿಸಿದ ಸಚಿವರೊಂದಿಗೆ ಮಾತುಕತೆ ನಡೆಸಿ, ರಂಗಾಯಣಕ್ಕೆ ಅನುದಾನ ಹಾಗೂ ಕಲಾವಿದರಿಗೆ ಹೆಚ್ಚಿನ ವೇತನ ಸಿಗುವಂತೆ ಮಾಡುವೆ ಎಂದು ಭರವಸೆ ನೀಡಿದರು.

ಈ ವೇಳೆ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಡಾ.ಇಂದ್ರೇಶ್, ಅಶೋಕ್ ಜಯರಾಂ, ಚಂದಗಾಲು ಶಿವಣ್ಣ, ಫೈಟರ್ ರವಿ, ಮಳವಳ್ಳಿ ಮುನಿರಾಜು, ಅರವಿಂದ್ ಕುಮಾರ್, ಎಸ್.ಪಿ.ಸ್ವಾಮಿ, ಡಾ.ಸಿದ್ದರಾಮಯ್ಯ ಸೇರಿದಂತೆ ಹಲವರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿ ಅನುಸೂಚಿ 1ರ ಸ್ವತ್ತಿನ ಮಾಲೀಕರಾದ ಶ್ರೀಮತಿ ಎಸ್.ಟಿ. ಅನಿತ ಕೋಂ ಬಿ.ರಾಮು ಮತ್ತು ಕಾಳಪ್ಪ ಮೈಸೂರು ರವರಿಂದಲೂ ಅನುಸೂಚಿ 2 ಮತ್ತು 3ರ ಸ್ವತ್ತನ್ನು, ಸ್ವತ್ತಿನ ಮಾಲೀಕರಾದ ಶ್ರೀ ಲಕ್ಷ್ಮಿರಂಗಪ್ಪ ಮತ್ತು ಶ್ರೀ ಎಂಕೆ.ಮಿಥುನ ಮೈಸೂರು ರವರಿಂದಲೂ ನನ್ನ ಕಕ್ಷಿದಾರರು ಖರೀದಿಸುವ ಇರಾದೆ ಹೊಂದಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಮೇಲ್ಕಂಡವರನ್ನು ಹೊರತುಪಡಿಸಿ, ಬೇರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಮಾಲೀಕತ್ವ, ಹಿತಾಸಕ್ತಿ ಮತ್ತು ಸ್ವಾಧೀನಾನುಭವದ ಬಗ್ಗೆ ತಕರಾರು ಅಥವಾ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ ಏಳು ದಿವಸಗಳ ಒಳಗಾಗಿ ಈ ಕೆಳಗೆ ನಮೂದಿಸಿರುವ ವಕೀಲರ ವಿಳಾಸಕ್ಕೆ ಖುದ್ದಾಗಿ, ದಾಖಲೆಗಳೊಡನೆ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚಿಸಲಾಗಿದೆ.

ಸದರಿ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ, ಯಾವುದೇ ತಂಟೆ ತಕರಾರುಗಳು ಇಲ್ಲವೆಂದು ತಿಳಿದು ಸ್ವತ್ತನ್ನು ಖರೀದಿಸಲು ಮುಂದುವರೆಯುತ್ತಾರೆ. ಅವಧಿಯ ನಂತರ ಬರುವ ತಕರಾರುಗಳಿಗೆ ಮಾನ್ಯತೆಯಿರುವುದಿಲ್ಲ. ಹಾಗೂ ಅಂತಹ ಆಕ್ಷೇಪಣೆಗಳು ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಬಗ್ಗೆ ಮಾಡಿಕೊಳ್ಳುವ ಯಾವುದೇ ವ್ಯವಹಾರಗಳಿಗೆ ಬದ್ಧಪಡಿಸುವುದಿಲ್ಲ ಎಂಬುದಾಗಿ ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ:

1. ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ದೊಡ್ಡಕಾಡನಹಳ್ಳಿ ಗ್ರಾಮದ ಸರ್ವೆ ನಂ.71/4(ಹಳೆ ಸರ್ವೆ ನಂ.71/1) ರಲ್ಲಿರುವ ಖುಷ್ಕಿ ಜಮೀನು ವಿಸ್ತೀರ್ಣ 1.00 ಎಕರೆ ಜಮೀನಿಗೆ ಚಕ್ಕುಬಂಧಿ:– ಪೂರ್ವಕ್ಕೆ :– ಜಯಲಕ್ಷ್ಮಿ ರವರ ಜಮೀನು, ಪಶ್ಚಿಮಕ್ಕೆ:– ನಿಂಗರಾಜು ರವರ ಜಮೀನು, ಉತ್ತರಕ್ಕೆ:– ಲಾ.ನಂ.68ರ ಜಮೀನು, ದಕ್ಷಿಣಕ್ಕೆ:– ಜಯಲಕ್ಷ್ಮಿ ಕೋಂ ಸತ್ಯನಾರಾಯಣ ರವರ ಜಮೀನು.
2. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮದ ಸರ್ವೆ ನಂ.24ರಲ್ಲಿ ಸ್ವಾಮಿ ಬಿನ್ ಲೇಟ್. ಪುಟ್ಟಮಾದಪ್ಪ ರವರ ಬಾಬ್ತು ಒಟ್ಟು ವಿಸ್ತೀರ್ಣ 1–12 (ಒಂದು ಎಕರೆ ಹನ್ನೆರಡು ಗುಂಟೆ) ಜಮೀನಿನ ಪೈಕಿ 0–18 (ಹದಿನೆಂಟು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂಧಿ:– ಪೂರ್ವಕ್ಕೆ :– ಶಿವಲಿಂಗಪ್ಪ ರವರ ಜಮೀನು, ಪಶ್ಚಿಮಕ್ಕೆ:– ಸ.ನಂ.24 ಉಳಿಕೆ ಬಾಬ್ತು, ಉತ್ತರಕ್ಕೆ:– ರಸ್ತೆ, ದಕ್ಷಿಣಕ್ಕೆ:– ರಾಜಪ್ಪರವರ ಜಮೀನು.
3. ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬರಡನಪುರ ಗ್ರಾಮದ ಸರ್ವೆ ನಂ.24RS/3 (ಹಳೆ ನಂ.24) ರಲ್ಲಿರುವ 0–18 (ಹದಿನೆಂಟು ಗುಂಟೆ) ಪೈಕಿ 0–08 (ಎಂಟು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂಧಿ:– ಪೂರ್ವಕ್ಕೆ :– ಜಯಪುರ ಗಡಿ ಮತ್ತು ಲಾ.ಹಿ.2ರ ಜಮೀನು, ಪಶ್ಚಿಮಕ್ಕೆ:– ಲಾ.ಹಿ.2ರ ಜಮೀನು, ಉತ್ತರಕ್ಕೆ:– ಬ್ಲಾಕ್ 1ರ ನನ್ನ ಬಾಬ್ತು ಉಳಿಕೆ ಜಮೀನು, ದಕ್ಷಿಣಕ್ಕೆ:– ಜಯಪುರ ಗಡಿ ಹಾಗೂ ಲಾ.ಹಿ.2 ರ ಜಮೀನು.

ಸ್ಥಳ: ಮೈಸೂರು
ದಿನಾಂಕ: 14.01.2023

ಎಸ್. ಕುಮಾರ ಸ್ವಾಮಿ, (ವಕೀಲರು)
ಕೆಎಆರ್ 866/94
ಚೇಂಬರ್ ನಂ.729/1, ಗ್ರೌಂಡ್ ಫ್ಲೋರ್
ಪ್ರಸನ್ನ ಸಾಯಿ ಬಾಬ ದೇವಸ್ಥಾನ ಎದುರು.
ತ್ಯಾಗರಾಜ ರಸ್ತೆ, ಮೈಸೂರು–04

Bharatiya Vidya Bhavan

CA-14, Vijayanagar 1st Stage, Mysore - 570017,
Phone: 0821-2412141, Email – bvbmysore@gmail.com

BUSES FOR SALE

The buses are in good running condition and will be sold to the highest bidder. The following brief details are furnished. Further enquiries, inspection of the buses and quotes in sealed envelope can be made at the site given above between **18.01.2023 to 21.01.2023. EMD of Rs. 25,000/- is a must.**

Sl. No.	Description	Bus 1	Bus 2
1.	Make	Mahindra	TATA
2.	Registration	July 2009	July 2012
3.	Seats	17	27

Sd/- Hon. Secretary

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಗೋವಿಂದರಾಜು ಕೆ. ಬಿನ್ ಲೇಟ್ ಕರಿಯಪ್ಪ, 45 ವರ್ಷ ವಯಸ್ಸು, ವಾಸ #49, 2ನೇ ಮೇನ್, 3ನೇ ಕ್ರಾಸ್, ಜಯನಗರ ಇವರ ಇರಾದೆ ಮೇರೆಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಹಾಲೀ ಅದರ ಮಾಲೀಕರಾದ ಕೆ.ಆರ್. ಪ್ರಸನ್ನ ಬಿನ್ ಕೆ.ಆರ್. ರಾಮಚಂದ್ರ ರವರಿಂದ ಖರೀದಿಸಲು ಒಪ್ಪಿ ಸದರಿಯವರೊಂದಿಗೆ ಕ್ರಯದ ಕರಾರು ಮಾಡಿಕೊಂಡಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆಯಾರಿಗಾದರೂ ಹಕ್ಕು, ಹಿತಾಸಕ್ತಿ, ಸ್ವಾಧೀನ, ನ್ಯಾಯಾಲಯಗಳಲ್ಲಿ ದಾವೆ ವಗೈರೆಗಳು ಇದ್ದಲ್ಲಿ ಈ ತಿಳುವಳಿಕೆ ಪ್ರಕಟಣೆಗೊಂಡ 15 ದಿನಗಳ ಒಳಗಾಗಿ ನಮ್ಮ ಕಚೇರಿಗೆ ತಕರಾರು ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾರಿಂದಲೂ ಯಾವುದೇ ತಕರಾರು ಬಾರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಖರೀದಿಗೆ/ಕ್ರಯ ಪತ್ರ ನೋಂದಾವಣೆ ಮಾಡಿಸಿಕೊಳ್ಳಲು ಸಿದ್ಧರಿರುತ್ತಾರೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಜಯನಗರ, ಬಡಾವಣೆ, 12ನೇ ಕ್ರಾಸ್, ಮಾಡಲ್ ಹೌಸ್ ನಂ. 158 (10)ರಲ್ಲಿ ವಿಸ್ತೀರ್ಣ ಪೂರ್ವ ಪಶ್ಚಿಮ: 50.5 ಅಡಿ, ಉತ್ತರ ದಕ್ಷಿಣ: 61.00 ಅಡಿಗಳುಳ್ಳ ನಿವೇಶನ ಮತ್ತು ಇದರಲ್ಲಿರುವ ಕಟ್ಟಿರುವ 12.00 ಚದರದ ಆರ್.ಸಿ.ಸಿ. ರೆಡಾಕ್ಸೈಡ್ ಫ್ಲೋರಿಂಗ್ ಮನೆಗೆ ಚಕ್ಕುಬಂದಿ: ಪೂರ್ವಕ್ಕೆ: 157ನೇ ನಂಬರ್ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: 149ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ: ರಸ್ತೆ.

Sd/- Ramakrishna, B.A., LL.B.
Advocate, E.No. 913 / 1990-91
#1131/1A, Dr. Ambedkar Road,
Mysore-570 005

ದಿನಾಂಕ: 31–12–2022
ಸ್ಥಳ: ಮೈಸೂರು

ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಮೈಸೂರು

ಶ್ರೀ ಹರ್ಷ ರೋಡ್, ಮೈಸೂರು–570001.

ನಿಯಮ 8(1) ಪರಿಶಿಷ್ಟ IV, ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಸೆಕ್ಯೂರಿಟೈಜೇಶನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳಸಹಿದಾರರು **ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಶ್ರೀ ಹರ್ಷ ರೋಡ್, ಮೈಸೂರು–570001.** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಓದಿಕೊಂಡಂತೆ ಕಲಂ 13(2)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಕಂಡ ಸಾಲಗಾರರುಗಳು /ಕಾನೂನುಬದ್ಧ ಉತ್ತರಾಧಿಕಾರಿಗಳಾದವರುಗಳಿಗೆ ಸಾಲವನ್ನು ಮರು ಪಾವತಿಸಲು ತಗಾದೆ ಸೂಚನೆಯನ್ನು ನೀಡಲಾಗಿತ್ತು. ಸದರಿ ಸೂಚನೆ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿ ಮಾಡಬೇಕಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರುಪಾವತಿ ಮಾಡಲಿಲ್ಲವಾದ್ದರಿಂದ ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ಕಲಂ 9 ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4) ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕಗಳಂದು ವಿವರಿಸಲಾಗಿರುವ ಸ್ವತ್ತುಗಳನ್ನು ಕೆಳಸಹಿದಾರರು ವಶಪಡಿಸಿಕೊಂಡಿರುತ್ತಾರೆ. ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನು ಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರು ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ **ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಶ್ರೀ ಹರ್ಷ ರೋಡ್, ಮೈಸೂರು–570001.,** ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕ್ರಸಂ.	ಸಾಲಗಾರರ ಹೆಸರು	ಡಿಮ್ಯಾಂಡ್ ನೋಟೀಸು ದಿನಾಂಕ	ಸ್ವಾಧೀನ ಪಡಿಸಿಕೊಂಡ ದಿನಾಂಕ	ಬಾಕಿ ಇರುವ ಮೊತ್ತ (ರೂಗಳಲ್ಲಿ)	ಸ್ಥಿರಾಸ್ತಿಗಳ ವಿವರಗಳು
1.	ಕೆ.ವಿ.ವೆಂಕಟೇಶ್ S/o ವೆಂಕಟಯ್ಯ 6321037	19.10.22	19.12.22	17,00,000	ಮೈಸೂರು ನಗರ ಸಿಎಚ್ ಮೊಹಲ್ಲಾ, ಶ್ರೀರಾಂಪುರ ಬಡಾವಣೆ, 2ನೇ ಹಂತ, ಮನೆ ನಂ 1431 ಪೂ+ಪ 6ಮೀ, ದ+ಉ 9ಮೀ, ಪೂ–1430ನೇ ಸ್ವತ್ತು, ಪ–1432ನೇ ಸ್ವತ್ತು, ದ–ರಸ್ತೆ, ಉ–1412ನೇ ಸ್ವತ್ತು.
2.	ಎಸ್.ಕಿರಣ್ S/o ಜೆ.ಶಿವರಾಂ 632952	19.10.22	19.12.22	6,09,000	ಮೈಸೂರು ನಗರ ಕೆ.ಆರ್. ಮೊಹಲ್ಲಾ, ಸುಣ್ಣದಕೇರಿ, 5ನೇ ಕ್ರಾಸ್, ಮನೆ ನಂ 1131/ಎ, 26/ಎ, ಪೂ+ಪ 23.5ಅಡಿ, ದ+ಉ 42ಅಡಿ, ಪೂ–ಖಾಸಗಿ ಸ್ವತ್ತು, ಪ–ಜವರಯ್ಯ ಮನೆ, ದ–ಖಾಸಗಿ ಸ್ವತ್ತು, ಉ–ರಸ್ತೆ
3.	ಅಕ್ಮಲ್ ಪಾಷಾ S/o ಮಹಮದ್ ಇಸ್ಮಾಯಿಲ್ 632963	19.10.22	19.12.22	2,80,000	ಮೈಸೂರು ನಗರ ಎನ್ ಆರ್ ಮೊಹಲ್ಲಾ, ಎಜಿ ಬ್ಲಾಕ್, 2ನೇ ಕ್ರಾಸ್, ಮನೆ ನಂ 22/ಎ, ಪೂ+ಪ–22.6 ಅಡಿ, ದ+ಉ–21 ಅಡಿ, ಪೂ–ರಸ್ತೆ, ಪ–ಖಾಸಗಿ ಸ್ವತ್ತು ದ–4 ಅಡಿ ಪ್ಯಾಸೇಜ್, ಉ–23 ನಂಬರಿನ ಸ್ವತ್ತು
4.	ಎನ್ ಮಂಜುಗೌಡ, ಎಸ್ ರಾಜೇಶ್ವರಿ ಪಲ್ಲವಿ ಮತ್ತು ಪ್ರವೀಣಕುಮಾರ್ 632988	19.10.22	19.12.22	7,80,000	ಮೈಸೂರು ನಗರ ನಜರಬಾದ್ ಕಾಮಟಗೇರಿ 1ನೇ ಕ್ರಾಸ್ ಮನೆ ನಂ: 554/2, ಪೂ+ಪ 17ಅಡಿ, ದ+ಉ 19ಅಡಿ, ಪೂ–ಖಾಸಗಿ ಸ್ವತ್ತು, ಪ–ಮನೆ ನಂ 554, ದ–ಕಾಮನ್ ಪ್ಯಾಸೇಜ್ ಮತ್ತು ರಸ್ತೆ, ಉ–ಕನ್ಸರ್ವೆನ್ಸಿ ಗಲ್ಲಿ
5.	ಮಹದೇವು S/o ಚಿಕ್ಕಮಾದು 632569	19.10.22	19.12.22	4,50,000	ಮೈಸೂರು ನಗರ ಎನ್.ಆರ್.ಮೊಹಲ್ಲಾ ದೇವನೂರು ಬಡಾವಣೆ 1ನೇ ಹಂತ, ಮನೆನಂ 2373, ಪೂ+ಪ–9ಮೀ, ದ+ಉ–6ಮೀ, ಪೂ–ರಸ್ತೆ, ಪ–ಮನೆ ನಂ–2334, ದ–ಮನೆ ನಂ 2374, ಉ–ಮನೆ ನಂ 2372
6.	ನೂರ್ ಪಾತಿಮಾ w/o ಅಪ್ಸರ್ ಪಾಷಾ	19.10.22	19.12.22	13,00,000	ಮೈಸೂರು ನಗರ ನಜರಬಾದ್ ಮೊಹಲ್ಲಾ ಕೆ.ಎಂ.ಹಳ್ಳಿ ಬಡಾವಣೆ (ಕ್ಯಾತಮಾರನಹಳ್ಳಿ ಬಡಾವಣೆ) ಕೆಎಚ್‌ಬಿ ಕಾಲೋನಿ, ಎಲ್‌ಐಜಿ 110, ಪೂ+ಪ–5.50ಮೀ, ದ+ಉ–10 ಮೀ, ಪೂ–ರಸ್ತೆ, ಪ–ಎಲ್‌ಐಜಿ09, ದ–ಖಾಸಗಿ ಸ್ವತ್ತು, ಉ–ರಸ್ತೆ
7.	ನಯಾಜ್ ಅಹಮದ್ S/o ಮಹಮದ್ ಷಫಿ(Mohamad shafi) Ac No: 6321019	03.08.2022	03.12.2022	35,00,000	ಮೈಸೂರು ನಗರ ಎನ್.ಆರ್.ಮೊಹಲ್ಲಾ, 4ನೇ ಮೇನ್, ಹಳೇ ಮೈಸೂರು, ಬೆಂಗಳೂರು ಪೂರ್ವದ ರಸ್ತೆ, ಮನೆ ನಂ 101, ಪೂ+ಪ 40ಅಡಿ, ದ+ಉ–30ಅಡಿ, ಪೂ–ಸೈಟ್‌ನಂ 120 ಮತ್ತು 121, ಪ–ರಸ್ತೆ, ದ–102 ನಂಬರಿನ ಸ್ವತ್ತು, ಉ–100 ನಂಬರಿನ ಸ್ವತ್ತು

ದಿನಾಂಕ: 16.01.2023
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಮೈಸೂರು